ಜನಶಕ್ತಿ

ಮಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ


Blog : janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 39 ಅಕ್ಟೋಬರ್ 02, 2011 ರೂ. 5/- ಪುಟ 16






ಮೋದಿ ಉಪವಾಸ ಬಿಜೆಪಿ ಕಿತ್ತಾಟ ವ್ಯಂಗ್ಯ ಮತ್ತು ಪ್ರಹಸನ



ಕೊಪ್ಪಳ : ಸಂದರ್ಭಸಾಧಕರಿಗೆ ಪಾಠ ಕಲಿಸಿಯಾರೆ?



ಪಾಳೆಗಾರಿ ವ್ಯವಸ್ಥೆಯನ್ನು ಮೋಹಿಸುತ್ತಲೇ ಅದರ ಒಳ ಹೊರಗನ್ನು ತೆರೆದಿಟ್ಟ

ಕಂಬಾರರಿಗೆ ಜ್ಞಾನಪೀಠ



ಲೋಕಾಯುಕ್ತರ ನಿರ್ಗಮನದ ನಂತರ

ಸಮಸ್ಯೆ ಸುಳಿಯಲ್ಲಿ ಸಾರಿಗೆ ನೌಕರರು

ದಸರಾಕ್ಕೆ ಮೋದಿ : ಬೇಡವಾದ ಅತಿಥಿ

ಶ್..... ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಮಾತಾಡ್‌ಬೇಡಿ

ವರದಿ : ಎಸ್.ಹೆಚ್.ಗುಲ್ವಾಡಿ

'ಹಜಾರೆಯವರ ಫೋಟೋ ಹಾಕ್ಬೇಕಿತ್ತು ಸರ್_' ಇದು ರೈತರೊಬ್ಬರ ಅಭಿಪ್ರಾಯ ಕೇಂದ್ರ ಸರ್ಕಾರ ಮಾಡಿದ್ದು ಮಾತ್ರ ಭ್ರಷ್ಟಾಚಾರ ಅಂತ ನಮ್ಮನ್ನು ನಂಬಿಸಿ ಎ.ಬಿ.ವಿ.ಪಿ.ಯವರು ಪದೇ ಪದೇ ನಮ್ಮನ್ನು ಕ್ಲಾಸ್ ಬಿಡಿಸಿ Strikeಗೆ ಕರ್‍ಕೊಂಡು ಹೋಗ್ತಿದ್ರು, ನೀವು ಮಾತ್ರ State and centre Govt ನ ಭ್ರಷ್ಟಾಚಾರದ ಬಗ್ಗೆ ಬರೆದಿದ್ದೀರ..... ಕಾಲೇಜು ವಿದ್ಯಾರ್ಥಿನಿಯೊಬ್ಬಳ ಪ್ರತಿಕ್ರಿಯೆ. 'ಜೆ.ಡಿ.ಎಸ್.ನ ಭ್ರಷ್ಟಾಚಾರದ ಬಗ್ಗೆ ಎಲ್ರಿ......?' ಕಾಂಗ್ರೆಸಿಗನೊಬ್ಬ ಕೇಳಿದ ಪ್ರಶ್ನೆ. 'ಕೇಂದ್ರ ಸರ್ಕಾರದ ವಿರುದ್ಧ ಮಾತ್ರ ಮಾತನಾಡಿ, ಬಿ.ಜೆ.ಪಿ. ಬಗ್ಗೆ ಇರುವ ಈ ಕರಪತ್ರ ಹಂಚುವುದನ್ನು ಕೂಡಲೇ ನಿಲ್ಲಿಸಿ....' ಕರಪತ್ರ ಹರಿದು ಹಾಕುತ್ತಾ ಎ.ಬಿ.ವಿ.ಪಿ. ಕಾರ್ಯಕರ್ತರು ಹಾಕಿದ ಧಮಕಿ........

ಇವೆಲ್ಲ ಡಿ.ವೈ.ಎಫ್.ಐ. ಹಾಸನ ಜಿಲ್ಲಾ ಸಮಿತಿ ಭ್ರಷ್ಟಾಚಾರದ ವಿರುದ್ಧ ಕರಪತ್ರ ಹಂಚುತ್ತಿದ್ದಾಗ ಕೇಳಲ್ಪಟ್ಟ ಅಭಿಪ್ರಾಯ, ಪ್ರತಿಕ್ರಿಯೆಗಳ ಜೊತೆಗೆ ಎದುರಿಸಿದ ಪ್ರಶ್ನೆ ಮತ್ತು ಧಮಕಿ (ಎಚ್ಚರಿಕೆ). ಈ ಎಲ್ಲಾ ಅಂಶಗಳಿಗೆ ಕಾರಣವಾದ ಕಾರ್ಯಕ್ರಮದ ಬಗ್ಗೆ ಒಂದೆರಡು ಮಾತು.

ಆಗ.. ಎಬಿವಿಪಿ ವಿದ್ಯಾರ್ಥಿ ಸಂಘಟನೆಯು ಜಿಲ್ಲೆಯಲ್ಲಿ 2-3 ದಿನಕ್ಕೊಮ್ಮೆ ಶಾಲಾ-ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ತರಗತಿ ಬಹಿಷ್ಕರಿಸಿ ಹೊರಬರುವಂತೆ ಕರೆನೀಡಿ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ಮಾಡುತ್ತಿತ್ತು. ಆದರೆ ಅವರು ವಿತರಿಸಿರುವ ಕರಪತ್ರ ಅಂಟಿಸಿದ ಪೋಸ್ಟರ್, ಕಟ್ಟಿದ ಬ್ಯಾನರ್‌ಗಳಲ್ಲೆಲ್ಲಾ ಕೇಂದ್ರ ಸರ್ಕಾರದ ಹಗರಣಗಳು ಮಾತ್ರ ಇವೆ. ರಾಜ್ಯ ಬಿ.ಜೆ.ಪಿ. ಸರ್ಕಾರದ ಭ್ರಷ್ಟಾಚಾರದ ಚಕಾರವೆತ್ತಿಲ್ಲ. ಈ ಬಗ್ಗೆ ಕಾಲೇಜುಗಳಲ್ಲಿ ಎಸ್.ಎಫ್.ಐ.ನ ಸಂಗಾತಿಗಳು ನೇರವಾಗಿಯೇ ಕೇಳಿದರೂ ಉಡಾಫೆಯ ಉತ್ತರ ನೀಡಿದ್ದರು.

ಭ್ರಷ್ಟಾಚಾರದಲ್ಲಿ ದೇಶದಲ್ಲೇ ಪ್ರಥಮ ಸ್ಥಾನಗಳಿಸಿದ ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳನ್ನು ವಿದ್ಯಾರ್ಥಿಗಳು ಚರ್ಚಿಸದಂತಿರಲು ಎಬಿವಿಪಿ ಸಂಘಟನೆಯು ಭ್ರಷ್ಟಾಚಾರ ವಿರೋಧಿ ಜಾಥಾ - ಆಂದೋಲನ ಎನ್ನುವ ಹೆಸರಿನಲ್ಲಿ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಕೇಂದ್ರ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತ್ರ ಹೇರುತ್ತಾ, ರಾಜ್ಯ ಬಿ.ಜೆ.ಪಿ. ಸರ್ಕಾರ ಹಗರಣಗಳೇ ನಡೆಸಿಲ್ಲ ಎನ್ನುವಷ್ಟರ ಮಟ್ಟಿಗೆ ವಿದ್ಯಾರ್ಥಿಗಳನ್ನು ಕತ್ತಲಲ್ಲಿಡಲು ಪ್ರಯತ್ನಿಸುತ್ತಿತ್ತು.

ಈ ಕಾರಣದಿಂದಾಗಿ ಡಿವೈಎಫ್‌ಐ ಹಾಸನ ಜಿಲ್ಲಾ ಸಮಿತಿ "ಭ್ರಷ್ಟರ ದುರಾಡಳಿತದ ವಿರುದ್ಧ ಜನಾಂದೋಲನ" ಎನ್ನುವ ಕಾರ್ಯಕ್ರಮವನ್ನು ಇತ್ತೀಚೆಗೆ ಜಿಲ್ಲಾದ್ಯಂತ ಸಂಘಟಿಸಿತ್ತು. ನಮ್ಮನ್ನಾಳುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭ್ರಷ್ಟಾಚಾರವನ್ನು ಸಮಾಜದ ಎಲ್ಲ ವರ್ಗದ ಜನತೆ ತಿಳಿದುಕೊಳ್ಳಬೇಕೆನ್ನುವ ಪ್ರಮುಖ ಉದ್ದೇಶವೇ ಈ ಕಾರ್ಯಕ್ರಮದ ಆಶಯವಾಗಿತ್ತು. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಗರಣಗಳ ಸಂಕ್ಷಿಪ್ತ ವಿವರಣೆಗಳನ್ನೊಳಗೊಂಡ ಸುಮಾರು ಮೂವತ್ತು ಸಾವಿರ ಕರಪತ್ರಗಳನ್ನು ಮುದ್ರಿಸಲಾಗಿತ್ತು. ಸುಮಾರು ಒಂದು ತಿಂಗಳ ಕಾಲದ ಈ ಆಂದೋಲನವನ್ನು ಆಗಸ್ಟ್ 10ರಂದು ಉದ್ಘಾಟಿಸಿ ನಗರದ ಪ್ರಮುಖ ಜನಸಂದಣಿ ಸ್ಥಳದಲ್ಲಿ, ಬಸ್ ನಿಲ್ದಾಣ, ವಾಣಿಜ್ಯ ಸಂಕೀರ್ಣಗಳಲ್ಲಿ, ಯಶಸ್ವಿಯಾಗಿ ಕರಪತ್ರಗಳನ್ನು ಹಂಚಲಾಗಿತ್ತು.

ಆಂದೋಲನದ ಸಂದರ್ಭ ದಲ್ಲಿ ರೈತರೊಬ್ಬರು ಕರಪತ್ರವನ್ನು ಎರಡೂ ಕಡೆ ತಿರುಗಿಸಿ ನೋಡಿ ಹಜಾರೆಯವರ ಫೋಟೋ ಹಾಕಬೇಕಿತ್ತು ಅಂದಾಗ ಅವರಿಗೆ ಕರಪತ್ರದಲ್ಲಿರುವ ಭಗತ್‌ಸಿಂಗ್ ಚಿತ್ರವನ್ನು ತೋರಿಸಿ ಸಮಾಧಾನವಾಗುವ ಉತ್ತರ ನೀಡಲಾಗಿತ್ತು. ಕರಪತ್ರದಲ್ಲಿ ಕಾಂಗ್ರೆಸ್ ಬಿ.ಜೆ.ಪಿ ಭ್ರಷ್ಟಾಚಾರದ ಬಗ್ಗೆ ಮಾತ್ರ ಇದೆ. ಜೆಡಿಎಸ್‌ನ ಬಗ್ಗೆ ಏನೂ ಇಲ್ಲದಿದ್ದನ್ನು ಸಾರ್ವಜನಿಕರಲ್ಲೊಬ್ಬರು ಬಾರವಾಗಿ ಪ್ರಶ್ನಿಸಿದ್ದರು. ಸದ್ಯ ನಮ್ಮನ್ನಾಳುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಜನರಿಗೆ ತಿಳಿಸಬೇಕಾದ ತುರ್ತು ಅಗತ್ಯದ ಬಗ್ಗೆ ಅವರಿಗೆ ಮನದಟ್ಟುಮಾಡಿ, ಈ ಹಿಂದೆ ಜೆಡಿಎಸ್‌ನ ಭ್ರಷ್ಟಾಚಾರದ ಬಗ್ಗೆಯೂ ಪ್ರತಿಭಟನೆ ಮಾಡಿದ ಬಗ್ಗೆ ಉದಾಹರಣೆಗಳನ್ನು ನೀಡಲಾಗಿತ್ತು.

ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಚಕಾರವೆತ್ತದ ಎಬಿವಿಪಿಯ ಧೋರಣೆಯ ಬಗ್ಗೆ ಬೇಸರಗೊಂಡ ವಿದ್ಯಾರ್ಥಿನಿಯೊಬ್ಬಳು ಸಹಜವಾಗಿಯೇ ಈ ಕರಪತ್ರದ ಮೆಚ್ಚುಗೆ ವ್ಯಕ್ತಪಡಿಸಿದ್ದಳು. ಇಂತಹ ಮೆಚ್ಚುಗೆಯ ಪ್ರಶಂಸೆ, ಪ್ರತಿಕ್ರಿಯೆ ಕೆಲವು ಕಾಲೇಜುಗಳಲ್ಲದೆ ಸಾರ್ವಜನಿಕರಿಂದಲೂ ಕೇಳಿ ಬಂದಿತ್ತು.

ನುಂಗಲಾರದ ತುತ್ತು

ಆಗ್ಗಾಗಲೇ ಶಾಲಾ-ಕಾಲೇಜು ಸೇರಿದಂತೆ ಸಾರ್ವಜನಿಕರ ಕೈ ಸೇರಿರುವ ಈ ಕರಪತ್ರದ ಬಗ್ಗೆ ಬಿಜೆಪಿ ಸೇರಿದಂತೆ ಅದರ ಇತರೆ ಸಂಘಟನೆಗಳಲ್ಲಿ ಬಿಸಿ ಚರ್ಚೆಗೆ ಕಾರಣವಾಗಿತ್ತಲ್ಲದೆ, ಕರಪತ್ರ ನುಂಗಲಾರದ ತುತ್ತಾಗಿತ್ತು. ಡಿವೈಎಫ್‌ಐ ಕಾರ್ಯಕರ್ತರ ಆಂದೋಲನ 7ನೇ ದಿನಕ್ಕೆ ಪಾದಾರ್ಪಣೆ ಮಾಡಿದ ದಿನವೇ ಅಣ್ಣಾಹಜಾರೆಯವರ ಹೋರಾಟ ಆರಂಭವಾಯಿತು. ಅವರ ಬೆಂಬಲಿಗರೆನಿಸಿಕೊಂಡವರು ಸಹಾ ಅಲ್ಲಲ್ಲಿ ಪ್ರತಿಭಟನೆ ಮಾಡಿದಂತೆಯೇ ಹಾಸನದಲ್ಲೂ ವಿವಿಧ ಸಂಘಟನೆಗಳು ಸತ್ಯಾಗ್ರಹ ನಡೆಸುತ್ತಿದ್ದರು. ಪ್ರತಿಭಟನೆಗೆ ಬೆಂಬಲನೀಡಿ ಭಾಗವಹಿಸುತ್ತಿದ್ದ ಬೇರೆ ಬೇರೆ ಸಂಘಟನೆಗಳ ಕಾರ್ಯಕರ್ತರಿಗೆ ಡಿವೈಎಫ್‌ಐ ಸದಸ್ಯರು ಈ ಕರಪತ್ರ ಹಂಚುತ್ತಿದ್ದರು. ಸಂದರ್ಭೋಚಿತವಾಗಿರುವ ಈ ಕರಪತ್ರದ ಬಗ್ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಇದೇ ರೀತಿ ಸತ್ಯಾಗ್ರಹ ಸ್ಥಳದಲ್ಲಿ ಕರಪತ್ರ ಹಂಚುತ್ತಿದ್ದ ಸಂದರ್ಭದಲ್ಲಿ ಎಬಿವಿಪಿ ಕಾರ್ಯಕರ್ತರು ಡಿವೈಎಫ್‌ಐ ಕಾರ್ಯಕರ್ತರಿಂದ ಕರಪತ್ರ ಪಡೆದುಕೊಂಡು ಅಲ್ಲಿಯೇ ಹರಿದು ಹಾಕುತ್ತಿದ್ದರು. ಇದನ್ನು ಗಮನಿಸಿದ ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ.ಜಿ.ಗಿರೀಶ್ ಪ್ರಶ್ನಿಸುವಾಗಲೇ ಸುತ್ತುವರಿದ ಎಬಿವಿಪಿಯ ಹಲವಾರು ಕಾರ್ಯಕರ್ತರು "ಕೇಂದ್ರ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತ್ರ ಮಾತನಾಡಿ, ಈ ಕರಪತ್ರ ಹಂಚುವುದನ್ನು ಕೂಡಲೇ ನಿಲ್ಲಿಸಿ" ಎಂದು ಕೂಗಾಡಿದರು. ಧರಣಿ ಸತ್ಯಾಗ್ರಹದಲ್ಲಿ



ಭಾಗವಹಿಸಿದ್ದ ಹಿರಿಯ ಮುಖಂಡರು ಈ ಘಟನೆಯನ್ನು ಗಮನಿಸಿ ಕೂಡಲೇ ಕೂಗಾಡಿದ ಕಾರ್ಯಕರ್ತರನ್ನು ಹೊರಕಳಿಸಿದರು.

ಡಿವೈಎಫ್‌ಐ ಪದಾಧಿಕಾರಿಗಳ ಸಭೆ ಘಟನೆಯನ್ನು ಖಂಡಿಸಿದಲ್ಲದೆ, ಇನ್ನು ಹೆಚ್ಚು ಸದಸ್ಯರ ತಂಡದೊಂದಿಗೆ ಕರಪತ್ರವನ್ನು ವಿತರಿಸಿ ಆಂದೋಲನ ಯಶಸ್ವಿಗೊಳಿಸುವ ಬಗ್ಗೆ ನಿರ್ಧಾರ ಮಾಡಿತು. ಅದೇ ದಿನ ಸಂಜೆ ನಗರದಲ್ಲಿ ಬೃಹತ್ ಪಂಜಿನ ಮೆರವಣಿಗೆ ಸಾಗುತ್ತಿದ್ದಾಗ ರಸ್ತೆಯ ಇಕ್ಕೆಲಗಳಲ್ಲಿ ನಿಂತು ವೀಕ್ಷಿಸುತ್ತಿದ್ದ ಸಾರ್ವಜನಿಕರಿಗೆ ಸುಮಾರು 5 ಸಾವಿರಕ್ಕೂ ಮಿಕ್ಕಿ ಕರಪತ್ರ ಹಂಚುತ್ತಾ ಗೊಡ್ಡು ಬೆದರಿಕೆಗೆ ಮಣಿಯುವ ಅಥವಾ ಭಯಪಡುವ ಪ್ರಶ್ನೆಯೇ ಇಲ್ಲ. ಕರಪತ್ರ ಹಂಚಿಕೆ ಜಿಲ್ಲೆಯಾದ್ಯಂತ ಇದೇ ರೀತಿ ಮುಂದುವರಿಯಲಿದೆ ಎಂದು ಘೋಷಿಸಲಾಯಿತು.

ಕೇಂದ್ರ ಸರ್ಕಾರದ ಹಗರಣಗಳನ್ನು ಮಾತ್ರ ಹೇಳಿ ರಾಜ್ಯ ಬಿಜೆಪಿ ಮುಖಂಡರ ಹಗರಣಗಳ ಬಗ್ಗೆ ಕರಪತ್ರ ಹಂಚಬೇಡಿ ಎಂದರೆ ಅರ್ಥವೇನು? ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಭೂ ಹಗರಣ, ಡಿ. ನೋಟಿಫಿಕೇಷನ್, ಕೆಐಎಡಿಬಿ ಹಗರಣ, ಮೆಡಿಕಲ್ ಕಾಲೇಜು ಹಗರಣ, ಅಕ್ರಮ ಗಣಿಗಾರಿಕೆ... ಇವುಗಳು ಭ್ರಷ್ಟಾಚಾರ ಅಲ್ಲವೆ? ಈ ಎಲ್ಲ ಪ್ರಕರಣಗಳಲ್ಲಿ ರಾಜ್ಯ ಬಿಜೆಪಿ ಮುಖಂಡರಿಗೆ ಸಾಲುಸಾಲಾಗಿ ತಲುಪುತ್ತಿರುವ ಸಮನ್ಸ್, ವಾರಂಟ್‌ಗಳಲ್ಲದೆ ಅನುಭವಿಸುತ್ತಿರುವ ಜೈಲು ವಾಸಗಳು ಹಗರಣಗಳಿಗೆ ಸಾಕ್ಷಿಗಳಲ್ಲವೇ? ಇಂತಹ ಬ್ರಹ್ಮಾಂಡ ಭ್ರಷ್ಟಾಚಾರವನ್ನು ವಿದ್ಯಾರ್ಥಿಗಳಿಂದ ಮುಚ್ಚಿಡುವ ಕೆಲಸ ಎಬಿವಿಪಿಯವರು ಯಾಕೆ ಮಾಡುತ್ತಿದ್ದಾರೆ? ಇವರ ನಿಜವಾದ ಉದ್ದೇಶ ಏನು?

ಭಯೋತ್ಪಾದನೆ ಬಗ್ಗೆಯೂ ಸತ್ಯಬೇಕಿಲ್ಲ!

ಈ ಹಿಂದೆ ಇದೇ ವಿದ್ಯಾರ್ಥಿ ಸಂಘಟನೆಯು "ಭಯೋತ್ಪಾದನಾ ವಿರೋಧಿ ಜಾಥಾ" ಎನ್ನುವ ಹೆಸರಿನಲ್ಲಿ ರಾಜ್ಯದ ಶಾಲಾ-ಕಾಲೇಜುಗಳಲ್ಲಿ ಆಂದೋಲನ ನಡೆಸಿ ಭಯೋತ್ಪಾದನೆಗೆ ನಿರ್ದಿಷ್ಟ ಕೋಮು ಕಾರಣ ಎಂದು ವಿದ್ಯಾರ್ಥಿಗಳಲ್ಲಿ ವಿಷಬೀಜ ಬಿತ್ತಿ ಒಂದು ಕೋಮಿನ ವಿದ್ಯಾರ್ಥಿ ಇನ್ನೊಂದು ಕೋಮಿನ ವಿದ್ಯಾರ್ಥಿಯನ್ನು ಅನುಮಾನದಿಂದ ನೋಡುವಂತೆ ಮಾಡಿದ್ದರು. ಎಬಿವಿಪಿಯ ರಾಷ್ಟ್ರೀಯ ಮುಖಂಡರಾದ ಪ್ರಜ್ಞಾಸಿಂಗ್ ಠಾಕೂರ್ ಮಾಲಗಾಂವ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿಯಾಗಿ ಜೈಲಿನಲ್ಲಿದ್ದರೂ ಅದನ್ನು ಮರೆಮಾಚುತ್ತಾ ವಿದ್ಯಾರ್ಥಿಗಳ ನಡುವೆ ಇಂತಹ ಆಂದೋಲನ ನಡೆಸಿದ್ದನ್ನು ಎಸ್‌ಎಫ್‌ಐ-ಡಿವೈಎಫ್‌ಐ ಸಂಘಟನೆ ಪ್ರಬಲವಾಗಿ ವಿರೋಧಿಸಿತ್ತು. ನಿರ್ದಿಷ್ಟ ಸ್ಥಳದಲ್ಲಿ ನಡೆದ ಮತ್ತು ನಿರ್ದಿಷ್ಟ ಕೋಮು ನಡೆಸಿದ ಬಾಂಬ್ ಸ್ಫೋಟ ಮಾತ್ರ ಭಯೋತ್ಪಾದನೆಯಲ್ಲ, ಯಾವುದೇ ಸ್ಥಳದಲ್ಲಿ ಯಾವುದೇ ಧಾರ್ಮಿಕ ಹಿನ್ನೆಲೆಯ ವ್ಯಕ್ತಿ ಬಾಂಬ್ ಸ್ಫೋಟದಂತ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಭಯೋತ್ಪಾದಕಾಗುತ್ತಾನೆ(ಳೆ) ವಿನಹ ದೇಶಪ್ರೇಮಿಯಾಗಿರುವುದಿಲ್ಲ. ಈ ಬಗೆಗಿನ ಎ.ಬಿ.ವಿ.ಪಿ.ಯ ದ್ವಿಮುಖ ಧೋರಣೆ ವಿರುದ್ಧ ಡಿವೈಎಫ್‌ಐ-ಎಸ್‌ಎಫ್‌ಐ ಪ್ರತಿಭಟನೆ ನಡೆಸಿದೆಯೇ ವಿನಹ ಭಯೋತ್ಪಾದನಾ ವಿರೋಧಿ ಜಾಥಾದ ವಿರುದ್ಧ ಅಲ್ಲ.

ಭಯೋತ್ಪಾದನೆ ಮತ್ತು ಭ್ರಷ್ಟಾಚಾರಕ್ಕೆ ಯಾವುದೇ ಧರ್ಮ, ಜಾತಿ, ಭೇದ ಇಲ್ಲವೆನ್ನುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇದನ್ನು ಯಾರೇ ಮಾಡಿದರೂ ಶಿಕ್ಷಾರ್ಹ ಅಪರಾಧವೇ. ತಮ್ಮವರ ಕೃತ್ಯಗಳನ್ನು ಬಚ್ಚಿಟ್ಟುಕೊಂಡು ಪರರನ್ನು ಮಾತ್ರ ದೂಷಿಸುವ ಎಬಿವಿಪಿಯವರ ಧೋರಣೆ ತಮ್ಮ ಮಾತೃಪಕ್ಷವನ್ನು ಸಂತೋಷಗೊಳಿಸಬಹುದಷ್ಟೆ, ವಿದ್ಯಾರ್ಥಿಗಳನ್ನಲ್ಲ.

ಶಾಂತಿ ಸೌಹಾರ್ದತೆ ಸಾರಿದ ಕುವೆಂಪು ರವರ ಕವನದ ಸಾಲುಗಳನ್ನಾಗಲಿ, ಅಥವಾ ಭ್ರಷ್ಟ ವ್ಯವಸ್ಥೆ ವಿರುದ್ಧ ಹೋರಾಡಿದ ಕ್ರಾಂತಿಕಾರಿಗಳ ಘೋಷಣೆಗಳನ್ನಾಗಲಿ ಡಿವೈಎಫ್‌ಐ-ಎಸ್‌ಎಫ್‌ಐ ಸಂಘಟನೆಗಳು ಗೋಡೆ ಬರಹ ಮುಖಾಂತರ ಜನಜಾಗೃತಿ ಗೊಳಿಸುವ ವ್ಯವಸ್ಥೆ ಮಾಡಿದರೂ ಅದನ್ನು ಸಹಿಸಲಾಗದೆ ಕಪ್ಪುಮಸಿ ಬಳಸಿ ಅಳಿಸಿ ಹಾಕಿದಾಗಲೇ ಇಂತಹ ಸಂಘಟನೆಯ ಯೋಗ್ಯತೆ ಹಾಸನದ ಪ್ರಜ್ಞಾವಂತ ಜನರಿಗೆ ಗೊತ್ತಾಗಿತ್ತು. ✩

ಸಂಪಾದಕೀಯ

ಮೋದಿ: ಬೇಡವಾದ 'ಅತಿಥಿ'

ನಾಡಹಬ್ಬವಾದ ಪ್ರಖ್ಯಾತ ಮೈಸೂರು ದಸರಾ ಉತ್ಸವದ ವೀಕ್ಷಣೆಗೆ ಗುಜರಾತ್‌ನ ಕುಖ್ಯಾತ ಮುಖ್ಯಮಂತ್ರಿ ನರೇಂದ್ರಮೋದಿಯೆಂಬ ಗೋಮುಖ ವ್ಯಾಘ್ರನನ್ನು ಕರ್ನಾಟಕ ಮುಖ್ಯಮಂತ್ರಿ ಸದಾನಂದಗೌಡರವರು ಆಹ್ವಾನಿಸಿರುವುದು ಖಂಡನೀಯ.

'ಸದ್ಭಾವನಾ ಉಪವಾಸ'ವೆಂಬ ವಂಚನೆಯ ಪ್ರಹಸನವು ಏರ್ಪಟ್ಟಿರುವಾಗ ಅಲ್ಲಿಗೆ ಧಾವಿಸಿದ್ದ ಸದಾನಂದಗೌಡ ಹಾಗೂ ರಾಮದಾಸ್‌ರವರು ಆಗಲೇ ಆಹ್ವಾನ ನೀಡಿರುವುದಾಗಿ ಹೇಳಿದ್ದಾರೆ. ಸಚಿವ ರಾಮದಾಸ್ ಮೋದಿಯನ್ನು ತನ್ನ ಗುರುವೆಂದೂ, ಸಂಸದ ಜಾಫ್ರಿ ಕೊಲೆ ಘಟನೆಯ ಕೇಸ್‌ನಲ್ಲಿ ಸುಪ್ರೀಂಕೋರ್ಟ್‌ನ ನಿರ್ದೇಶನವನ್ನೇ ತಿರುಚಿ ವ್ಯಾಖ್ಯಾನಿಸುತ್ತಿರುವುದು ಹೇಸಿಗೆ ತರುವ ವಿಚಾರವಾಗಿದೆ.

ಮೈಸೂರು ದಸರಾ, ತನ್ನ ಸಾಂಸ್ಕೃತಿಕ ವೈಭವ, ಸೌಹಾರ್ದತಾ ಅಂಶಗಳಿಂದ ದೇಶ ವಿದೇಶಗಳಲ್ಲಿ ಪ್ರಖ್ಯಾತಿ ಪಡೆದಿದೆ, ಮತ್ತು ಎಲ್ಲೆಡೆಗಳಿಂದ ಜನ ಅದರ ವೀಕ್ಷಣೆಗೆ ಬರುವುದು ದಶಕಗಳಿಂದಲೂ ನಡೆದು ಬಂದ ಪ್ರತೀತ. ಎಲ್ಲಾ ಜಾತಿ, ಧರ್ಮೀಯರೂ, ಭಾಷಿಕರು ಸೇರಿ ಆಚರಿಸುವ ಈ ಉತ್ಸವ ಸೌಹಾರ್ದತೆಗೆ ಒಂದು ಒಳ್ಳೇ ಉದಾಹರಣೆ ಕೂಡ. ಜನಪದ ಉತ್ಸವಗಳ ಅಂತಃಸತ್ವವೇ ಇಲ್ಲಿ ಪ್ರಧಾನ ಅಂಶವಾಗಿದೆ. ಹಿಂದೆ ಮೈಸೂರು ಮಹಾರಾಜರು ಈಗ ಸರ್ಕಾರ ಪ್ರಾಯೋಜಿತವಾದ ಉತ್ಸವವಾದರೂ, ಅದರ ಸಾಂಸ್ಕೃತಿಕ ವೈಶಿಷ್ಠತೆ, ಜನರ ಭಾಗವಹಿಸುವಿಕೆಯಲ್ಲಿ ಸ್ಫೂರ್ತಿ ಕಳೆದುಕೊಂಡಿಲ್ಲ. ಅಷ್ಟು ಮಾತ್ರವಲ್ಲ. ಏನೆಲ್ಲಾ ಕೋಮುವಾದಿಗಳ, ಭಯೋತ್ಪಾದಕರ ಹಲವು ಯತ್ನಗಳು ನಡೆದರೂ ಒಟ್ಟಾರೆ ಕರ್ನಾಟಕ ಶಾಂತಿ, ಸೌಹಾರ್ದತೆ-ಕೋಮುಸಾಮರಸ್ಯದ ತನ್ನ ಪರಂಪರೆಯನ್ನು ಬಿಟ್ಟುಕೊಟ್ಟಿಲ್ಲ. ಹೀಗಿರುವಾಗ ಇಂತಹ ಸೌಹಾರ್ದ ಸಂಸ್ಕೃತಿಯ ದಸರಾಕ್ಕೆ ಅದರಲ್ಲೂ ಸರಕಾರದ ಅತಿಥಿಯಾಗಿ ಕರ್ನಾಟಕಕ್ಕೆ ಜನಾಂಗೀಯ ಹತ್ಯೆಯ ಕಳಂಕ ಮೆತ್ತಿಕೊಂಡ ಫ್ಯಾಶಿಸ್ಟ್ ಮೋದಿಯನ್ನು ಆಹ್ವಾನಿಸುತ್ತಿರುವುದು ಜನತೆಗೆ ಮಾಡಿದ ಅವಮಾನವಾಗಿದೆ. ಸದಾನಂದ ಗೌಡರಿಗಾಗಲೀ, ಸಚಿವ ರಾಮದಾಸ್‌ರವರಿಗಾಗಲಿ, 'ಮೋದಿ ಮಾದರಿ'ಯಿಂದ ರೋಮಾಂಚಿತ ವಾಗಿದ್ದಲ್ಲಿ, ವೈಯಕ್ತಿಕವಾಗಿ ಆರಾಧಿಸಿಕೊಳ್ಳಲಿ ಬದಲಾಗಿ ದೇಶ-ವಿದೇಶಗಳಲ್ಲಿ ಕುಖ್ಯಾತನಾಗಿರುವ ಅಮೇರಿಕಾ ದೇಶವೇ ವೀಸಾ ನೀಡಲು ಅಂದು ನಿರಾಕರಿಸಿರುವಾಗ ಕರ್ನಾಟಕಕ್ಕೆ ಅತಿಥಿಯಾಗಿ ಬರಲು ಅರ್ಹತೆಯೇ ಇಲ್ಲ.


ಭ್ರಷ್ಟಾಚಾರ, ಅಕ್ರಮ-ಹಗರಣಗಳಿಂದಾಗಿ ನಿರ್ಗಮಿಸಿದ ಮಾಜಿ ಮುಖ್ಯಮಂತ್ರಿಯಂತೆ ಈಗಿನ ಮುಖ್ಯಮಂತ್ರಿಗಳೂ ಸಹ ಕರ್ನಾಟಕವನ್ನು ಗುಜರಾತ್‌ನ್ನಾಗಿಸಲು, ಅದೇ ಮಾದರಿ ಎಂದು ಹೇಳಿರುವುದು ಹಾಸ್ಯಾಸ್ಪದ. ಮೋದಿ ಮಾದರಿ ಅಭಿವೃದ್ಧಿಯ ಬಗ್ಗೆ ಅದೇನಿದ್ದರೂ ಮಾಧ್ಯಮಗಳು ರಾಚಿದ ರಂಗು ಅಷ್ಟೇ. ಅದು ಜನರ ಉತ್ಸವವಾಗಬೇಕಾಗಿದೆಯಾದರೂ (ಈ ಸಂಚಿಕೆಯಲ್ಲಿ ಲೇಖನದಲ್ಲಿ ವಿವರಗಳಿವೆ) ಭ್ರಷ್ಟಾಚಾರದಲ್ಲಿಯೂ ಅದು ಹಿಂದೆ ಬಿದ್ದಿಲ್ಲ. ಒಂದು ಅಂದಾಜಿನಂತೆ ಮೋದಿ ಆಡಳಿತದಲ್ಲೇ 24 ಸಾವಿರ ಕೋಟಿ ರೂಪಾಯಿಗಳ ಅವ್ಯವಹಾರ ನಡೆದರೂ ಅದರ ತನಿಖೆಯಿಲ್ಲ. ಎಂಟು ವರುಷಗಳಾದರೂ ಲೋಕಾಯುಕ್ತ ಸಂಸ್ಥೆಗೆ ಲೋಕಾಯುಕ್ತರನ್ನೇ ನೇಮಿಸಲಿಲ್ಲ! ಆರ್.ಎಸ್.ಎಸ್.ನ ಕೋಮುವಾದಿ ಫ್ಯಾಶಿಸ್ಟ್ ಅಜೆಂಡಾ ಜಾರಿಯಂತೆ 2002ರಲ್ಲಿ ಗೋಧ್ರಾ ದುರ್ಘಟನೆಯನ್ನೇ ನೆಪವಾಗಿರಿಸಿಕೊಂಡು ಸರ್ಕಾರಿ ಪ್ರಾಯೋಜಿತವಾದ 'ಪ್ರೋಗ್ರಾಂ ನಲ್ಲಿ ಮೂರು ಸಾವಿರಕ್ಕಿಂತ ಅಧಿಕ ಮುಸ್ಲಿಂ ಅಲ್ಪಸಂಖ್ಯಾತರ ಕಗ್ಗೊಲೆ, ಅಪಾರ ಆಸ್ತಿ-ನಾಶ, ದೈಹಿಕ ಧಾಳಿ-ಅತ್ಯಾಚಾರ ಹಿಂಸಾಕಾಂಡ ವ್ಯವಸ್ಥಿತವಾಗಿ ನಡೆದು ಹೋಯಿತು. ಇಲ್ಲಿವರೆಗೂ ಇದರ ನಿಷ್ಪಕ್ಷಪಾತವಾದ ವಿಚಾರಣೆಯೂ ಇಲ್ಲ. ಪ್ರತಿ ವಿಚಾರಣಾ ಸಮಿತಿಗಳ ಮುಂದೆ ಸತ್ಯ ಹೊರಬರದಂತೆ ಸಾಕ್ಷಿ ನಾಶ, ಬುಡಮೇಲುಗೊಳಿಸುವ ಕೃತ್ಯಗಳಲ್ಲೇ ಮೋದಿ ನಿರತವಾಗಿರುವುದು, ರಾಷ್ಟ್ರೀಯ ಆಯೋಗಗಳಿಂದ ಛೀಮಾರಿ ಯಾಗಿರುವುದು. ಈಗಲೂ ಸಂಸದ ಜಾಫ್ರಿಯವರ ಕಗ್ಗೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಕೆಳಹಂತಗಳ ನ್ಯಾಯಾಲಯದಲ್ಲಿ ವಿಚಾರಣೆಗೆ ಸೂಚಿಸಿದೆಯೇ ಹೊರತು ಮೋದಿಯನ್ನು ಖುಲಾಸೆಗೊಳಿಸಿಲ್ಲ. ಇದನ್ನೇ ತನಗೆ ನೀಡಿದ ಸರ್ಟಿಫಿಕೇಟ್ ಎಂದು ಹೇಳಿಕೊಂಡು ತಿರುಗುತ್ತಿರುವುದು ಫ್ಯಾಶಿಸ್ಟ್ ಗುಣಕ್ಕೆ ತಕ್ಕುದೇ ಆಗಿದೆ! ಇಂತಹ ಮೋದಿ ಕರ್ನಾಟಕಕ್ಕೆ ಅತಿಥಿಯಾಗಲು ಯಾವ ಅರ್ಹತೆ ಇದೆ.

ಇದೀಗ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರಿಗೆ ಜನ, ದೇಶದ ಹಿತ ಚಿಂತನೆಗಿಂತ 2014ರ ಲೋಕಸಭಾ ಚುನಾವಣೆಯ ಚಿಂತೆ ಆವರಿಸಿದೆ. ಈಗಾಗಲೇ ಪ್ರಧಾನಿ ಪಟ್ಟಕ್ಕೆ

ಪುಟ 4 ಕ್ಕೆ

ಲೋಕಾಯುಕ್ತರ ನಿರ್ಗಮನದ ನಂತರ....

ಆ ಕುರ್ಚಿಯಲ್ಲಿ ಕುಳಿತು ಇನ್ನೂ ಆರು ತಿಂಗಳಾಗಿರಲಿಲ್ಲ. ಆವಾಗಲೇ ಅದನ್ನು ಖಾಲಿ ಮಾಡಬೇಕಾಗಿ ಬಂದದ್ದು, ಸಂದರ್ಭದ ಗಂಭೀರತೆಯೇ ಸರಿ. ಗಣಿ ಹಾಗೂ ಭೂ ಮಾಫಿಯಾಗಳ ಅಕ್ರಮ, ಹಗರಣಗಳ ಬಗ್ಗೆ ಅತ್ಯಂತ ಸ್ಫೋಟಕ ವರದಿಯನ್ನು ನೀಡಿ 'ಲೋಕಾಯುಕ್ತ ಸಂಸ್ಥೆ'ಗೆ ಹೆಚ್ಚಿನ ಅರ್ಥವಂತಿಕೆ, ಹೊಣೆಗಾರಿಕೆಯನ್ನು ತಂದುಕೊಟ್ಟ ತಂಡದ ನಾಯಕರಾಗಿದ್ದ ನ್ಯಾ.ಸಂತೋಷ ಹೆಗಡೆಯವರ ನಿವೃತ್ತಿಯಾದ ಸ್ಥಾನಕ್ಕೆ ನ್ಯಾ.ಶಿವರಾಜಪಾಟೀಲರ ನೇಮಕವು ಅವರ ಮುಂದಿನ ಕಾರ್ಯಭಾರಗಳಿಂದ ಅತ್ಯಂತ ಮಹತ್ವವನ್ನು ಸಹಜವಾಗಿ ಸೃಷ್ಟಿಸಿತ್ತು. ಅವರು ಮಾಡಬೇಕಾದದ್ದು ನೂರೆಂಟಿದ್ದವು. ಭ್ರಷ್ಟರ ವಿರುದ್ಧ, ಈಗಾಗಲೇ ಕ್ರಮಕ್ಕಾಗಿ ಕಾದು ಕುಳಿತ ಹಲವಾರು ವರದಿಗಳನ್ನನುಸರಿಸಿ ಕಾನೂನಿನ ಬಂದೂಕಿನಿಂದ ಗುಂಡು ಹೊಡೆಯಬೇಕಿತ್ತು. ಆದರೆ ಕೋವಿ ಕೈಗೆತ್ತಿಕೊಳ್ಳುವ ಮೊದಲೇ ಅವರ ಹೃದಯಕ್ಕೆ ಗುಂಡು ಬಿದ್ದಿದೆ. ಅದು ವ್ಯಕ್ತಿತ್ವಕ್ಕೆ, ನೈತಿಕತೆಗೆ ಕಳಂಕದ ಮಸಿಯನ್ನು ಹಚ್ಚಿದೆ. ಹೀಗಾಗಿ ನ್ಯಾ.ಪಾಟೀಲರು ಲೋಕಾಯುಕ್ತ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ನಿರ್ಗಮಿಸಿದ್ದಾರೆ.



ಸರಿಯಾದ ಕ್ರಮ

ಇದು ಅತ್ಯಂತ ಒಳ್ಳೇ ನಿರ್ಧಾರ. ಸಾರ್ವಜನಿಕ ಸೇವಕರು ಎಸಗುವ ಹಗರಣ, ಭ್ರಷ್ಟಾಚಾರದ ಆರೋಪಗಳನ್ನು ತನಿಖೆಗೊಳಪಡಿಸಿ, ಶಿಕ್ಷೆಗೆ ಶಿಫಾರಸ್ಸು ಮಾಡಬೇಕಾದ ಅವರೇ ಆರೋಪಕ್ಕೆ ಗುರಿಯಾದಾಗ ಲೋಕಾಯಕ್ತರ ಘನತೆ, ಕಳಂಕರಹಿತತೆಯನ್ನು ಎತ್ತಿಹಿಡಿಯ ಬೇಕಾದ್ದು, ಅನಿವಾರ್ಯ, ಅವರ ಮೇಲಿನ ಆರೋಪಗಳನ್ನು ನ್ಯಾ.ಪಾಟೀಲರು ಒಪ್ಪಿಕೊಂಡಿಲ್ಲವಾದರೂ, ಸ್ಥಾನದ ಹೊಣೆ-ಸೂಕ್ಷ್ಮತೆ ಅರಿತೇ ರಾಜೀನಾಮೆ ಸಲ್ಲಿಸಿರುವುದಾಗಿ ಹೇಳಿದ್ದಾರೆ. ಬೇರೆ ದಾರಿ ಇರಲಿಲ್ಲ ಎಂಬುದು ನಿಜ. ಇದು ತಕ್ಕದಾದ ನಡತೆ.

ಯಡ್ಡಿ...ಎದೆಗಾರಿಕೆ

ಆದರೆ .....? ಈ ಪ್ರಸಂಗಕ್ಕೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಪ್ರತಿಕ್ರಿಯೆ ಹೇಗಿತ್ತು? "ಇಷ್ಟಕ್ಕೆಲ್ಲಾ ರಾಜೀನಾಮೆ ಯಾಕೆ ಕೊಡಬೇಕಿತ್ತು? ಜಗತ್ತಿನಲ್ಲಿ ನಿಂದಕರು ಇರುತ್ತಾರೆ ಅದಕ್ಕೆಲ್ಲಾ ಹೆದರಬೇಕೇ?" ನೂರೆಂಟು ಹಗರಣಗಳಲ್ಲಿ ಮುಳುಗೇಳುತ್ತಾ, ದಿನವೂ ನ್ಯಾಯಾಲಯದ ಮೆಟ್ಟಿಲು ಹತ್ತಿ ಇಳಿಯುತ್ತಾ, ಕೇಂದ್ರ ಕಾರಾಗೃಹದ ಅತಿಥಿಯಾಗುವ ದಿನಕ್ಕೆ ಕಾಯುತ್ತಾ ಇರುವ ಯಡಿಯೂರಪ್ಪನವರು ಇಂತಹ ಮಾತನ್ನಾಡದೇ ಬೇರೇನೂ ಆಡಿಯಾರು? ತಮ್ಮಂತೆ ಭಂಡತನ ತೋರಲಿ ಎಂದ ಅವರ ಹಾರೈಕೆ! 'ಎಲ್ಲರೂ ತಿಂದಿದ್ದಾರೆ, ನಾನೊಬ್ಬನೆಂತೇ' ಎಂದೇ ಅವರ ಭಂಡತನವನ್ನೇ ಆ ವಾದ ವಿಸ್ತರಿಸುತ್ತದೆ.

ನೈತಿಕ ಕುಸಿತ

ನ್ಯಾ.ಶಿವರಾಜ್‌ಪಾಟೀಲರು ಮತ್ತು ಪತ್ನಿ ಶ್ರೀಮತಿ ಅನ್ನಪೂರ್ಣರವರು ವಸಂತನಗರದಲ್ಲಿ ಒಂದು ಮನೆಯಿರುವಾಗಲೇ ಸಹಕಾರಿ ಸಂಘದ ನಿಯಮ ಉಲ್ಲಂಘಿಸಿ ಎರಡು ಗೃಹ ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದಾರೆ ಎಂಬುದು ಅವರ ಮೇಲಿರುವ ಆರೋಪ. ವೈಯಾಲಿಕಾವಲ್‌ನ ಸಹಕಾರಿ ಸಂಘದಲ್ಲಿ ಅಲ್ಲಿನ ನಿಯಮದಂತೆ ನಿವೇಶನ ಖರೀದಿಸಲಾಗಿದೆಯೆಂದೂ, ನ್ಯಾಯಾಂಗ ನೌಕರರ ಸಂಘದಿಂದ ಮತ್ತೊಂದು ನಿವೇಶನ ಹಂಚಿಕೆಯಾಗಿದ್ದ ಇತರೆ ನ್ಯಾಯಮೂರ್ತಿಗಳಿಗೆ ಸಿಕ್ಕಿರುವಂತೆ ತಮಗೂ ಸಿಕ್ಕಿದೆ ಎಂದು ಅವರು ಹೇಳುತ್ತಾರೆ. ಸುಪ್ರೀಂಕೋರ್ಟ್ ವರೆಗೂ ಆ ಕ್ರಮಗಳನ್ನು ಎಲ್ಲಾ ಅದನ್ನು ಎತ್ತಿ ಹಿಡಿದಿವೆ ಎನ್ನುತ್ತಾರೆ. ಆದರೆ ಒಂದು ಹಂತದಲ್ಲಿ ನ್ಯಾಯಮೂರ್ತಿಗಳೇ ನಿಯಮಗಳು ತಮಗೆ ಗೊತ್ತಿರಲಿಲ್ಲ' ಎಂಬುದು ವಿಚಿತ್ರವಾಗಿ ಕಾಣುತ್ತದೆ. ಒಂದಂತೂ ನಿಜ. ಅವರು ಖರೀದಿಸಿದ ನಿವೇಶನದ ಬೆಲೆ ಮಾರುಕಟ್ಟೆ ದರಕ್ಕಿಂತ ಕಡಿಮೆ. (ವಿಐಪಿ ಎಂದು ಅನುಕೂಲ ಪಡೆದಿದ್ದಾರೆ) ಹಾಗೇ ಅವರು ಘೋಷಿಸಿದ ಆಸ್ತಿ ಪಟ್ಟಿಯಲ್ಲಿ ಈ ನಿವೇಶನ ಇಲ್ಲದಿರುವುದು ಅಥವಾ ಮುಚ್ಚಿಟ್ಟಿರುವುದು? ಇವು ಗಂಭೀರ ಸ್ವರೂಪದ್ದು ಸಹ, ಆದರೆ ಆರೋಪದ ಬಳಿಕ ಅದನ್ನು ಹಿಂತಿರುಗಿಸ ಲಾಯಿತಾದರೂ ಹಿಂದೆ ಒಂದು ನೈತಿಕ ಕುಸಿತದ ಅಳುಕು ಅವರಲ್ಲಿಯೂ

ಪುಟ 14 ಕ್ಕೆ

ಕಾರ್ಟೂನ್ ಕಾರ್ನರ್



ಕಾರ್ಮಿಕ ಕಾನೂನು ಜಾರಿ, ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ ಹಾಗೂ ಮಧ್ಯವರ್ತಿಗಳ ಹಾವಳಿ ತಡೆಗೆ ಒತ್ತಾಯಿಸಿ ಬೀಡಿ ಕಾರ್ಮಿಕರ ಧರಣಿ.

ಕಾರ್ಮಿಕ ಕಾನೂನುಗಳನ್ವಯ ಕನಿಷ್ಠ ಕೂಲಿ 125 ರೂ.ಲಾಗ್ ಪುಸ್ತಕ, ಗುರುತಿನ ಚೀಟಿ ನೀಡುವುದರ ಜೊತೆಗೆ ಎಲ್ಲಾ ಬೀಡಿ ಕಾರ್ಮಿಕರನ್ನು ಪಿ.ಎಫ್.ಸೌಲಭ್ಯ ವ್ಯಾಪ್ತಿಗೆ ಒಳಪಡಿಸಬೇಕು. ವಿದ್ಯಾರ್ಥಿ ವೇತನಕ್ಕೆ ಸಲ್ಲಿಸಲಾದ ಎಲ್ಲಾ ಅರ್ಜಿದಾರರಿಗೆ ವಿದ್ಯಾರ್ಥಿ ವೇತನ ಸಿಗುವಂತಾಗಬೇಕು. ಹಾಲಿ ಅರ್ಜಿ ಸಲ್ಲಿಸಲು ಇರುವ ದಿನಾಂಕ: 30-09-2011 ಕ್ಕೆ ಮುಂದೂಡಬೇಕು.


ತಾಲ್ಲೂಕು ಮಟ್ಟದಲ್ಲಿ ಬೀಡಿ ಮಾಲೀಕರ, ಗುತ್ತಿಗೆದಾರರ ಹಾಗೂ ಸಂಘದ ಪದಾಧಿಕಾರಿಗಳ ಜಂಟಿ ಸಭೆ ನಡೆಸಬೇಕು. ಹಾಗೂ ಬೀಡಿ ಕಾರ್ಮಿಕರಿಗೆ ಬಿ.ಪಿ..ಎಲ್ ಕಾರ್ಡ್ ಮತ್ತು ವಸತಿಹೀನರಿಗೆ ಮನೆ, ನಿವೇಶನ ನೀಡಬೇಕು. ಮಧ್ಯವರ್ತಿಗಳು ಕಾನೂನು ಬಾಹಿರವಾಗಿ ಕಾರ್ಮಿಕ ಆಸ್ಪತ್ರೆ ನಕಲಿ ಸೀಲು ಬಳಸಿ ಕಾರ್ಮಿಕರನ್ನು ವಂಚಿ ಸುತ್ತಿರುವವರ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ದಿನಾಂಕ:07-09-2011 ರಂದು ಮಧುಗಿರಿ ತಾಲ್ಲೂಕು ಬೀಡಿ ಕಾರ್ಮಿಕರ ಸಂಘ ಸಿ.ಐ.ಟಿ.ಯು ನೇತೃತ್ವದಲ್ಲಿ ಮೆರವಣಿಗೆ ನಡೆಸಿ, ಮಧುಗಿರಿ ಉಪವಿಭಾಗಾಧಿಕಾರಿ ದೀಪ್ತಿ ದೀಪಕ್ ರವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂಬಂಧವಾಗಿ ತಾಲ್ಲೂಕು ಆಡಳಿತ ಮಧ್ಯ ಪ್ರವೇಶಿಸಿ ಮಾಲೀಕರು, ಕಾರ್ಮಿಕ ಇಲಾಖೆ ಹಾಗೂ ಕಾರ್ಮಿಕ ಸಂಘದ ಪದಾಧಿಕಾರಿಗಳೊಂದಿಗೆ ತುರ್ತಾಗಿ ಜಂಟಿ ಸಭೆ ಕರೆಯಲು ಒತ್ತಾಯಿಸಲಾಯಿತು.

ಇದಕ್ಕೂ ಮುನ್ನ ಪಟ್ಟಣದ ವೆಂಕಟರವಮಣಸ್ವಾಮಿ ದೇವಾಲಯದ ಅವರಣದಲ್ಲಿ ನಡೆದ ಸಭೆಯಲ್ಲಿ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಸೈಯದ್ ಮುಜೀಬ್ ಮುಖಂಡರಾದ ಎಂ.ನೌಶಾದ್ ಸೆಹಗನ್ ಮಧುಗಿರಿ ಬೀಡಿ ಕಾರ್ಮಿಕರ ಸಂಘದ ಸಂಚಾಲಕರಾದ ಶಕುಂತಲ, ತಾಲ್ಲೂಕು ಸಿ.ಐ.ಟಿ.ಯು ಅಧ್ಯಕ್ಷರಾದ ಪಾರ್ವತಮ್ಮ ,ಕಾರ್ಯದರ್ಶಿ ಮಲ್ಲಮ್ಮ ಹಾಗೂ ಕಟ್ಟಡ ಕಾರ್ಮಿಕ ಸಂಘದ ಬೆಟ್ಟಯ್ಯ, ಬೀಡಿ ಕಾರ್ಮಿಕರ ಮುಖಂಡರಾದ ಶಕೀಲ, ರಹಮತ್ ಮತ್ತಿತರರು ಹಾಜರಿದ್ದರು.

ಬೀಡಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕೆ ನೋಫ್ರಿಲ್(ಬಾಕಿರಹಿತ) ಅಕೌಂಟ್ ತೆರೆಯಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮಾರ್ಗ ದರ್ಶನದಂತೆ ತುಮಕೂರು ಲೀಡ್ ಬ್ಯಾಂಕ್ ಆದೇಶ ನೀಡಿದ್ದು, ಸದರಿ ಆದೇಶ ದನ್ವಯ ಬ್ಯಾಂಕುಗಳಲ್ಲಿ ಖಾತೆ ತೆರೆಯಲು ನಿರ್ಲಕ್ಷ್ಯತೆ ವಹಿಸಿರುವುದನ್ನು ಸಂಘ ಖಂಡಿಸಿದೆ.





ಮರಳು ಗಣಿಗಾರಿಕೆ ನೀತಿ ವಿರೋಧಿಸಿ ಕೊರಟಗೆರೆಯಲ್ಲಿ ರೈತರಿಂದ ರಸ್ತೆ ತಡೆ-ಧರಣಿ

ಕರ್ನಾಟಕ ಮರಳು ಗಣಿಗಾರಿಕೆ ನೀತಿ-2011ರಡಿಯಲ್ಲಿ ಕೊರಟಗೆರೆ ತಾಲ್ಲೂಕಿನ ಕತ್ತಿನಾಗೇನಹಳ್ಳಿ ಹಾಗೂ ಗೌರಗೊಂಡನಹಳ್ಳಿ ಬಳಿಯ ಸುವರ್ಣ ಮುಖಿ ನದಿಯಲ್ಲಿ ಮರಳು ಗಣಿಗಾರಿಕೆಗೆ ಟೆಂಡರ್ ಕರೆದಿರುವುದನ್ನು ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವದಲ್ಲಿ ಐದು ನೂರಕ್ಕೂ ಹೆಚ್ಚು ರೈತರು ಸೆಪ್ಟೆಂಬರ್ 12ರಂದು ಸೋಮವಾರದಂದು ತಹಶೀಲ್ದಾರ್ ಕಛೇರಿ ಎದುರು ಧರಣಿ ನಡೆಸಿದರು.

ಪಟ್ಟಣದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ರೈತರು ಸರ್ಕಾರದ ರೈತ ವಿರೋಧಿ, ಪರಿಸರ ವಿರೋಧಿ, ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಸುಮಾರು ಎರಡು ಗಂಟೆಗಳ ಕಾಲ ರಸ್ತೆ ತಡೆನಡೆಸಿದರು.

ಜಿಲ್ಲಾಧಿಕಾರಿಗಳು ಧರಣಿ ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದಾಗ ಅವರ ಪರವಾಗಿ ಜಿಲ್ಲಾಧಿಕಾರಿಗಳ ಕಛೇರಿ ಸ್ಥಾನಿಕ ಸಹಾಯಕ ದೊಡ್ಡಪ್ಪ ಆಗಮಿಸಿ ಮನವಿ ಸ್ವೀಕರಿಸಿ ಸದರಿ ವಿಷಯದ ಬಗ್ಗೆ ಸರ್ಕಾರದ ಗಮನಕ್ಕೆ ತರುವುದರ ಜೊತೆಗೆ ರೈತ ಸಂಘದ ಪ್ರತಿನಿಧಿಗಳ ಸಭೆ ಕರೆಯುವ ಬಗ್ಗೆ ಚರ್ಚಿಸಲಾಗುವುದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ರೈತರು ಕೂಡಲೇ ಟೆಂಡರ್ ಪ್ರಕ್ರಿಯೆ ರದ್ದಾಗದಿದ್ದರೆ, ಪಾದಯಾತ್ರೆ ಮೂಲಕ ಡಿ.ಸಿ. ಕಛೇರಿ ಮುತ್ತಿಗೆ ನಡೆಸಲಾಗುವುದೆಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕರಾದ ಬಿ. ಉಮೇಶ್ ಜಿ.ಪಂ. ಸದಸ್ಯರಾದ ಪಿ.ಆರ್. ಸುಧಾಕರ್‌ಲಾಲ್, ಕೆ.ಪಿ. ಆರ್. ಎಸ್. ತಾಲ್ಲೂಕು ಸಂಚಾಲಕರಾದ ಎಂ. ನೌಷಾದ್ ಸೆಹಗನ್ ರೈತ ಮುಖಂಡರಾದ ಎಲ್. ರಾಜಣ್ಣ ನರಸಿಂಹರಾಜು, ರಂಗಮುತ್ತಯ್ಯ, ಮಹಾಲಿಂಗಪ್ಪ, ಆರ್. ಹನುಮಂತರಾಯಪ್ಪ, ಶ್ರೀ ರಂಗಯ್ಯ, ಹಾಗೂ ಸಯಿದಾಬೇಗಂ ಮತ್ತಿತರರು ಹಾಜರಿದ್ದರು.

ಮೋದಿ: ಬೇಡವಾದ 'ಅತಿಥಿ'


ಪುಟ 3 ರಿಂದ

ಸಿದ್ಧತೆಗಳೂ ಬಿರುಸಿನಿಂದ ಚಾಲನೆಗೊಂಡಿದೆ. ಭ್ರಷ್ಟಾಚಾರದ ವಿರುದ್ಧ ಅಡ್ವಾಣಿ ರಥಯಾತ್ರೆಯ ಪ್ರಹಸನಕ್ಕೆ ಮತ್ತು ಪ್ರಧಾನಿ ಅಭ್ಯರ್ಥಿಯಾಗುವ ಕನಸಿಗೆ 'ಆರ್.ಎಸ್.ಎಸ್.ತಣ್ಣೀರೆರಚಿದೆ. ಈ ಆತೃಪ್ತಿಯಲ್ಲಿ ಅಡ್ವಾಣಿ ಯಾತ್ರೆ ನಡೆಯಲಿದೆ. ಜೇಟ್ಲಿ ಮತ್ತು 'ಹಗರಣಗಳಲ್ಲಿರುವ' ಸುಷ್ಮಾ ಸ್ವರಾಜ್‌ಗಳ ನಡುವೆ ಸ್ಪರ್ಧೆ ತಿಕ್ಕಾಟ ನಡೆಯುತ್ತಿರುವಾಗಲೇ ಮೋದಿಯನ್ನು ಈಗ ವೇದಿಕೆಗೆ ಹತ್ತಿಸಿದ್ದಾರೆ. ಉಪವಾಸದ ನಾಟಕವೂ ಇದರ ಒಂದು ಭಾಗ. ರಾಜ್ಯದ ಜನತೆ, ಸಂಪನ್ಮೂಲಗಳನ್ನು ಮನಸೋ ಇಚ್ಛೆ ಕೊಳ್ಳೆ ಹೊಡೆಯಲು ದೇಶ, ವಿದೇಶದ ಬಂಡವಾಳಗಾರರಿಗೆ ಅವಕಾಶ ಕಲ್ಪಿಸಿರುವ ಮೋದಿಯೇ ಪ್ರಧಾನಿಯಾಗಬೇಕೆಂಬುದು ಕಾರ್ಪೋರೇಟ್ ಕಂಪನಿಗಳ ಪ್ರಬಲ ಇಚ್ಛೆ ಆದ್ದರಿಂದಲೇ ವೀಸಾ ನಿರಾಕರಿಸಿದ್ದ ಅಮೇರಿಕಾವೇ ಈಗ ಗುಜರಾತ್ ನಂ.1 ಎಂದು ಹೊಗಳುತ್ತಿರುವುದು. ಈಗಿನ ಹಲವು ಬೆಳವಣಿಗೆಗಳನ್ನು ಗಮನಿಸಿದರೆ ಅಮೇರಿಕಾಕ್ಕೆ ಬಿಜೆಪಿ ಅಧಿಕಾರಕ್ಕೆ ಬರುವುದರಲ್ಲಿಯೇ ಹೆಚ್ಚಿನ ಆಸಕ್ತಿ ಇದ್ದಂತಿದೆ. ಅದಕ್ಕಾಗಿ ಉಪವಾಸದ ಮೌಲ್ಯ, ಪಾವಿತ್ರತೆಯನ್ನೇ ಹತ್ಯೆಗೈದ ಈ 'ಮಾರ್ಜಾಲ ಸನ್ಯಾಸಿ'ಯ ನಾಟಕವನ್ನು ಮಹಾತ್ಮಗಾಂಧಿಯವರ ಉಪವಾಸಕ್ಕಿಂತಲೂ ಮಹಾ ಘಟನೆ ಎಂಬಂತೆ ಮಾಧ್ಯಮಗಳು ತುತ್ತೂರಿ ಊದಿವೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಮೋದಿಯನ್ನು ಮೆರೆಸಲು ಸಂಘ ಪರಿವಾರ ಸಿದ್ಧಗೊಳ್ಳುತ್ತಿದೆ. ದಸರಾಕ್ಕೆ ಆಹ್ವಾನವೂ ಇದೇ ದೃಷ್ಟಿಯಲ್ಲಿರುವುದು. ಹೀಗಿರುವಾಗ ಅವರನ್ನು ರಾಜಕೀಯವಾಗಿ ಅವರದೇ ವೇದಿಕೆಗಳಲ್ಲಿ ಮೆರೆಸಲು ಅಡ್ಡಿಯಿರಲಾರದು. ಆದರೆ ಜನರ ಖರ್ಚಿನಲ್ಲಿ ಸರ್ಕಾರದ ಅಧಿಕೃತ ಆಹ್ವಾನಿತವಾಗಿ ಅಲ್ಲ.

ಮೇಲಾಗಿ ಹಗರಣ-ಅಕ್ರಮ ಹಾಗೂ ಜನವಿರೋಧಿ ಕೃತ್ಯಗಳಿಂದ ಬಿಜೆಪಿಯ ವಿರುದ್ಧ ಜನತೆಯಲ್ಲಿ ಅತೃಪ್ತಿ ಬೆಳೆಯುತ್ತಿದೆ. ಹೇಗಾದರೂ ಜನರ ಗಮನ ಬೇರೆಡೆಗೆ ಸೆಳೆಯಲು ಆರ್.ಎಸ್.ಎಸ್. ಹೊಂಚು ಹಾಕಿದೆ. ಈಗಾಗಲೇ ಕೋಮು ವಿಭಜನೆಯ ಅದರ ಪ್ರಯತ್ನಗಳು ಆರಂಭಗೊಂಡಿವೆ. ಕರ್ನಾಟಕವೂ ಇದಕ್ಕೆ ಹೊರತಾಗದು. ಇಂತಹ ಸ್ಥಿತಿಯಲ್ಲಿ ಮೋದಿ ಆಗಮನ ಈ ಗುಪ್ತ ಅಜೆಂಡಾಕ್ಕೆ ಇನ್ನಷ್ಟು ಚಾಲನೆ ನೀಡಲಿದೆ. ಇದಕ್ಕೆ ಸೌಹಾರ್ದ ಕರ್ನಾಟಕದ ಜನತೆ ಅವಕಾಶ ಕೊಡಕೂಡದು. ಈ ಹಂತದಲ್ಲಾದರೂ ಸರ್ಕಾರ ತನ್ನ ನಿರ್ಧಾರವನ್ನೂ ಕೈಬಿಡಬೇಕು. ಇಲ್ಲವಾದಲ್ಲಿ ಜನತೆ ಪ್ರತಿಭಟಿಸಬೇಕು.

ಕೊಪ್ಪಳ ಉಪಚುನಾವಣೆ



ಸಂದರ್ಭ ಸಾಧಕರಿಗೆ ಪಾಠ ಕಲಿಸಿಯಾರೆ?

■ ಗುರುರಾಜ್ ಕೊಪ್ಪಳ

ಬರಪೀಡಿತ ಕೊಪ್ಪಳ ತಾಲ್ಲೂಕಿನಲ್ಲಿಗ ಚುಣಾವಣೆಯು ಕಾವು ಜೋರಾಗಿಯೇ ಆರಂಭವಾಗಿದೆ. ಜೆ.ಡಿ.ಎಸ್ ನಿಂದ ಗೆದ್ದು ಶಾಸಕನಾಗಿದ್ದ ಸಂಗಣ್ಣ ಕರಡಿ ಆಪರೇಶನ್ ಕಮಲಕ್ಕೆ ಬಲಿಯಾಗಿದ್ದರಿಂದ ಇಲ್ಲಿಯ ಜನತೆ ಮೊದಲ ಬಾರಿಗೆ ಉಪಚುನಾವಣೆಯ 'ರುಚಿ' ನೋಡುತ್ತಿದ್ದಾರೆ. ಐದುವರ್ಷದ ವರೆಗೆ ಶಾಸಕನಾಗಿ ಸೇವೆ ಮಾಡಲು ಜನ ಮತ ನೀಡಿದ್ದಾರೆ ಎಂಬುದನ್ನು ಮರೆತು ಸಚಿವ ಸ್ಥಾನ ಮತ್ತು ಹಣದ ಆಸೆಗೆ ಒಳಗಾಗಿ, 'ಕ್ಷೇತ್ರದ ಅಭಿವೃದ್ಧಿ ಮಾಡುವುದಕ್ಕಾಗಿ ಬಿಜೆಪಿ ಸೇರಿದ್ದೇನೆ' ಎಂದು ಹೇಳುತ್ತಿರುವ ಸ(ನು)ಂಗಣ್ಣ ತಾನು 3 ಬಾರಿ ಶಾಸಕನಾಗಿದ್ದಾಗಲೂ ಯಾವುದೇ ಜನಪರ ಕೆಲಸವನ್ನು ಮಾಡಿಲ್ಲ. ಈಗ ದಿಢೀರ್ 'ಜ್ಞಾನೋದಯ'ವಾಗಿ ಕ್ಷೇತ್ರದ ಅಭಿವೃದ್ಧಿ ಹೆಸರಲ್ಲಿ ತನ್ನ ಅಭಿವೃದ್ಧಿ ಮಾಡಿಕೊಳ್ಳಲು ಮುಂದಾಗಿರುವುದು ಮಾತ್ರ ಜನತೆಗೆ ಮಾಡುತ್ತಿರುವ ದ್ರೋಹ, ಅನ್ಯಾಯ.

ಜೆ.ಡಿ.ಎಸ್, ಕಾಂಗ್ರೆಸ್, ಬಿಜೆಪಿ ಸೇರಿದಂತೆ 14 ಜನ ಚುನಾವಣಾ ಕಣದಲ್ಲಿದ್ದಾರೆ. ಇದರಲ್ಲಿ ಬಿಜೆಪಿ ಸಂಗಣ್ಣ ಕರಡಿ ಮತ್ತು ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳ ಶಾಸಕರಾಗಿ ಅಧಿಕಾರ ಅನುಭವಿಸಿದವರು. ನಿಂತಿರುವ 14 ಜನರಿಗೂ ಕೊಪ್ಪಳದ ಮೂಲ ಸಮಸ್ಯೆಗಳು ಏನು ಎಂಬುದರ ಅರಿವು ಇಲ್ಲ. ಅದು ಅವರಿಗೆ ಬೇಕಾಗಿಯೂ ಇಲ್ಲ.

ಸಮಸ್ಯೆಗಳ ತಾಣ

ಕೊಪ್ಪಳ ಜನರನ್ನು ಬರಮಾಡಿಕೊಳ್ಳುವುದೆ ಧೂಳಿನಿಂದ.ಸಮಸ್ಯೆಯ ಒಳಗೆ ಸಮಸ್ಯೆ ಇರುವುದು ಈ ಕ್ಷೇತ್ರದ ವಿಶೇಷ. ಹಳ್ಳಿಯಿಂದ ಹಳ್ಳಿಗೆ ಸಂಪರ್ಕಿಸಲು ಸರಿಯಾದ ರಸ್ತೆಗಳಿಲ್ಲ. ಬಸ್ ಸೌಲಭ್ಯ ಕಾಣದ ಹಳ್ಳಿಗಳು ಸಾಕಷ್ಟಿವೆ. ಸರಕಾರಿ ಶಾಲಾ–ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲ. ಹಾಸ್ಟೆಲ್‌ಗಳಲ್ಲಿ ಗುಣಮಟ್ಟದ ಆಹಾರ ಇಲ್ಲ. ಕುಡಿಯಲು ಶುದ್ಧವಾದ ನೀರು ಸಿಗುತ್ತಿಲ್ಲ. ಸರಕಾರಿ ಆಸ್ಪತ್ರೆಗಳಿಲ್ಲದೆ ಮತ್ತು ಸಿಬ್ಬಂದಿ ಕೊರತೆಯಿಂದಾಗಿ ಜನರ ಆರೋಗ್ಯ ವಿಷಮಿಸುತ್ತಿದೆ. ಸುತ್ತಮುತ್ತ ಕೈಗಾರಿಕೆಗಳು ಕಂಡರೂ ಇನ್ನೂ ನಿರುದ್ಯೋಗ ಸಮಸ್ಯೆ ಯುಜನತೆಗೆ ಮಾರಕವಾಗಿದೆ. ಕಿತ್ತು ತಿನ್ನುವ ಬಡತನ ಇನ್ನು ಜೀವಂತ ಇದೆ. ಅದೆಷ್ಟೊ ಕುಟುಂಬಗಳಿಗೆ ಉಳುಮೆ ಮಾಡಲು ಸ್ವಂತ ಭೂಮಿ ಇಲ್ಲ. ವಾಸಿಸಲು ಮನೆಗಳಿಲ್ಲ. ಆಹಾರ ಕೊರತೆಯಿಂದಾಗಿ ಜನ ಸಾಯುತ್ತಿದ್ದರೆ ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬ ಕನಿಷ್ಠ ಕಾಳಜಿಯನ್ನು ಇಲ್ಲಿಯವರೆಗೆ ಗೆದ್ದ ಶಾಸಕರು ತೋರಿಲ್ಲ. ದಲಿತರಿಗೆ ಭೂಮಿ, ನಿವೇಶನ ಇಲ್ಲದೆ ಕೆಲಸ ಹುಡುಕಿಕೊಂಡ ಪಕ್ಕದ ಗೋವಾ, ಮಹಾರಾಷ್ಟ್ರ, ತಮಿಳುನಾಡಿಗೆ ವಲಸೆ ಹೋಗುತ್ತಿದ್ದಾರೆ. ವಲಸೆ ಹೋಗುವಾಗ ಸುಮ್ಮನಿದ್ದ ಈ ಪಕ್ಷಗಳು ಈಗ ಇವರ ಮತ ಪಡೆಯುವುದಕ್ಕಾಗಿ ಅವರನ್ನು ವಾಪಸ್ ಕರೆತರುತ್ತಿದ್ದಾರೆ. ರೈತರು, ಕೃಷಿಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನತೆ, ಸೇರಿದಂತೆ ಸಾರ್ವಜನಿಕರು ಸಾಕಷ್ಟು ಸಮಸ್ಯೆಯಿಂದ ಬಳಲುತ್ತಿದ್ದಾರೆ.

ಪಕ್ಷಾಂತರಿಗಳು

ಅಭಿವೃದ್ಧಿ ಮಾಡುವುದಾಗಿ ಬಿಜೆಪಿ ಸೇರಿರುವ ಸಂಗಣ್ಣ ಕರಡಿ ಯಾವ ಪಕ್ಷದಲ್ಲಯೂ ನೆಟ್ಟಗೆ ಜನರಿಗೆ ಒಳ್ಳೆಯದಾಗುವ ಕೆಲಸವನ್ನು ಮಾಡಿಲ್ಲ. ಮೊದಲಬಾರಿಗೆ ಪಕ್ಷೇತರನಾಗಿ ಗೆದ್ದು, ನಂತರ ಜೆಡಿಯು ಸೇರಿ ಆ ಪಕ್ಷದಿಂದಲೂ ಶಾಸಕನಾಗಿ ಆಯ್ಕೆಯಾಗಿ. ಅಲ್ಲಿ ಬಹಳ ದಿನ ನಿಲ್ಲದೆ. 2004ರಲ್ಲಿ ಬಿಜೆಪಿ ಸೇರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳ ಕೈಯಲ್ಲಿ ಸೋಲುಂಡು, ಬಿಜೆಪಿಯಲ್ಲಿ ವಾತಾವರಣ ಸರಿಯಿಲ್ಲವೆಂದು ಜೆಡಿಎಸ್ ಸೇರಿ 2008ರಲ್ಲಿನ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕನಾಗಿ ಆಯ್ಕೆಯಾಗಿ, ಸಚಿವ ಪದವಿಗೆ ಆಸೆ ಪಟ್ಟು ಆಪರೇಶನ್ ಕಮಲಕ್ಕೆ ಬಲಿಯಾಗಿ ಚುನಾವಣೆಗೆ ನಿಂತಿದ್ದಾರೆ. ಆಶ್ಚರ್ಯವೆಂದರೆ ಇವರ ರಾಜಕೀಯ ಆರಂಭವಾಗಿದ್ದು ಕಾಂಗ್ರೆಸ್‌ನಿಂದ. ಈ 'ಕರಡಿ' ಎಲ್ಲ ಪಕ್ಷದ ನೀರು ಕುಡಿದಿದ್ದಾರೆ. ಜನ ಈ ಚುನಾವಣೆಯಲ್ಲಿ ಎಲ್ಲಾ ನೀರನ್ನು ಕಕ್ಕಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಬಸವರಾಜ್ ಹಿಟ್ನಾಳ ಮೂಲ ಕಾಂಗ್ರೆಸ್ಸಿಗರಾದರೂ ಮಧ್ಯದಲ್ಲಿ ಬಂಗಾರಪ್ಪನವರ ಕೆಸಿಪಿ ಸೇರಿ ನಂತರ ಮತ್ತೆ ಕಾಂಗ್ರೆಸ್‌ಗೆ ಬಂದು 2004 ರಲ್ಲಿ ಶಾಸಕರಾಗಿ ಏನು ಕೆಲಸ ಮಾಡದೆ, ಮಣ್ಣನ್ನು ಕೊಳ್ಳೆ ಹೊಡೆದು ಸಾಕಷ್ಟು ಭ್ರಷ್ಟಾಚಾರ ಮಾಡಿ ಈಗ ಜನರ ಬಳಿ ಮತ ಕೇಳುತ್ತಿದ್ದಾರೆ. ಇನ್ನೂ ಜೆಡಿಎಸ್ ಅಭ್ಯರ್ಥಿ ಪ್ರದೀಪಗೌಡ ಮಾಲಿ ಪಾಟೀಲ್ ಮೂಲ ಕಾಂಗ್ರೆಸ್ಸಿಗ. ಇತ್ತಿಚೆಗಷ್ಟೆ ಜೆಡಿಎಸ್ ಸೇರಿದ್ದಾರೆ. ಹಿಂದೆ ಯಾರು ಶಾಸಕರಾಗಿ ಇರಬೇಕು ಎಂಬುದನ್ನು ತೀರ್ಮಾನ ಮಾಡುತ್ತಿದ್ದ ಕುಟುಂಬದ ಕರುಳಬಳ್ಳಿಕುಡಿ. ಪ್ರಚಾರ ಕಾರ್ಯವನ್ನು ಮೂರು ಪಕ್ಷಗಳು ಜೋರಾಗಿಯೇ ಆರಂಬಿಸಿವೆ. ಸದ್ಯ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ನೀತಿ ಸಂಹಿತೆಯ ಗುಮ್ಮದ ನಡುವೆಯೂ

ಚುನಾವಣಾ ಆಯೋಗ ನಿಯಮಗಳನ್ನು ಕಟ್ಟುನಿಟ್ಟು ಜಾರಿ ಮಾಡುತ್ತಿದ್ದೇವೆ ಎನ್ನುತ್ತಿದೆ. ಆದರೆ ಅಕ್ರಮ ಕೆಲಸದಲ್ಲಿ ಪಕ್ಷಗಳು ಸ್ಪರ್ಧೆಗಿಳಿದಿವೆ. ಮಧ್ಯರಾತ್ರಿ ಬಾಡೂಟ ಹಾಕುತ್ತಿದ್ದಾರೆ.ಮನೆಗಳಲ್ಲಿ ಪುಣ್ಯತಿಥಿ, ಪೂಜೆ. ಇತ್ಯಾದಿ ಕಾರ್ಯಕ್ರಮಗಳನ್ನು ಸೃಷ್ಟಿಸಿ ರಸಪಾಕ ಹಂಚಲಾಗುತ್ತಿದೆ. ಮತಪತ್ರ ಹಂಚುವ ನೆಪದಲ್ಲಿ ಒಂದು ಓಟಿಗೆ 300ರಿಂದ ಸಾವಿರ ರೂ ಹಂಚಲಾಗುತ್ತಿದೆ.ಯಾರಿಗೂ ಅನುಮಾನ ಬಾರದಂತೆ ಕಿರಾಣಿ ಅಂಗಡಿಗಳಲ್ಲಿ ಹಣ ಹಂಚಲಾಗುತ್ತಿದೆ ನಮ್ಮ ಮನೆಯಲ್ಲಿ ಇಷ್ಟು ಮತಗಳಿವೆ ಎಂದು ಕಿರಾಣಿ ಅಂಗಡಿ ಮಾಲೀಕನಿಗೆ ಚೀಟಿ ನೀಡಿದರೆ 1000ರೂ ರಿಂದ 5000 ರೂ. ಸಿಗುತ್ತದೆ. ಬಿಜೆಪಿ ಮತ್ತು ಕಾಗ್ರೆಸ್ ಪಕ್ಷವು ಮತದಾರರ ಚೀಟಿಯನ್ನು ಒತ್ತೆ ಇಟ್ಟುಕೊಂಡು ದುಡ್ಡು ನೀಡುತ್ತಿವೆ. ಒತ್ತೆ ಇಟ್ಟವರು ಮತದಾನ ಮಾಡದೆ ಇದ್ದಲ್ಲಿ ಅವರಿಗೆ ಹೆಚ್ಚಿನ ಹಣ ನೀಡಲಾಗುತ್ತದೆ ಎಂದು ಕಾರ್ಯಕರ್ತರು ಸಾರ್ವಜನಿಕವಾಗಿಯೇ ಹೇಳುತ್ತಿದ್ದಾರೆ. ಬಿಜೆಪಿ ಸರ್ಕಾರದ ಅರ್ಧದಷ್ಟು ಸಚಿವರು ಕೊಪ್ಪಳದಲ್ಲಿಯೇ ಬಿಡಾರ ಹೂಡಿದ್ದಾರೆ, ಒಂದೊಂದು ಜಿಲ್ಲಾ ಪಂಚಾಯತಿಗೆ ಇಬ್ಬರು ಸಚಿವರನ್ನು ನೇಮಿಸಿ ಬಿಜೆಪಿ ಗೆಲ್ಲಿಸಲು ಸಚಿವರ ನೇತೃತ್ವದಲ್ಲಿ ಹಣ ಖರ್ಚು ಮಾಡುತ್ತಿದೆ. ಆದರೂ ಚುನಾವಣೆ ಆಯೋಗ ಕಣ್ಮುಚ್ಚಿ ಕುಳಿತು ಆಡಳಿತ ಅಭಯಹಸ್ತ ಚಾಚಿದೆ. ಯಡಿಯೂರಪ್ಪ 1000ರೂ ನೋಟು ನೀಡುವಾಗ ಅವರ ಮೇಲೆ ಪ್ರಕರಣ ದಾಖಲಿಸಲಾಗಿದೆ, ಸಚಿವ ಕಾಗೇರಿ ಶಿಕ್ಷಕರ ಪ್ರತ್ಯೇಕ ಸಭೆ ನಡೆಸಿ ಜಿಲ್ಲಾಧಿಕಾರಿಗಳ ಕೈಯಲ್ಲಿ ಸಿಕ್ಕಿಹಾಕಿಕೊಂಡು ಓಡಿಹೋದ ಘಟನೆಗಳು ನಡೆದಿವೆ. ಜಾತಿವಾರಾಗಿ ಸಭೆ ನಡೆಸಿ ಓಲೈಸಲಾಗುತ್ತಿದೆ. ಚುನಾವಣೆ ಸಮೀಪಿಸುತ್ತಿದ್ದು ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಯಾಗ ಬೇಕಿದೆ.

ಅದೇನೆ ಇರಲಿ ಬರಬಾರದ ಚುನಾವಣೆ ಬಂದಿದೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಪಕ್ಷಗಳ ನಡುವೆ ತೀವ್ರ ಸ್ಪರ್ಧೆ ನಡೆದಿದೆ. ಇಲ್ಲಿಯವರೆಗೆ ಇಲ್ಲಿನ ಪ್ರಜ್ಞಾವಂತ ಜನತೆ ಕೋಮುವಾದಿ ಬಿಜೆಪಿಯನ್ನು ಒಮ್ಮೆಯೂ ಗೆಲ್ಲಿಸಿಲ್ಲ. ಸಂಗಣ್ಣ ನಮಗೆ ಮೋಸ ಮಾಡಿ ಬಿಟ್ಟ, ಬುದ್ಧಿ ಕಲಿಸ

ಪುಟ 14ಕ್ಕೆ

ಅಕ್ಟೋಬರ್ 2: ಭ್ರಷ್ಟಾಚಾರ ವಿರುದ್ಧ ವಿಶಾಲವಾದ ಆಂದೋಲನ

ಕರ್ನಾಟಕವನ್ನೂ ಒಳಗೊಂಡು ದೇಶದೆಲ್ಲೆಡೆ ವ್ಯಾಪಿಸಿರುವ ಭ್ರಷ್ಟಾಚಾರ ಹಗರಣಗಳ ಎಲ್ಲಾ ಆಯಾಮಗಳ ಬಗ್ಗೆ ಮತ್ತು ಭೂ ಹಾಗೂ ಗಣಿ ಹಗರಣಗಳ ಕುರಿತ ಕರ್ನಾಟಕ ಲೋಕಾಯುಕ್ತ ವರದಿಯನ್ನು ರಾಜ್ಯ ಸರಕಾರ ಅಂಗೀಕರಿಸಬೇಕೆಂದು ಆಗ್ರಹಿಸಿ ರಾಜ್ಯದಲ್ಲಿ ಜನ ಜಾಗೃತಿ ಆಂದೋಲನ ನಡೆಸಲು ಪ್ರಗತಿಪರ ಸಾಹಿತಿಗಳು, ವಿವಿಧರಂಗಗಳ ಪ್ರಮುಖರು ಮತ್ತು ಎಡ, ಪ್ರಜಾಸತ್ತಾತ್ಮಕ ಜನ ಸಂಘಟನೆ ಗಳ ನಾಯಕರು ನಿರ್ಧರಿಸಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಸೇರಿದ್ದ ಸಭೆಯಲ್ಲಿ ಹಮ್ಮಿಕೊಳ್ಳಬೇಕಿರುವ ಕಾರ್ಯಕ್ರಮಗಳ ಕುರಿತು ಸಮಾಲೋಚನೆ ನಡೆಯಿತು.

ಈ ಸಭೆಯಲ್ಲಿ ಹಿರಿಯ ಸಾಹಿತಿಗಳಾದ ಡಾ॥ಬರಗೂರು ರಾಮಚಂದ್ರಪ್ಪ,ಡಾ॥ ಕೆ.ಮರುಳಸಿದ್ದಪ್ಪ, ಪ್ರೊ॥ ಜಿ.ಕೆ.ಗೋವಿಂದ ರಾವ್, ಡಾ॥ವಿಜಯಾ, ಬಿ.ಟಿ.ಲಲಿತಾ ನಾಯಕ್, ಮಾವಳ್ಳಿ ಶಂಕರ್ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಸಂಚಾಲಕರು, ಜಿ.ಎನ್.ನಾಗರಾಜ್, ಎಸ್.ವೈ.ಗುರುಶಾಂತ್, ಕೆ.ಪ್ರಕಾಶ್, ಸಿಪಿಐ(ಎಂ), ಡಾ॥ ಸಿದ್ದನಗೌಡ ಪಾಟೀಲ್, ಜಯರಾಮ್‌ರಾವ್, ಪಿ.ವಿ. ಲೋಕೇಶ್, ಮಹಿಳಾ ಸಂಘಟನೆಗಳ ಕೆ.ಎಸ್.ಲಕ್ಷ್ಮಿ, ವಿಮಲಾ, ಶಶಿಕಲಾ ಬೆಡಗಲಿ, ಸಮುದಾಯದ ಸುರೇಂದ್ರ, ಇಪ್ಟಾ ಸಂಘಟನೆ, ಯುವಜನ ಸಂಘಟನೆಯ ಬಿ.ರಾಜಶೇಖರ್ ಮೂರ್ತಿ, ಶೌರತ್ ಅಲಿ ಆಲೂರು, ವಿದ್ಯಾರ್ಥಿ ಸಂಘಟನೆಯ ವಿನಯ್, ಮುಂತಾದವರು ಭಾಗವಹಿಸಿದ್ದರು. ಇದೇ ಅಕ್ಟೋಬರ್. 2 ಮಹಾತ್ಮಗಾಂಧಿ ಜಯಂತಿಯಂದು ಪ್ರತಿಭಟನಾ ಧರಣಿ ನಡೆಸುವುದು. ಅದೇ ರೀತಿ ಜಿಲ್ಲೆಗಳಲ್ಲಿಯೂ ಸಂಘಟಿಸಲಾಗುವುದು. ಇದನ್ನು ಇನ್ನಷ್ಟು ವ್ಯಾಪಕಗೊಳಿಸುವ ಹಿನ್ನೆಲೆಯಲ್ಲಿ ಸಮಾವೇಶ, ಜಾಥಾ ಸಭೆಗಳು ಇತ್ಯಾದಿ ನಡೆಸುವ ಸಲಹೆಗಳು ಚರ್ಚೆಗೆ ಬಂದಿವೆ. ಅಕ್ಟೋಬರ್ 2 ರಂದಿನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಘಟಕರು ವಿನಂತಿಸಿದ್ದಾರೆ.

ಎಸ್.ಎಫ್.ಐ. ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನ

ಎಸ್‌ಎಫ್‌ಐ ದ.ಕ.ಜಿಲ್ಲಾ ಸಮ್ಮೇಳನವು ಮಂಗಳೂರು ಬೋಳಾರದಲ್ಲಿ ಸಪ್ಟೆಂಬರ್ 18 ರಂದು ಜರಗಿತು. ಸಮ್ಮೇಳನವನ್ನು ಎಸ್‌ಎಫ್‌ಐ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಎಚ್.ಆರ್.ನವೀನ್ ಕುಮಾರ್ ಉದ್ಘಾಟಿಸಿದರು.

ಸಮ್ಮೇಳನವು ಮುಂದಿನ ಸಾಲಿಗೆ 21 ಮಂದಿಯನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ನೂತನ ಸಮಿತಿಗೆ ನಿತಿನ್ ಕುಮಾರ್ ಅಧ್ಯಕ್ಷರಾಗಿಯೂ, ಮನೋಜ್ ವಾಮಂಜೂರು ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುತ್ತಾರೆ.



ಸಪ್ಟೆಂಬರ್ 17 ರಂದು ಜಿಲ್ಲಾ ಮಟ್ಟದ ಅಧ್ಯಯನ ತರಗತಿಯನ್ನು ಎಸ್‌ಎಫ್‌ಐ ಏರ್ಪಡಿಸಿದ್ದು, ತರಬೇತಿಯನ್ನು ರಾಜ್ಯ ಸಮಿತಿ ಕಾರ್ಯದರ್ಶಿ

ಅನಂತ ನಾಯ್ಕ್, ಎಸ್‌ಎಫ್‌ಐ ಮಾಜಿ ನಾಯಕರುಗಳಾದ ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಮುನೀರ್ ಕಾಟಿಪಳ್ಳ ನಡೆಸಿಕೊಟ್ಟಿರುತ್ತಾರೆ. ಎಸ್‌ಎಫ್‌ಐ ಮುಖಂಡರುಗಳಾದ ಜೀವನ್‌ರಾಜ್ ಕುತ್ತಾರ್, ಸುಜಿತ್ ಬೆಳ್ತಂಗಡಿ ತರಬೇತಿ ಮತ್ತು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ತಿರುವೈಲ್ ವಾರ್ಡು ನಾಗರಿಕರಿಂದ ಪಾಲಿಕೆ ಎದುರು ಪ್ರತಿಭಟನೆ:

ಮಂಗಳೂರು ನಗರದ ಹೊರ ವಲಯದಲ್ಲಿರುವ ತಿರುವೈಲ್ ಗ್ರಾಮವು ಮಂಗಳೂರು ಮಹಾ ನಗರ ಪಾಲಿಕೆಯ ವಾರ್ಡು ಆಗಿ ಸೇರಿಕೆಗೊಂಡು 9 ವರ್ಷಗಳಾದರೂ ಹಲವಾರು ಸಮಸ್ಯೆಗಳು ಪರಿಹಾರವಾಗದೆ ಉಳಿದಿದೆ. ಸ್ಥಳೀಯ ಪಾಲಿಕೆ ಸದಸ್ಯೆ ಸ್ಪಂದಿಸುತ್ತಿಲ್ಲ. ಈ ನಿಷ್ಕ್ರಿಯತೆಯನ್ನು ಪ್ರತಿಭಟಿಸಿ ನಗರ ಸಿಪಿಎಂ ನೇತೃತ್ವದಲ್ಲಿ ಸಪ್ಟೆಂಬರ್ 19 ರಂದು ತಿರುವೈಲ್ ವಾರ್ಡು ನಾಗರಿಕರು ಮಂಗಳೂರು ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಇದಕ್ಕೂ ಮೊದಲು ಪ್ರತಿಭಟನಾಕಾರರು ಮಂಗಳೂರು ಬಲ್ಲಾಳ್‌ಬಾಗ್‌ನಿಂದ ಪಾಲಿಕೆ ಕಚೇರಿ ವರೆಗೆ ಮೆರವಣಿಗೆ ನಡೆಸಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಎಂ ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಎಂ ಗುರುಪುರ ವಲಯದ ಮುಖಂಡರಾದ ಗಂಗಯ್ಯ ಅಮೀನ್, ಯುವಜನ ಮುಂದಾಳು ಮನೋಜ್ ವಾಮಂಜೂರು ಮಾತನಾಡಿದರು. ಹೊನ್ನಯ್ಯ ಅಮೀನ್ ಕೊನೆಯಲ್ಲಿ ಧನ್ಯವಾದವಿತ್ತರು.

ಪಂಜಿಮೊಗರು ಕೊಲೆ-ಪೋಲೀಸ್ ವೈಫಲ್ಯ ಖಂಡಿಸಿ ಮತ್ತೆ ಪ್ರತಿಭಟನೆ;

ಪಂಜಿಮೊಗರುವಿನಲ್ಲಿ ತಾಯಿ ಮಗಳ ಜೋಡಿ ಕೊಲೆ ನಡೆದು 3 ತಿಂಗಳು ಸಮೀಪಿಸುತ್ತಿದ್ದರೂ, ಕೊಲೆಗಾರರನ್ನು ಪತ್ತೆಹಚ್ಚುವಲ್ಲಿ ರಾಜ್ಯ ಪೋಲೀಸ್ ಇಲಾಖೆ



ವಿಫಲವಾಗಿದೆ. ಈ ಕೊಲೆ ತನಿಖೆಯನ್ನು ಸಿಬಿಐಗೆ ಒಪ್ಪಿಸಿಕೊಡಬೇಕೆಂದು ಆಗ್ರಹಿಸಿ ಡಿವೈಎಫ್‌ಐ ನೇತೃತ್ವದಲ್ಲಿ ಸ್ಥಳೀಯ ಸಂಘಟನೆಗಳು ಸಪ್ಟೆಂಬರ್ 19 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದವು.

ಈ ಅವಳಿ ಕೊಲೆ ನಡೆದ ಬಳಿಕ ಸ್ಥಳೀಯರು ಅಲ್ಲಿನ ಡಿವೈಎಫ್‌ಐ ಘಟಕದ ನೇತೃತ್ವದಲ್ಲಿ ಕೂಳೂರು-ಪಂಜಿಮೊಗರಿನಲ್ಲಿಯೇ ಎರಡು ಬಾರಿ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಪೋಲೀಸರು ಸರಿಯಾಗಿ ತನಿಖೆ ಮಾಡದೆ ಮುಗ್ಧರಾದ ಕೆಲವರನ್ನು ಠಾಣೆಗೆ ಕರೆದುಕೊಂಡು ಹೋಗಿ ತನಿಖೆಯ ನೆಪದಲ್ಲಿ ಹಿಂಸೆ ನೀಡಿದ್ದಾರೆ. ಇದರಿಂದಾಗಿ ಪಂಜಿಮೊಗರಿನ ಜನ ಆತಂಕಕ್ಕೀಡಾಗಿದ್ದಾರೆ ಎಂಬುದಾಗಿ ಪ್ರತಿಭಟನಾಕಾರರು ತಿಳಿಸಿದರು. ಕ್ಷೇತ್ರದ ಶಾಸಕರೇ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದು ಇಂಥದೊಂದು ವೈಫಲ್ಯ ಆಗಿರುವುದು ಖಂಡನೀಯವಾಗಿದೆ ಎಂದು ಆರೋಪಿಸಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ಪಿ.ದಯಾನಂದ ಶೆಟ್ಟಿ, ಎಸ್.ಎಫ್.ಐ. ಜಿಲ್ಲಾ ಸಮಿತಿ ಮುಖಂಡ ಚರಣ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಡಿವೈಎಫ್‌ಐನ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಸ್ಥಳೀಯರಾದ ಮೊಯಿದಿನ್ ಬಾವಾ, ಮಯ್ಯದ್ದಿ, ಹನೀಫ್, ಬಶೀರ್ ಪಂಜಿಮೊಗರು, ಮಹಮದ್ ಶರೀಫ್, ಹಕೀಂ ಕೂಳೂರು, ರುಕ್ಮಿಣಿ, ಖಲೀಲ್ ಪಂಜಿಮೊಗರು ಅನಿಲ್ ಡಿಸೋಜ ಮೊದಲಾದವರು ಹಾಜರಿದ್ದರು. ಎಸ್‌ಎಫ್‌ಐ ಜನವಾದಿ ಮಹಿಳಾ ಸಂಘಟನೆ ಸೇರಿ 20 ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು.

ಹರೇಕಳ ಉದ್ಯೋಗ ಖಾತ್ರಿ ಅವ್ಯವಹಾರ-ಡಿವೈಎಫ್‌ಐ ದೂರು

ಹರೇಕಳ ಗ್ರಮ ಪಂಚಾಯತಿನಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನದಲ್ಲಿ ಹಣಕಾಸು ಅವ್ಯವಹಾರಗಳು ನಡೆದಿವೆ ಎಂಬುದನ್ನು ಡಿವೈಎಫ್‌ಐ ಹರೇಕಳ ಘಟಕ ಜಿಲ್ಲಾ ಪಂಚಾಯತಿಗೆ ದೂರು ನೀಡಿದ ಮೇರೆಗೆ, ಯೋಜನೆಯ ಜಿಲ್ಲಾ ಒಂಬುಡ್ಸ್‌ಮೆನ್ ನೇತೃತ್ವದ ತಂಡ ಸಪ್ಟೆಂಬರ್ 19 ರಂದು ಗ್ರಾಮಕ್ಕೆ ಆಗಮಿಸಿ ಸ್ಥಳ ತನಿಖೆ ನಡೆಸಿತು.

ಸ್ಥಳ ತನಿಖೆ ಸಂದರ್ಭದಲ್ಲಿ ಡಿವೈಎಫ್‌ಐನ ರಫೀಕ್ ಹರೇಕಳ ಮತ್ತಿತರ ಸದಸ್ಯರು ಹಾಜರಿದ್ದು, ಅವ್ಯವಹಾರಗಳ ಮಾಹಿತಿಯನ್ನು ತಂಡಕ್ಕೆ ಒದಗಿಸಿದರು. ಅನರ್ಹರು ಪ್ರಯೋಜನ ಪಡೆದುದು, ಕಾಮಗಾರಿ ನಡೆಸದೆ ಹಣ ಪಾವತಿಯಾಗಿರುವುದು ಮೊದಲಾದ ಅಕ್ರಮಗಳು ಈ ಸಂದರ್ಭ ಬಹಿರಂಗಗೊಂಡವು.

ಇರುವೈಲ್ ಗ್ರಾಮ ನಿವೇಶನ ರಹಿತರಿಂದ ಪಂಚಾಯತ್ ಚಲೋ


ಮೂಡಬಿದ್ರೆ ಸಮೀಪ ಹೊಸಬೆಟ್ಟು ಗ್ರಾಮ ಪಂಚಾಯತಿಗೆ ಒಳಪಟ್ಟ ಇರುವೈಲು ಗ್ರಾಮದ ನಿವೇಶನ ರಹಿತರು ನಿವೇಶನ



ರಹಿತರಿಗೆ ನಿವೇಶನ, ಅಕ್ರಮ-ಸಕ್ರಮ ಹಕ್ಕುಪತ್ರಗಳಿಗಾಗಿ ಆಗ್ರಹಿಸಿ ಇರುವೈಲು ಭೂಮಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಸಪ್ಟೆಂಬರ್ 20 ರಂದು ಹೊಸಬೆಟ್ಟು ಗ್ರಾ.ಪಂ.ಕಚೇರಿಯೆದುರು ಪ್ರತಿಭಟನೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಹೋರಾಟ ಸಮಿತಿ ಅಧ್ಯಕ್ಷ ಬಾಬು ಪೂಜಾರಿ, ಕಾರ್ಯದರ್ಶಿ ಆನಂದ, ವೆಲೇರಿಯನ್ ಕುಟಿನ್ಹಾ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


❄



ಕಾಂ. ಪಿ.ರಾಮಚಂದ್ರರಾವ್ ಸಂಸ್ಮರಣೆ: ಭಾವಚಿತ್ರ ಅನಾವರಣ

ಕಮ್ಯೂನಿಸ್ಟ್ ಚಳುವಳಿಯ ಹಿರಿಯ ನಾಯಕ, ದುಡಿಯುವ ವರ್ಗದ ಕಣ್ಮಣಿ ಹಾಗೂ ಎಲ್ಲರಿಗೂ ಪ್ರೀತಿಯ 'ಮಾಸ್ತ್ರು' ಎನಿಸಿಕೊಂಡಿದ್ದ ಕಾ.ಪಿ.ರಾಮಚಂದ್ರ ರಾಯರ 13ನೇ ಸಂಸ್ಮರಣ ದಿನ ಹಾಗೂ ಭಾವಚಿತ್ರ ಅನಾವರಣ ಕಾರ್ಯಕ್ರಮ ಸಪ್ಟೆಂಬರ್ 18 ರಂದು ಮಂಗಳೂರಿನ ಕೊಟ್ಟಾರ ಚೌಕಿ ಸಂಗಾತಿ ಭಗತ್ ಸಿಂಗ್ ಬಳಗದ ಕಚೇರಿಯಲ್ಲಿ ನೆರವೇರಿತು.

ಕಾ.ಪಿ.ರಾಮಚಂದ್ರ ರಾಯರ ಒಡನಾಡಿಯಾಗಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಕಾ.ಕೆ.ಆರ್.ಶ್ರೀಯಾನ್ ಅವರು ಈ ಸಂದರ್ಭದಲ್ಲಿ ಮುಖ್ಯ ,ಅತಿಥಿಯಾಗಿ ಮಾತನಾಡಿ, ರಾಮಚಂದ್ರ ರಾಯರ ಹೋರಾಟ ಗುಣ, ನೇತೃತ್ವ ಶಕ್ತಿ, ಜನಸಾಮಾನ್ಯರಲ್ಲಿ ಸೀದಾಸಾದಾ ಬೆರೆಯುವ ಅವರ ವಿಶಿಷ್ಟ ವ್ಯಕ್ತಿತ್ವವನ್ನು ವಿವರಿಸಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯ ಕೃಷ್ಣಪ್ಪ ಕೊಂಚಾಡಿ ರಾಮಚಂದ್ರ ರಾಯರ ಮಗಳು ಶ್ರೀಮತಿ ಪಿ.ಮಾಧುರಿ ಹಾಗೂ ಅವರ ಕುಟುಂಬಸ್ಥರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಶ್ಯಾಮುವೆಲ್ ಟೈಟಸ್, ಪ್ರದೀಪ್ ಉರ್ವಸ್ಟೋರ್, ಪ್ರಶಾಂತ್ ಎಂ.ಬಿ. ನೇತೃತ್ವದಲ್ಲಿ ಸಿಪಿಎಂ ಹಾಗೂ ಡಿವೈಎಫ್‌ಐ ಕೊಟ್ಟಾರ ಚೌಕಿ ಹಾಗೂ ಉರ್ವಸ್ಟೋರ್ ಘಟಕಗಳು ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ್ದು, ಡಿವೈಎಫ್‌ಐ ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಕಾರ್ಯಕ್ರಮ ನಿರೂಪಿಸಿದರು.


ಕಾಂ: ಪಿ.ಆರ್.ಅವರ ನೆನಪುಗಳು... ಕೆ.ಆರ್. ಶ್ರೀಯಾನ್ ನುಡಿಗಳಲ್ಲಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಮಸ್ಯೆಗಳ ಸುಳಿಯಲ್ಲಿ ಸಾರಿಗೆ ನೌಕರರು

ಸೆಪ್ಟೆಂಬರ್ 29 ಕೇಂದ್ರ ಕಛೇರಿ ಮುಂದೆ ಪ್ರತಿಭಟನೆ


ಎಸ್.ಪ್ರಸನ್ನಕುಮಾರ್

ಸಾರಿಗೆ ಸಂಸ್ಥೆಯ 4 ನಿಗಮಗಳ 1,68,000 ನೌಕರರು ರಾಜ್ಯ ಸರ್ಕಾರ ಹಾಗೂ ಆಡಳಿತ ವರ್ಗದ ಕಾರ್ಮಿಕ ವಿರೋಧಿ ಧೋರಣೆಯಿಂದಾಗಿ ದಿನನಿತ್ಯ ಹಲವು ಸಂಕಷ್ಟಗಳನ್ನು ಎದುರಿಸುತ್ತಾ ತೀವ್ರ ಒತ್ತಡದಲ್ಲಿ ದುಡಿಯುತ್ತಿದ್ದಾರೆ. ರಾಜ್ಯದ ಪ್ರಯಾಣಿಕರ ಅವಶ್ಯಕತೆಗಳಿಗೆ ಹಗಲು-ರಾತ್ರಿ ದುಡಿಯುತ್ತಿರುವ ನೌಕರರಿಗೆ ಕಳೆದ 16 ವರ್ಷಗಳಿಂದ ವೇತನ ಹೆಚ್ಚಳದಲ್ಲಿ ಅನ್ಯಾಯ ಮಾಡಲಾಗುತ್ತಿದೆ. ಕೈಗಾರಿಕಾ ವಿವಾದ ಕಾಯ್ದೆ ಅನ್ವಯ ನೌಕರರ ವೇತನ ಹಾಗೂ ಭತ್ಯೆಗಳ ಹೆಚ್ಚಳದ ಬಗ್ಗೆ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಸಮ್ಮತಿಸಿ ಒಪ್ಪಂದಕ್ಕೆ ಆಡಳಿತ ವರ್ಗ ಮತ್ತು ಕಾರ್ಮಿಕ ಸಂಘಗಳ

ಪ್ರತಿನಿಧಿಗಳೊಂದಿಗೆ ಚರ್ಚಿಸಿ ಜಾರಿ ಮಾಡಬೇಕು. ಆದರೆ ಕೆಎಸ್‌ಆರ್‌ಟಿಸಿ ಆಡಳಿತ ವರ್ಗ-ಕೈಗಾರಿಕಾ ಪ್ರಜಾಪ್ರಭುತ್ವ ನೀತಿಗಳಿಗೆ ತಿಲಾಂಜಲಿ ನೀಡಿ, ಕಾನೂನು ಬಾಹಿರ ಹಾಗೂ ಅನ್ಯಾಯದ ಕ್ರಮದಿಂದ ಏಕಪಕ್ಷೀಯವಾಗಿ ತಮಗೆ ತೋಚಿದಷ್ಟು ಕಡಿಮೆ ವೇತನವನ್ನು ನೌಕರರ ಮೇಲೆ ಹೇರಲಾಗುತ್ತಿದೆ. ರಾಜ್ಯ ಸರ್ಕಾರವೂ ಸಹ ಆಡಳಿತ ವರ್ಗದ ಕಾನೂನುಬಾಹಿರ ಹಾಗೂ ಅನ್ಯಾಯದ ಕ್ರಮಗಳಿಗೆ ಬೆಂಬಲ ನೀಡುತ್ತಿದೆ. ಕಳೆದ 2008ರ ವೇತನ ಕೇವಲ ಶೇ.6ರಷ್ಟು ಹೆಚ್ಚಳ ಮಾಡಲಾಗಿದೆ. ಇದೇ ವೇಳೆಯಲ್ಲಿ ರಾಜ್ಯ ಸರ್ಕಾರ ತನ್ನ ನೌಕರರಿಗೆ ಶೇ.17.5ರಷ್ಟು ಹೆಚ್ಚಿಸಿದೆ. ಅಲ್ಲದೇ ಕೆಪಿಟಿಸಿಎಲ್ ನೌಕರರಿಗೆ ಶೇ.25 ರಷ್ಟು ಹೆಚ್ಚಳ ಮಾಡಲಾಗಿದೆ. ರಾಜ್ಯ ಸರ್ಕಾರಿ ನೌಕರರು ಪುನಃ ಮಧ್ಯಾಂತರ ಪರಿಹಾರವಾಗಿ ಶೇ.30ರಷ್ಟು ನೀಡುವಂತೆ ಒತ್ತಾಯಿಸುತ್ತಿದ್ದಾರೆ.

ಆದರೇ ರಾಜ್ಯ ಸರ್ಕಾರದ ಒಡೆತನದಲ್ಲಿಯೇ ಇರುವ ಕೆಎಸ್‌ಆರ್‌ಟಿಸಿ ಸಂಸ್ಥೆಯ ನೌಕರರು ಮಾಡಿರುವ ಪಾಪವಾದರೂ ಏನು? ಇತ್ತೀಚಿನ ದಿನಗಳಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. 01-01-2012 ರಿಂದ ಆಗಬೇಕಾಗಿರುವ ವೇತನ ಹೆಚ್ಚಳ, ಬೆಲೆ ಏರಿಕೆ ಆಧಾರದ ಮೇಲೆ ನ್ಯಾಯ ಸಮ್ಮತವಾಗಿ ಆಗಬೇಕಾಗಿದೆ. ಆಡಳಿತ ವರ್ಗದ ಕಾನೂನು ಬಾಹಿರ ಹಾಗೂ ಅನ್ಯಾಯದ ಕ್ರಮಗಳನ್ನು ತಡೆಗಟ್ಟಿ ಸಂಸ್ಥೆಯ ನಾಲ್ಕು ನಿಗಮದ ನೌಕರರಿಗೆ ಶೇ.30ರಷ್ಟು ವೇತನ ಹೆಚ್ಚಳ ಮಾಡಬೇಕು. ಇಂಕ್ರಿಮೆಂಟ್, ಮೆಡಿಕಲ್, ಶಿಕ್ಷಣ, ಪ್ರಮೋಷನ್ ಹಾಗೂ ಇತರೆ ಎಲ್ಲಾ ಭತ್ಯೆಗಳನ್ನು ಹೆಚ್ಚಿಸಬೇಕು.

ವೈದ್ಯಕೀಯ ಸೌಲಭ್ಯ: ಸಂಸ್ಥೆಯಲ್ಲಿನ ಈಗಿನ ವೈದ್ಯಕೀಯ ಸೌಲಭ್ಯದಿಂದ ಬಹುಪಾಲು ನೌಕರರಿಗೆ ಯಾವುದೇ ಪ್ರಯೋಜನವಿಲ್ಲ. ಈಗಿರುವ ಸೌಲಭ್ಯ ಪಡೆಯಲು ನೌಕರರು ಹರಸಾಹಸ ಮಾಡಬೇಕಾಗಿದೆ. ಸರ್ಕಾರಿ ಆಸ್ಪತ್ರೆ, ಸಂಸ್ಥೆಯೇ ಗೊತ್ತುಪಡಿಸಿರುವ ಖಾಸಗೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೂ ಸಹ ಸಂಪೂರ್ಣ



ಮರುಪಾವತಿ ನೀಡುವುದಿಲ್ಲ. ಹಾಗೂ ನಿಗದಿತ ಅವಧಿಯಲ್ಲಿ ನೀಡುವುದಿಲ್ಲ. ನೌಕರರ ಮತ್ತು ಕುಟುಂಬದ ಸದಸ್ಯರಿಗೆ ಚಿಕಿತ್ಸಾ ವೆಚ್ಚವನ್ನು ಸಂಪೂರ್ಣ ಭರಿಸುವ ಗೋಜಲುಗಳಿಲ್ಲದ ವೈದ್ಯಕೀಯ ಸೌಲಭ್ಯ ವ್ಯವಸ್ಥೆ ಜಾರಿಯಾಗಬೇಕು.

ಟ್ರೈನಿ ಪದ್ಧತಿ: ನೌಕರರನ್ನು ಶೋಷಣೆ ಮಾಡುವ ಉದ್ದೇಶ ಹೊಂದಿದೆ. ಟ್ರೈನಿ ಅವಧಿ 6 ತಿಂಗಳಿಗಿಂತ ಹೆಚ್ಚಿಗೆ ಇರಬಾರದು. ಹಾಗೂ ಸದರಿ ಅವಧಿಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಟ್ರೈನಿ ನೌಕರರನ್ನು ಅತೀವವಾಗಿ ಶೋಷಣೆ ಮಾಡಲಾಗುತ್ತಿದೆ. 3 ರಿಂದ 6 ವರ್ಷಗಳಾದರೂ ಟ್ರೈನಿ ನೌಕರರನ್ನು ಖಾಯಂ ಮಾಡುತ್ತಿಲ್ಲ. 6 ತಿಂಗಳ ಟ್ರೈನಿಂಗ್ ಪೂರೈಸಿದ ಎಲ್ಲಾ ಟ್ರೈನಿಗಳನ್ನು ಪ್ರೊಬೆಷನರಿ ನೀಡಬೇಕು.

8 ಗಂಟೆಗಳ ಅವಧಿ ಕೆಲಸ ಜಾರಿ ಆಗಬೇಕು : ಸಂಸ್ಥೆಯಲ್ಲಿ ಈ ಹಿಂದೆ ಒಂದು ಷೆಡ್ಯೂಲ್‌ಗೆ 9.73 ನೌಕರರು ಕೆಲಸ ನಿರ್ವಹಿಸಲು ನೇಮಕಾತಿ ಮಾಡುತ್ತಿದ್ದರು. ಈಗ ಅದನ್ನು 5ಕ್ಕೆ ಇಳಿಸಲಾಗಿದೆ. ಇದರಿಂದ ನೌಕರರು ವಾರದ ರಜೆ, ಹಕ್ಕಿನ ರಜೆಗಳನ್ನು ಲಂಚ ನೀಡಿ ಪಡೆಯಬೇಕಾಗಿದೆ. ರೀ ಬುಕ್, ತ್ರೀ ಬುಕ್‌ಗೆ ಬಲವಂತವಾಗಿ ಬೆದರಿಸಿ ಕಳುಹಿಸುತ್ತಾರೆ. ಹೆಚ್ಚುವರಿಯಾಗಿ ಮಾಡಿದ ಡ್ಯೂಟಿ ಗಂಟೆಗಳಿಗೆ ನ್ಯಾಯವಾದ, ಕಾನೂನು ರೀತಿ ಪೂರ್ಣ ಪ್ರಮಾಣದ ಓ.ಟಿ. ಹಣ ಪಾವತಿ ಮಾಡುವುದಿಲ್ಲ. ಫಾರಂ ನಂಬರ್ 4 ಅನ್ನು ಅವೈಜ್ಞಾನಿಕವಾಗಿ ಮನಸ್ಸಿಗೆ ಬಂದಂತೆ ತಯಾರು ಮಾಡಿ ದಿನವೊಂದಕ್ಕೆ 12 ರಿಂದ 15 ಗಂಟೆಗಳ ಕಾಲ ಚಾಲಕ-ನಿರ್ವಾಹಕರಿಗೆ ಕೆಲಸವನ್ನು ನಿರ್ವಹಿಸುವಂತೆ ಮಾಡಲಾಗುತ್ತಿದೆ. ತಾಂತ್ರಿಕ ಸಿಬ್ಬಂದಿ ಆಡಳಿತ ಸಿಬ್ಬಂದಿ, ಸಂಚಾರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಯವರಿಗೆ ಅತೀವ ಕೆಲಸದ ಒತ್ತಡ ಹೇರಲಾಗುತ್ತಿದೆ. ದಿನಕ್ಕೆ 8 ರಿಂದ 9ಗಂಟೆ ಅಥವಾ ವಾರಕ್ಕೆ 48 ಗಂಟೆ ಕೆಲಸ ಚಾಲಕ, ನಿರ್ವಾಹಕ ನಿರ್ವಹಿಸಬೇಕೆಂಬ ಕಾನೂನಿದ್ದರೂ ಎಲ್ಲವನ್ನು ಗಾಳಿಗೆ ತೂರಲಾಗಿದೆ. ಪ್ರಯಾಣಿಕರ ಸುರಕ್ಷತೆ ಹಾಗೂ ಸಂಯಮದ ವರ್ತನೆ ಬಹಳ ಮುಖ್ಯವಾಗಿದ್ದಲ್ಲಿ 8 ಗಂಟೆಗಳ ಅವಧಿ ಕೆಲಸ ನಿರ್ವಹಿಸುವ ಪದ್ಧತಿ ಜಾರಿಗೆ ತರಬೇಕಾಗಿದೆ. 8 ಗಂಟೆಗಳ ಕೆಲಸದ ಅವಧಿ ನಿಗದಿಗಾಗಿ ಶತಮಾನಗಳ ಹಿಂದಿನಿಂದ ತ್ಯಾಗ ಬಲಿದಾನಗಳಿಂದ ಹೋರಾಟಗಳು ನಡೆದಿದ್ದರೂ, 8 ಗಂಟೆಗಳ ಕೆಲಸ ಅವಧಿ ಜಾರಿಮಾಡಲು ಸರಕಾರಿ ಸಂಸ್ಥೆಯಲ್ಲಿ ಬೇಡಿಕೆ ಮಂಡಿಸಬೇಕಾದ ದುರಾದೃಷ್ಟ ಪರಿಸ್ಥಿತಿ ಮುಂದುವರೆದಿದೆ. ಷೆಡ್ಯೂಲ್‌ಗಳಿಗೆ ಅಗತ್ಯವಿರುವಷ್ಟು ನೌಕರರನ್ನು ನೇಮಿಸಿಕೊಂಡು ನೌಕರರ ಮೇಲೆ ಹೇರುತ್ತಿರುವ ತೀವ್ರವಾದ ಕೆಲಸದ ಒತ್ತಡವನ್ನು ಕಡಿಮೆಗೊಳಿಸಬೇಕಾಗಿದೆ.

ಮಹಿಳಾ ನೌಕರರನ್ನು ಅತೀವ ಶೋಷಣೆ ಮಾಡಲಾಗುತ್ತಿದೆ. ಮಹಿಳಾ ನೌಕರರು ಕೂಡ ನೈಟ್ ಹಾಲ್ಟ್ ಡ್ಯೂಟಿಗೆ ನಿಯೋಜಿಸಲಾಗುತ್ತಿದೆ. ರಾತ್ರಿ ತಂಗಬೇಕಾದ ಸ್ಥಳಗಳಲ್ಲಿ ಉಳಿದುಕೊಳ್ಳಲು ಯವುದೇ ವ್ಯವಸ್ಥೆ ಇರುವುದಿಲ್ಲ. ಬಸ್ಸ್‌ಗಳಲ್ಲೇ ಮಲಗಬೇಕಾಗುತ್ತದೆ. ಬಸ್ಸುಗಳಲ್ಲಿ ಮಲಗದಿದ್ದರೇ ಶಿಸ್ತು ಕ್ರಮಗಳಿಗೆ ಗುರಿಮಾಡಲಾಗುತ್ತದೆ. ಮಹಿಳೆಯರಿಗೇ ಈ ಸ್ಥಿತಿ ಇರುವಾಗ ಪುರುಷ ನೌಕರರಿಗೆ ರಾತ್ರಿ ತಂಗುವ ಸ್ಥಳಗಳಲ್ಲಿ ಸೌಲಭ್ಯಗಳು ಇರಲು ಸಾಧ್ಯವೇ..? ಮೋಟಾರ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಕಾನೂನು 1961 ರ ಪ್ರಕಾರ ಕಡ್ಡಾಯವಾಗಿ ರಾತ್ರಿ ತಂಗುವ ಸ್ಥಳಗಳಲ್ಲಿ ಅಗತ್ಯ ವ್ಯವಸ್ಥೆಗಳನ್ನು ಮಾಡಲೇಬೇಕು. ರಾಜ್ಯ ಸರಕಾರದ ಒಡೆತನದ ಸಂಸ್ಥೆಯಲ್ಲಿ ಕಾನೂನು ಕಸದ ಬುಟ್ಟಿಗೆ ಸೇರಿಸಲಾಗಿದೆ.

ಹಾಗೆಯೇ 100ಕ್ಕಿಂತಲೂ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುವ ಸಾರಿಗೆ ಸಂಸ್ಥೆಗಳಲ್ಲಿ ತಪ್ಪದೇ ರಿಯಾಯತಿ ಧರದ ಕ್ಯಾಂಟಿನ್ ನಿರ್ವಹಿಸಬೇಕು. ಆದರೇ ಬಹುತೇಕ ಡಿಪೋಗಳಲ್ಲಿ ಕುಡಿಯುವ ನೀರು ಕೂಡ ಸಿಗುವುದಿಲ್ಲ. ಕ್ಯಾಂಟಿನ್ ವ್ಯವಸ್ಥೆ ದೂರದ ಮಾತಾಗಿದೆ. ಕನಿಷ್ಟ ವಿಶ್ರಾಂತಿ ಕೊಠಡಿಯಾಗಲಿ, ಶೌಚಾಲಯವಾಗಲಿ ಇಲ್ಲದೇ ಅನಾಗರೀಕ ಪರಿಸ್ಥಿತಿ ಆವರಿಸಿಕೊಂಡಿದೆ.

ಪ್ರಮೋಷನ್(ಮುಂಬಡ್ತಿ ನೀತಿ): ವ್ಯಕ್ತಿ ಜೀವನದಲ್ಲಿ ಪ್ರೋತ್ಸಾಹ, ಉತ್ತೇಜಕ ವಾತಾವರಣ ಅಗತ್ಯವಾಗಿದೆ. ಆದ್ದರಿಂದ ಡ್ರೈವರು, ಕಂಡಕ್ಟರ್, ಮೈಕಾನಿಕ್, ಕಛೇರಿ ಸಿಬ್ಬಂದಿಗಳಿಗೆ ವೈಜ್ಞಾನಿಕವಾದ ಪ್ರಮೋಷನ್ (ಮುಂಬಡ್ತಿ) ನೀತಿ ರೂಪಿಸಬೇಕು. ಕಾಲಕಾಲಕ್ಕೆ ಪ್ರಮೋಷನ್, ಉತ್ತೇಜನ ನೀಡುವ ಕುರಿತು ದ್ವಿಪಕ್ಷೀಯ ಮಾತುಕತೆಗಳ ಮೂಲಕ ಜಾರಿಗೊಳಿಸಬೇಕು.

ಮೊಬೈಲ್ ಬಳಕೆಯ ಕಿರುಕುಳ ನಿಲ್ಲಬೇಕು. ಲೈನ್ ಚೆಕಿಂಗ್ ಸಿಬ್ಬಂದಿಯ ದಬ್ಬಾಳಿಕೆ ವರ್ತನೆ ನಿಲ್ಲಬೇಕು. ರಜೆ ಅರ್ಜಿಗಳ ನಿರ್ವಹಣೆಗೆ ದಾಖಲೆ ನಿರ್ವಹಿಸಬೇಕು.

ಎನ್.ಐ.ಎನ್.ಸಿ (ಟಿಕೆಟ್ ಕೊಟ್ಟಿಲ್ಲ- ಹಣ ಪಡೆದಿಲ್ಲ) ಪದ್ದತಿ ಆಧಾರದಲ್ಲಿ ವಿಧಿಸುತ್ತಿರುವ ಶಿಸ್ತುಕ್ರಮಗಳು ರದ್ದಾಗಬೇಕು: ಪ್ರಯಾಣಿಕ ಟಿಕೆಟ್ ಪಡೆಯದಿದ್ದಲ್ಲಿ, ಪಡೆದ ಟಿಕೆಟ್ ಕಳೆದುಕೊಂಡಿದ್ದಲ್ಲಿ ಪ್ರಯಾಣಿಕರೇ ಹೊಣೆಗಾರರು ಎಂಬ ನಿಯಮ ಜಾರಿ ಮಾಡಬೇಕು. ನಿರ್ವಾಹಕರನ್ನು ಬಲಿಪಶು ಮಾಡುವುದು ತಪ್ಪಬೇಕು. ಪ್ರಯಾಣಿಕ ಟಿಕೆಟ್ ಕಳೆದುಕೊಂಡಲ್ಲಿ ನಿರ್ವಾಹಕರನ್ನು ಮಾಡದ ತಪ್ಪಿಗೆ ಹೊಣೆ ಮಾಡಬಾರದು. ಮಹಿಳಾ ನಿರ್ವಾಹಕಿಯರಿಗೆ ಡಬ್ಬಲ್/ತ್ರಿಬ್ಬಲ್ ಡ್ಯೂಟಿ ನೀಡಬಾರದು ಹಾಗೂ ಅವರ ಜೊತೆ ಸೌಜನ್ಯದಿಂದ ವರ್ತಿಸಬೇಕು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರತಿ ದಿನ ಪ್ರಯಾಣಿಕರ ಒತ್ತಡ ತೀವ್ರವಾಗಿರುತ್ತದೆ. ಆದ್ದರಿಂದ ಟಿಕೆಟ್ ಕೊಡಲು ಇಟಿಎಂ (ಎಲಾಕ್ಟ್ರಾನಿಕ್ ಟಿಕೆಟ್ ಮೆಸಿನ್) ಒದಗಿಸಬೇಕು.

ವಸತಿ ಗೃಹ: ಪ್ರತಿ ಡಿಪೋಗಳು, ಕಾರ್ಯಾಗಾರಗಳ ಇರುವಲ್ಲಿ ನೌಕರರಿಗೆ ವಸತಿ ಗೃಹಗಳನ್ನು ನಿರ್ಮಿಸುವ ಯೋಜನೆಯನ್ನು ಜಾರಿಗೆ ತರಬೇಕು. ಕೇಂದ್ರ ಸರಕಾರದ ನಗರಗಳ ವರ್ಗೀಕರಣದ ಆಧಾರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಜಾರಿಗೊಳಿಸಬೇಕು.

ವರ್ಗಾವಣೆ ನೀತಿ : ಕಾರ್ಮಿಕ ಸ್ನೇಹಿ ವರ್ಗಾವಣೆ ನೀತಿಯನ್ನು ಜಾರಿಗೆ ತರಬೇಕು. ಐಚ್ಛಿಕ ಹಾಗೂ ಪರಸ್ಪರ ವರ್ಗಾವಣೆ ಬಯಸಿದ ನೌಕರರಿಗೆ ನಿಗಮದಿಂದ ನಿಗಮಕ್ಕೆ ವಿಭಾಗದಿಂದ ವಿಭಾಗಕ್ಕೆ ಡಿಪೋದಿಂದ ಡಿಪೋಗೆ ಶಿಕ್ಷಕರ ವರ್ಗಾವಣೆ ಅಧಿನಿಯಮದ ರೀತಿಯಲ್ಲಿ ಕೌನ್ಸಿಲಿಂಗ್ ಪದ್ಧತಿಯ ಮಾದರಿಯಲ್ಲಿ ವರ್ಗಾವಣೆ ಮಾಡುವ ನೀತಿ ಜಾರಿಗೆ ತರಬೇಕು. ಪಾರದರ್ಶಕವಾಗಿರಬೇಕು. ಇಂತಹ ಪಾರದರ್ಶಕ ವರ್ಗಾವಣೆ ನೀತಿ ಜಾರಿ ಮಾಡುವುದರಿಂದ

ಪುಟ 14ಕ್ಕೆ

ಮೋದಿ ಉಪವಾಸ ಮತ್ತು ಬಿಜೆಪಿ ಕಿತ್ತಾಟ ವ್ಯಂಗ್ಯ ಮತ್ತು ಪ್ರಹಸನ


'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸೆಪ್ಟೆಂಬರ್-22ರ ಸಂಚಿಕೆಯ ಸಂಪಾದಕೀಯ ಆಧರಿಸಿ

ಉಪವಾಸದ ಉನ್ನತ ಮೌಲ್ಯಗಳನ್ನೆಲ್ಲ ಅಪಹಾಸ್ಯಕ್ಕೀಡು ಮಾಡಿದ ಗುಜರಾತ್ ಮುಖ್ಯ ಮಂತ್ರಿಯ ಉಪವಾಸ ಸದ್ಭಾವನೆಗಾಗಿ ಮಾಡಿದ ಉಪವಾಸವಂತೂ ಅಲ್ಲ. ಈ ಎಲ್ಲ ಮೇಳಗಳ, ಅವತಾರಗಳ ಫಲಿತಾಂಶ ಏನೇ ಇರಲಿ, ವಾಸ್ತವತೆಯಂತೂ ಸ್ಪಷ್ಟ- ಆರೆಸ್ಸೆಸ್/ಬಿಜೆಪಿ ಕೇಂದ್ರದಲ್ಲಿ ರಾಜಕೀಯ ಅಧಿಕಾರವನ್ನು ಹೇಗಾದರೂ ಮತ್ತೆ ಪಡೆಯಲೇ ಬೇಕೆಂಬ ಹತಾಶ ಪ್ರಯತ್ನದಲ್ಲಿದೆ. ಅದಕ್ಕಾಗಿ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸಲು, ಇಂತಹ ವೋಟ್ ಬ್ಯಾಂಕ್ ರಾಜಕೀಯದ ಅತ್ಯಂತ ಹೊಲಸು ಮಾದರಿಯಿಂದ ಪ್ರಯೋಜನ ಪಡೆಯಲು ಯಾವ ಮಟ್ಟಕ್ಕೂ ಅದು ಇಳಿಯಬಲ್ಲದು.

ಒಂದು ಉಪವಾಸಕ್ಕಿರುವ ಉನ್ನತ ಮೌಲ್ಯಗಳನ್ನೆಲ್ಲ ಸಂಪೂರ್ಣವಾಗಿ ಅಪಹಾಸ್ಯಕ್ಕೀಡು ಮಾಡುತ್ತ ಗುಜರಾತಿನ ಮುಖ್ಯಮಂತ್ರಿಗಳು ಮೂರು ದಿನಗಳ ಉಪವಾಸದ ಮೇಳವನ್ನು ಆಡಂಬರಭರಿತ ದಾವೆಗಳೊಂದಿಗೆ ಕೊನೆಗೊಳಿಸಿದರು. ಎಲ್ಲ ರಾಷ್ಟ್ರೀಯ ದೈನಿಕಗಳಲ್ಲಿ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿಯೂ ಬಣ್ಣ-ಬಣ್ಣದ ಜಾಹೀರಾತುಗಳಿಗೆ ಕೋಟಿ-ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಯಿತು, ದುಡ್ಡು ಕೊಟ್ಟ ಸುದ್ದಿಯ ಮಾದರಿಯಲ್ಲಿ ಅನುಕೂಲಕರ ಪ್ರಚಾರ ಸಿಗದಿದ್ದರೂ, ವೈಷಮ್ಯರಹಿತ ಪ್ರಚಾರವಾದರೂ ಸಿಗಲಿ ಎಂದು.

ಆದರೇನು ಮಾಡುವುದು, ಈ ಪೂರ್ವ-ನಿಯೋಜಿತ ಪ್ರದರ್ಶನದಲ್ಲಿನ ತಮಾಷೆ ಮತ್ತು ಪ್ರಹಸನ ಗೋಚರಿಸದಿರಲು ಸಾಧ್ಯವಿಲ್ಲ. ಪ್ರಾಯಶ್ಚಿತ್ತದ ಒಂದು ಮಾರ್ಗವಾಗಿ ಉಪವಾಸ ಎಂಬುದನ್ನು ಒಂದು ಸಾರ್ವತ್ರಿಕ ಮೌಲ್ಯವಾಗಿ ಎಲ್ಲ ಮತ-ಧರ್ಮಗಳೂ ಮಾನ್ಯ ಮಾಡಿವೆ. ಯೆಹೂದೀಯರು ಯೊಮ್ ಕಿಪ್ಪುರ್ ಅಂದರೆ ಪ್ರಾಯಶ್ಚಿತ್ತದ ದಿನದಂದು ಉಪವಾಸವಿಡುತ್ತಾರೆ. ಕ್ರೈಸ್ತರು ಲೆಂಟ್ ಆಚರಿಸುತ್ತಾರೆ. ಮುಸ್ಲಿಮರಿಗೆ ರಮಝಾನ್ ಉಪವಾಸದ ತಿಂಗಳು. "ಉಪವಾಸ ಮಾಡುವುದು, ನಿನಗೆ ತಿಳಿದಿದ್ದರೆ, ನಿನಗೇ ನೀನೇ ಒಳಿತು ಮಾಡಿಕೊಳ್ಳುವುದು" ಎನ್ನುತ್ತದೆ ಕುರಾನ್: ಅದೇ ರೀತಿ ಹಿಂದೂಧರ್ಮ, ಜೈನಧರ್ಮಗಳು ಶುದ್ಧೀಕರಣಕ್ಕೆ, ಪ್ರಾಯಶ್ಚಿತ್ತಕ್ಕೆ ಉಪವಾಸ ಆಚರಣೆಗಳಿಂದ ತುಂಬಿವೆ. ಗಾಂಧೀಜಿ ಇದನ್ನು ಹೋರಾಟದ ಒಂದು ಆಧ್ಯಾತ್ಮಿಕ ಸಾಧನದ ಮಟ್ಟಕ್ಕೇರಿಸಿದರು, ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರು. ದುರದೃಷ್ಟವಶಾತ್, ಕೆಲವೊಮ್ಮೆ, ಬ್ರಿಟಿಶ್ ಆಳ್ವಿಕೆಯ ವಿರುದ್ಧ ಏರುತ್ತಿದ್ದ ಸಾರ್ವಜನಿಕ ಉತ್ಕ್ರಾಂತಿಯ ಚೈತನ್ಯವನ್ನು, ಚೌರಿಚೌರಾದ ಘಟನೆಯಲ್ಲಾದಂತೆ, ತಣ್ಣಗಾಗಿಸಲು ಕೂಡ ಬಳಸಿದ್ದೂ ಇದೆ.

ಆದರೆ, ಮೋದಿಯ ಉಪವಾಸ ಇವೆಲ್ಲ ಉನ್ನತ ಮೌಲ್ಯಗಳನ್ನು ಅಪಹಾಸ್ಯಕ್ಕೀಡು



ಮಾಡಿದೆ. ಇದು 'ವೋಟ್ ಬ್ಯಾಂಕ್ ರಾಜಕೀಯ'ವನ್ನು ಅಂತ್ಯಗೊಳಿಸುವ 'ಸದ್ಭಾವನಾ' ಕ್ರಿಯೆ ಎಂದರು. ಅತೀ ಕೆಟ್ಟ 'ವೋಟ್ ಬ್ಯಾಂಕ್ ರಾಜಕೀಯ'ವನ್ನು ನಡೆಸಿದ, ತನ್ನದೇ ನೇತೃತ್ವದಲ್ಲಿ ನಡೆದ ಕೋಮುವಾದಿ ನರಮೇಧಕ್ಕೆ ಬಲಿಯಾದ ಸಾವಿರಾರು ಮಂದಿಯ ರಕ್ತ ಮೆತ್ತಿದ ಕೈಗಳಿಂದ ತನ್ನ ಮುಖ್ಯಮಂತ್ರಿ ಹುದ್ದೆಯನ್ನು ಉಳಿಸಿಕೊಂಡ, ಬಿಜೆಪಿಯ ಗೆಲುವನ್ನು ಪಡೆದುಕೊಂಡ ಒಬ್ಬ ವ್ಯಕ್ತಿಯ ಇಂತಹ ಮಾತುಗಳ ಎದುರು ವಿಶ್ವಾಸಘಾತ ಮತ್ತು ವಂಚನೆಯ ಈ ಹಿಂದಿನ ಎಲ್ಲಾ ಕೃತ್ಯಗಳು ಕೂಡ ತಲೆ ತಗ್ಗಿಸುವಂತಾಗಿದೆ.

ಮಾಸಲಾರದ ಗಾಯ

ತನ್ನ ಅಡಿಯಲ್ಲಿ ಗುಜರಾತ್ ಸದಾ ಸಂವಿಧಾನಿಕ ದಾರಿ ಅನುಸರಿಸಿದೆ ಎಂದು ಹೇಳಿಕೊಂಡಿದ್ದಾರೆ ಮೋದಿ. ಗುಜರಾತಿನ 2002ರ ಕೋಮುವಾದಿ ನರಮೇಧವನ್ನು ಎಲ್ಲ ಸಂವಿಧಾನಿಕ ಸಂಸ್ಥೆಗಳು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಹೆಚ್‌ಆರ್‌ಸಿ), ಚುನಾವಣಾ ಆಯೋಗ ಇತ್ಯಾದಿ ಸಂಸ್ಥೆಗಳು ಹಾಗೂ ಹತ್ತು-ಹಲವು ಸರಕಾರಿಯೇತರ ಸಂಘಟನೆ ಗಳು ಖಂಡಿಸಿವೆ. ಎನ್‌ಹೆಚ್‌ಆರ್‌ಸಿಯಂತೂ 2002ರ ಗಲಭೆಗಳು ಭುಗಿಲೆದ್ದಾಗ, "ಇದಕ್ಕೆ ಬಲಿಯಾದವರ ನಡುವೆ ವ್ಯಾಪಿಸಿದ್ದ ಅಭದ್ರತೆಯ ಭಾವ ಸಮಾಜದ ಎಲ್ಲ ವಿಭಾಗಗಳಿಗೆ ವಿಸ್ತರಿಸಿತ್ತು" ಎಂದು ಗಮನಿಸಿತ್ತು. ವಾಸ್ತವವಾಗಿ, ಎನ್‌ಹೆಚ್‌ಆರ್‌ಸಿಯ ವರದಿ ನೆರವಿನ ಮೊರೆಗೆ ಹೇಗೆ ಪೋಲೀಸರು ಉದ್ದೇಶ ಪೂರ್ವಕವಾಗಿಯೇ ಓಗೊಡಲಿಲ್ಲ, ಅದರಿಂದಾಗಿ ಕೊನೆಗೆ ಮಾಜಿ ಸಂಸತ್ ಸದಸ್ಯ ಎಹಸಾನ್ ಝಫ್ರಿಯ ಅಮಾನುಷ ಹತ್ಯೆಯಾಯಿತು, ಹೈಕೋರ್ಟಿನ ಹಾಲಿ ನ್ಯಾಯಾಧೀಶರ ಮೊರೆಗಳಿಗೂ ಪೋಲೀಸರು ಸ್ಪಂದಿಸಲಿಲ್ಲ ಎಂಬುದನ್ನು ಗಮನಿಸುತ್ತಾ "ಹೈಕೋರ್ಟ್ ನ್ಯಾಯಾಧೀಶರ ಭದ್ರತೆಯ ಅಗತ್ಯಗಳಿಗೆ ಇಷ್ಟೊಂದು ನಿಕೃಷ್ಟವಾಗಿ ಸ್ಪಂದಿಸಿರುವಾಗ, ಇವರಷ್ಟು ಪ್ರತಿಷ್ಠೆಯೇನೂ ಇರದ ಇತರರ ಅಗತ್ಯಗಳಿಗೆ ಸ್ಪಂದನೆ ಇನ್ನೂ ಕೆಟ್ಟದಾಗಿರಲೇಬೇಕು ಎಂದು ಊಹಿಸಿಕೊಳ್ಳಬೇಕಷ್ಟೇ" ಎಂದಿದೆ. ಗುಜರಾತಿನ ಸನ್ನಿವೇಶ "ರೋಮ್ ಉರಿಯುತ್ತಿದ್ದಾಗ, ನೀರೋ ಪಿಟೀಲು ಬಾರಿಸುತ್ತಿದ್ದ" ಎಂಬಂತಿತ್ತು-ಇದು ಎನ್‌ಹೆಚ್‌ಆರ್‌ಸಿ ಸಾರಾಂಶ ರೂಪದಲ್ಲಿ ಹೇಳಿರುವ ಮಾತು. 2002ರಲ್ಲಿ ಮೋದಿ ಆಡಳಿತದ ತೀವ್ರ ಖಂಡನೆ ವಿಶದವಾಗಿ, ವಿವರವಾಗಿ ದಾಖಲಾಗಿದೆ.

ಇನ್ನು ಗುಜರಾತ್ ಮಾದರಿ ಆಡಳಿತ ಎಲ್ಲ ಜನವಿಭಾಗಗಳಿಗೆ ಪ್ರಯೋಜನಕಾರಿಯಾಗುತ್ತದೆ ಎಂಬ ದಾವೆಗೆ ಸಂಬಂಧಪಟ್ಟಂತೆ, ಒಂದು ಸಂಗತಿಯನ್ನು ಪರಿಗಣಿಸಿ-ಒಂದು ದಶಕದ ನಂತರವೂ ಈಗಲೂ ಗುಜರಾತಿನ ಹನ್ನೊಂದು ಜಿಲ್ಲೆಗಳಲ್ಲಿ 45 ಶಿಬಿರಗಳಲ್ಲಿ 21,148 ಆಂತರಿಕವಾಗಿ ನಿರಾಶ್ರಿತರಾದವರು ವಾಸಿಸುತ್ತಿದ್ದಾರೆ! ಮೋದಿ ಯಾವುದೇ ಪರಿತಾಪವಿಲ್ಲದೆ "ಗಾಯಗಳು ಮಾಸುವಂತೆ ಅಭಿವೃದ್ಧಿಯ ಮಂತ್ರ ಕೊಟ್ಟಿದ್ದೇನೆ" ಎನ್ನುತ್ತಾರೆ.

ಇಂತಹ ಆಡಳಿತ ಮಾದರಿಯ ಬಗ್ಗೆ ಬಹಳಷ್ಟು ಹೇಳಲಾಗುತ್ತಿದೆ. ಸಿವಿಲ್ ಇಂಜಿನಿಯರಿಂಗ್‌ನ ಕೌತುಕಗಳಾದ ಆಧುನಿಕ ಹೆದ್ದಾರಿಗಳು ಮತ್ತು ಎಕ್ಸ್‌ಪ್ರೆಸ್ ಮಾರ್ಗಗಳ ಆರಂಭಿಕ ರೂಪದಂತಿರುವ ಜರ್ಮನಿಯ ರಾಜಮಾರ್ಗಗಳನ್ನು ಕಟ್ಟಿದ್ದು ಹಿಟ್ಲರ್ ತಾನೇ ಎಂಬ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಎರಡನೇ ಮಹಾಯುದ್ಧದ ನಂತರದ ಜಗತ್ತನ್ನು ಆಳುವುದಕ್ಕಾಗಿ ತನ್ನ ಸೇನೆಯ ತ್ವರಿತ ಸಾಗಾಣಿಕೆಗೆ ಬೇಕಾಗುತ್ತದೆಂದು ಆತ ಈ ರಸ್ತೆಗಳನ್ನು ನಿರ್ಮಿಸಿದ್ದ. ಈ ಪ್ರಕ್ರಿಯೆಯಲ್ಲಿ ಆತ ಮಾನವತೆಯ ವಿರುದ್ಧ ಆಧುನಿಕ ಇತಿಹಾಸದಲ್ಲಿ ದಾಖಲಾಗಿರುವ ಅತ್ಯಂತ ಹೀನ ಕೃತ್ಯಗಳನ್ನು ಎಸಗಿದ್ದಾನೆ. ಅದೇ ರೀತಿ ಮುಸೊಲಿನಿಯ ಫ್ಯಾಸಿಸ್ಟ್ ಸರ್ವಾಧಿಕಾರ ರೈಲುಗಳು ಸಮಯಕ್ಕೆ ಸರಿಯಾಗಿ ನಡೆಯುತ್ತಿವೆ ಎಂದು ಹೆಮ್ಮೆಯಿಂದ ಹೇಳಿಕೊಂಡಿತ್ತು. ಅ ದಿನಗಳ ಇಟಲಿಯಲ್ಲಿ ಅದೊಂದು ಅಭೂತಪೂರ್ವ ಬೆಳವಣಿಗೆಯೇ ಆಗಿತ್ತು. ನಮ್ಮ ಅಂಗಳಕ್ಕೇ ಬಂದರೆ, ಇಂದಿರಾಗಾಂಧಿಯವರ ತುರ್ತು ಪರಿಸ್ಥಿತಿ ಉತ್ತಮ ಆಡಳಿತ ಕೊಟ್ಟಿತು, ಯಾಕೆಂದರೆ ಸರ್ಕಾರಿ 'ಬಾಬುಗಳು' ಸಮಯಕ್ಕೆ ಸರಿಯಾಗಿ ಕಚೇರಿಗಳಿಗೆ ಬಂದು ಕಡತಗಳನ್ನು ವಿಲೇವಾರಿ ಮಾಡುತ್ತಿದ್ದರು ಎನ್ನುವವರಿದ್ದಾರೆ. ಫ್ಯಾಸಿಸ್ಟ್ ಮತ್ತು ಸರ್ವಾಧಿಕಾರಶಾಹಿ ಆಡಳಿತಗಳು ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಮೊಟಕು ಮಾಡಲು, ಹಾಗೂ ದಮನ, ನರಮೇಧದ ಹೇಳಲಾಗದ ಅಪರಾಧಗಳನ್ನು ಸಮರ್ಥಿಸಿಕೊಳ್ಳಲು ಶಿಸ್ತು ಮತ್ತು ವ್ಯವಸ್ಥೆ ತಮ್ಮ ಸಾಧನೆಗಳೆಂದು ಸಾರಿಕೊಳ್ಳುವುದು ಸಾಮಾನ್ಯ ಸಂಗತಿ.

ಈ ಪರಿಯ 'ಗುಜತಾತ್ ಮಾದರಿ'

ಇಂತಹ 'ಮಾದರಿ ಆಳ್ವಿಕೆ'ಯನ್ನು ಆರೆಸ್ಸೆಸ್ ಮತ್ತು ಬಿಜೆಪಿ ಮುಖಂಡರು ಹಾಡಿ ಹೊಗಳುತ್ತ ಗುಜರಾತ್ ಆರ್ಥಿಕ ಬೆಳವಣಿಗೆಯ ನೇತಾರನಾಗಿ ಮೂಡಿ ಬಂದಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಎಷ್ಟೆಂದರೆ, ಜಯಲಲಿತಾರ ಎಐಡಿಎಂಕೆ ತನ್ನ ಸೌಹಾರ್ದ ವ್ಯಕ್ತಪಡಿಸಲು ಸಂಸದೀಯ ಮುಖಂಡರನ್ನು ಅಲ್ಲಿಗೆ ಕಳಿಸಿದೆ! ಆದರೆ ಎನ್‌ಡಿಎ ನಲ್ಲಿ ಬಿಜೆಪಿಯ ಮಿತ್ರ, ಬಿಹಾರ ಮುಖ್ಯ ಮಂತ್ರಿ ನಿತೀಶ್ ಕುಮಾರ್ ರವರ ಜೆಡಿ(ಯು) ಇದರಲ್ಲಿ ಭಾಗವಹಿಸಲು ನಿರಾಕರಿಸಿತು-ಇದು ಎನ್‌ಡಿಎಯೊಳಗಣ ಆಳವಾದ ಬಿರುಕಿನ ಪ್ರತಿಫಲನವಾಗಿತ್ತು.

ಪ್ರಮಾಣಸಹಿತ, ಅಧಿಕಾರಯುತವಾಗಿ ಹೇಳಬೇಕಾದರೆ, ಯೋಜನಾ ಆಯೋಗದ ಉಪಾಧ್ಯಕ್ಷರು ಮೇ 2010ರಲ್ಲಿ ಗುಜರಾತದ ಮುಖ್ಯ ಮಂತ್ರಿಗಳಿಗೆ ಬರೆದ ಒಂದು ಪತ್ರವನ್ನು ನೋಡಬಹುದು. ಅದರ ಪ್ರಕಾರ, ಗುಜರಾತದ ಆರ್ಥಿಕ ಸೂಚ್ಯಂಕಗಳು ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದ ಸೂಚ್ಯಂಕಗಳಿಗಿಂತ ಹಿಂದೆ ಬಿದ್ದಿವೆ, ಅಷ್ಟೇ ಏಕೆ, ರಾಷ್ಟ್ರೀಯ ಸರಾಸರಿ 7.1% ಕ್ಕಿಂತಲೂ

ಪುಟ 10ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



ಪಾಳೆಗಾರಿ ವ್ಯವಸ್ಥೆಯನ್ನು ಮೋಹಿಸುತ್ತಲೇ ಅದರ ಒಳಹೊರಗನ್ನು ಬಿಡಿಸಿಟ್ಟ ಡಾ॥ ಕಂಬಾರರಿಗೆ ಜ್ಞಾನಪೀಠ

ಜಿ.ಎನ್.ನಾಗರಾಜ್

ಕನ್ನಡ ಸಾಹಿತ್ಯಕ್ಕೆ ಎಂಟನೆಯ ಪ್ರಶಸ್ತಿಯಾಗಿ ಡಾ॥ ಚಂದ್ರಶೇಖರ ಕಂಬಾರರಿಗೆ 2010ರ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಸಾಹಿತ್ಯಾಸಕ್ತರು ಸಾಮಾನ್ಯ ಜನರು ಹೆಮ್ಮೆಪಡುತ್ತಿದ್ದಾರೆ. ತಮ್ಮ ಸಾಹಿತ್ಯ ಪ್ರತಿಭೆ ಮತ್ತು ಕೌಶಲ್ಯಕ್ಕಾಗಿ ಈ ಪ್ರಶಸ್ತಿ ಪಡೆದ ಕಂಬಾರರಿಗೆ ಅಭಿನಂದನೆಗಳು. ಡಾ॥ ಕಂಬಾರರು ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಠ, ವಿಭಿನ್ನ ಸಾಹಿತಿ. ಜನರಿಂದ ದೂರವಾಗಿ ಶ್ರೇಷ್ಠರಿಗಾಗಿ ಶ್ರೇಷ್ಠರು(?) ಏಕಾಂತದಲ್ಲಿ ಬರೆಯುವ ನವ ಸಾಹಿತಿಗಳ ವೃಂದದಲ್ಲಿ ನಾದಕ ಸಂಗೀತಕ್ಕೊಗ್ಗುವ ಹಾಡುಗಳನ್ನು ಬರೆದು ಜನಪ್ರಿಯರಾದವರು. ಕವನ, ಕಾವ್ಯ, ನಾಟಕ, ಕಾದಂಬರಿ, ಸಿನಿಮಾ, ನಿರ್ದೇಶನ ಸಂಗೀತ ನಿರ್ದೇಶನ ಮೊದಲಾದ ವೈವಿಧ್ಯಮಯ ಸೃಜನಶೀಲ ಚಟುವಟಿಕೆಗಳಲ್ಲಿ ಯಶಸ್ಸು ಪಡೆದ ಕೆಲವೇ ಅಪರೂಪದ ಸಾಹಿತಿಗಳಲ್ಲೊಬ್ಬರು.

ಜಾನಪದ ಸಾಹಿತ್ಯದ ಲಯ, ಗೇಯತೆ, ಪುರಾಣಗಳನ್ನು ಬಳಸಿ ಆಧುನಿಕ ಪ್ರಪಂಚದ ಸಂಘರ್ಷಗಳನ್ನು ಚಿತ್ರಿಸಿದ ಈ ದೃಷ್ಟಿಯಿಂದಲೂ ವಿಶಿಷ್ಠರಾದವರು. ಕನ್ನಡ ಸಾಹಿತಿಗಳನೇಕರು ಆ ಕಾರಣಕ್ಕಾಗಿಯೇ ಕಂಬಾರರು ಹಿಂದುಳಿದ, ಕೆಳವರ್ಗಧ ಪರ ಎಂದು ಹಿಗ್ಗುತ್ತಿದ್ದಾರೆ.

"ಹೇಳತೇನ ಕೇಳ ಗೆಳೆಯ ನಿನಮುಂದ
ಕತಿಯೊಂದ
ನನಮುಂದ ಕೂಂಡ್ರ ಹಿಂಗ ತೆರೆದ ಮನಾ"

ಎಂದು ಅವರು ಸಾಹಿತ್ಯಕ್ಕೆ ಹೆಜ್ಜೆಯಿರಿಸಿದ ದಿನದಿಂದ ಹೇಳುತ್ತಲೇ ಇದ್ದಾರೆ, ಹಾಡುತ್ತಲೇ ಇದ್ದಾರೆ.

'ಏನ ಹೇಳಲೆವ್ವಾ ಭಾರತಿ,
ಜಗದೊಳಗೆಲ್ಲಾ ಹಬ್ಬೇತವ್ವಾ ನಿನ್ನ ಕೀರುತಿ'

ಎನ್ನುತ್ತಲೇ ಭಾರತದ ಆಧುನಿಕ ರಾಜಕೀಯವನ್ನು ಟೀಕೆಗೆ ಗುರಿ ಮಾಡಿದ ಕಂಬಾರರ ವ್ಯಂಗ್ಯದ ಚಾಟಿ ಬಹಳ ಹರಿತವಾದದ್ದು.

ಪಾಳೆಯಗಾರಿ ಸಮಾಜ ಮತ್ತು ಮೌಲ್ಯಗಳನ್ನು ದೇವ, ದೇವಿಯರನ್ನು ಅವರ ಜಾತ್ರೆಗಳನ್ನು ಗೌಡ, ಕುಲಕರ್ಣಿಗಳನ್ನು ಅವರ ನ್ಯಾಯ, ಪಂಚಾಯ್ತಿಗಳ ಲೋಕವನ್ನು ಮೆಚ್ಚುವ ಕಂಬಾರರು ಆಧುನಿಕ ಪ್ರಪಂಚದ ಶಾಲೆ, ಪಂಚಾಯ್ತಿ ಪತ್ರಿಕೆಗಳನ್ನು ವಿಡಂಬನೆಗೆ ಗುರಿ ಮಾಡಿದರು. ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾದ ಇವುಗಳನ್ನು ಟೀಕೆ ಮಾಡುವ ಭೂ ಸುಧಾರಣೆಯ ವಿರೋಧಿಗಳಾದ ಇವರು

ಪಾಳೆಯಗಾರಿ ಸಮಾಜ ಮತ್ತು ಮೌಲ್ಯಗಳನ್ನು ದೇವ, ದೇವಿಯರನ್ನು ಅವರ ಜಾತ್ರೆಗಳನ್ನು ಗೌಡ, ಕುಲಕರ್ಣಿಗಳನ್ನು ಅವರ ನ್ಯಾಯ, ಪಂಚಾಯ್ತಿಗಳ ಲೋಕವನ್ನು ಮೆಚ್ಚುವ ಕಂಬಾರರು ಆಧುನಿಕ ಪ್ರಪಂಚದ ಶಾಲೆ, ಪಂಚಾಯ್ತಿ ಪತ್ರಿಕೆಗಳನ್ನು ವಿಡಂಬನೆಗೆ ಗುರಿ ಮಾಡಿದರು. ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಾದ ಇವುಗಳನ್ನು ಟೀಕೆ ಮಾಡುವ ಭೂ ಸುಧಾರಣೆಯ ವಿರೋಧಿಗಳಾದ ಇವರು ಪರಂಪರೆಯ ಆರಾಧಕರು, ಪ್ರತಿಗಾಮಿ ಮನೋಭಾವದವರು ಎಂದು ಟೀಕಿಸಬೇಕೆನ್ನು ವಷ್ಟರಲ್ಲಿಯೇ ಜೋಕುಮಾರಸ್ವಾಮಿ ನಾಟಕ, ಸಂಗೀತ ಸಿನಿಮಾ, ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳ ಮೂಲಕ ಪಾಳೆಯಗಾರಿ ಸಂಸ್ಕೃತಿಯ ಅವನತಿಯ ಮುಖಗಳನ್ನು ಕ್ರೌರ್ಯವನ್ನು ಬಿಚ್ಚಿಟ್ಟರು.

ಪರಂಪರೆಯ ಆರಾಧಕರು, ಪ್ರತಿಗಾಮಿ ಮನೋಭಾವದವರು ಎಂದು ಟೀಕಿಸಬೇಕೆನ್ನುವಷ್ಟರಲ್ಲಿಯೇ ಜೋಕುಮಾರಸ್ವಾಮಿ ನಾಟಕ, ಸಂಗೀತ ಸಿನಿಮಾ, ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಗಳ ಮೂಲಕ ಪಾಳೆಯಗಾರಿ ಸಂಸ್ಕೃತಿಯ ಅವನತಿಯ ಮುಖಗಳನ್ನು ಕ್ರೌರ್ಯವನ್ನು ಬಿಚ್ಚಿಟ್ಟರು. ಹೀಗೆ ಅವರ ಅನೇಕ ಕೃತಿಗಳ ಓದು ಪಾಳೆಯಗಾರಿ ಸಮಾಜದ ರಚನೆ, ಕ್ರಿಯೆ, ಸಂಸ್ಕೃತಿ, ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಉತ್ತಮ ಸಾಧನ. ಕರ್ನಾಟಕದ ಯಾವ ಇತಿಹಾಸಕಾರರೂ, ಸಮಾಜ ವಿಜ್ಞಾನಿಗಳೂ ಕೂಡ ವಿವರಿಸದ ಒಳನೋಟಗಳು ಕಂಬಾರರ ಕೃತಿಗಳಲ್ಲಿವೆ. ಈಗಿನ ಗದಗ ಜಿಲ್ಲೆಯ ನರಗುಂದದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಅಲ್ಲಿನ ಪಾಳೇಗಾರಿ ಸಮಾಜದ ವಾಸ್ತವವನ್ನು ಅರ್ಥೈಸಿಕೊಳ್ಳಲು ಕಂಬಾರರ ಕೃತಿಗಳು ಬಹುವಾಗಿ ಸಹಾಯಕವಾದುವು. ಪಾಳೆಯಗಾರಿ ಸಮಾಜದ ಅಡಿಪಾಯವೇ ಭೂಮಿಯ ಒಡೆತನ. ಭೂ ಸುಧಾರಣೆ ಈ ಅಡಿಪಾಯವನ್ನು ಅಲುಗಾಡಿಸಿ ಪಾಳೆಯಗಾರಿ ಸಮಾಜದ ಧಣಿಗಳನ್ನು ಹೊಸಕಿ ಹಾಕುತ್ತದೆ. ಪ್ರಜಾಪ್ರಭುತ್ವ ಕಾನೂನಿನ ಆಡಳಿತ ಈ ವ್ಯವಸ್ಥೆಯನ್ನು ಹಾಸ್ಯಾಸ್ಪದ ಪುರಾತನ ಅವಶೇಷಗಳನ್ನಾಗಿಸುತ್ತದೆ ಎಂಬುದನ್ನು ಚೆನ್ನಾಗಿ ಅರಿತ ಕಂಬಾರರು ತಮ್ಮ ಕೃತಿಗಳಲ್ಲಿ ಈ ಸಂಬಂಧಗಳನ್ನು ಸಶಕ್ತವಾಗಿ ಬಣ್ಣಿಸಿದ್ದಾರೆ. "ಜೋಕುಮಾರಸ್ವಾಮಿ" ನಾಟಕದ ನಾಯಕ ಷಂಡತನಕ್ಕೆ ತುತ್ತಾದ ಭೂ ಒಡೆಯ, ಅವನ ಹೆಂಡತಿ ಗೇಣಿದಾರ ಬಸಣ್ಣನ ಸಂಗ ಮಾಡುವ ಪರಿಸ್ಥಿತಿಗೆ ತುತ್ತಾಗುತ್ತಾಳೆ ಎನ್ನುವಂತೆ ವರ್ಣಿಸಿದ್ದಾರೆ..

ಪಾಳೆಯಗಾರಿ ಭೂ ಸಂಬಂಧ ಗಳಿಗೂ, ಕ್ರಾಂತಿಕಾರಿ ಪ್ರಕ್ರಿಯೆಗೂ ಇರುವ ಅಂತರ್ಸಂಬಂಧವೂ ಅವರಿಗೆ ಅರಿವಾಗಿದೆ. ಜೈಸಿದ ನಾಯಕ ಇಂತಹ ಅರಿವಿನ ಹಿಮ್ಮುಖದ ಚಲನೆಯ ಫಲ. ಕಂಬಾರರಿಗೆ ಪಾಳೆಯಗಾರಿ ಸಂಬಂಧಗಳು ಉಳಿಯಬೇಕು. ಆ ಸಂಸ್ಕೃತಿ ಬಾಳಬೇಕು ಅದಕ್ಕಾಗಿ ಪಾಳೆಯಗಾರಿಯ ವಿರುದ್ಧ ಹೋರಾಟದಲ್ಲಿ ಒಡಕು ತಂದು ಅದು ಸೋಲುವಂತೆ ಮಾಡುತ್ತಾರೆ.

ಮಾವೋತ್ಸೆ ತುಂಗರ ಬಗ್ಗೆ ಕಂಬಾರರ ದ್ವೇಷ–ಪ್ರೇಮದ ಸಂಬಂಧವೂ ಪಾಳೆಯಗಾರಿ ಸಮಾಜ ಮತ್ತು ಅದರ ವಿರುದ್ಧದ ಕ್ರಾಂತಿಕಾರಿ ಪ್ರಕ್ರಿಯೆಗಳ ಬಗೆಗಿನ ಆಳವಾದ ಅರಿವಿನಫಲ.

'ಮರತೇನೆಂದರ ಮರೆಯಲಿ ಹ್ಯಾಂಗ
ಮಾವೋತ್ಸೆತುಂಗ
ಕಣ್ಣೀರಿನ ಹೊಳೆಗಡ್ಡಗಟ್ಟಿದಿ
ಹರಿವ ನೆತ್ತರಕ ಒಡ್ಡಕಟ್ಟಿದೆ'

ಹಹ್ಹಾ **'ಬೆಂಕಿಯಾರಿ ಬರಿ ಬೆಳಕುಳಿದಿತ್ತೊ'** ಎಂದು ಅವರ ನಿಧನದ ಬಗ್ಗೆ ಸಂತಾಪಪಡುವ ಕಂಬಾರರೇ

ಮನಪೇರ ಮುರದಿ
ತೇರ ಕಟ್ಟಿದಿ
ಹತ್ತವತಾರದ ಕುದುರಿಯ ಜೋಡಿ
ಹತ್ತಕುದರಿಯ ಹಳದಿದೇವರೋ
ಸ್ವಯಂ ಸೂರ್ಯ ನಾ ಬಂದೇನೆಂದ್ಯೋ

ಎಂದು

ಗ್ಲೋಬಿನರ್ಥಕ ಸಾಯೋದ ಕಲಿಸಿ
ಸ್ವಥಾ ಸಾಯೋದಿಕೆ ಬಾರದೆ ಹೋದಿ

ಎಂದೂ ಅಪವಾದ ಹೊರಿಸುತ್ತಾರೆ. ಆ ಮೂಲಕ ಮಾರ್ಕ್ಸ್‌ವಾದದ ಬಗ್ಗೆ ಬಂಡವಾಳ ಶಾಹಿ ಪತ್ರಿಕೆಗಳ ಕುತ್ಸಿತ ಟೀಕೆಗಳನ್ನು ಕಾವ್ಯವಾಗಿಸುತ್ತಾರೆ.

ಕಂಬಾರರ ಸಾಹಿತ್ಯದ ಈ ವೈರುಧ್ಯವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾ ಲಂಕೇಶರು ಮಾರ್ಕ್ಸ್ ಮತ್ತು ಏಂಗೆಲ್ಸ್‌ರವರು ಬಾಲ್ಜಾಕ್ ಎಂಬ ಫ್ರೆಂಚ್ ಸಾಹಿತಿಯ ಬಗ್ಗೆ ವ್ಯಕ್ತಪಡಿಸಿದ ಮೆಚ್ಚುಗೆಯನ್ನು ಉಲ್ಲೇಖಿಸುತ್ತಾರೆ. ಬಂಡವಾಳಶಾಹಿ ಸಮಾಜವನ್ನು ಅಪಾರವಾಗಿ ಪ್ರೀತಿಸುವ ಬಾಲ್ಜಾಕ್ ಆ ಪ್ರೀತಿಯ ಕಾರಣವಾಗಿಯೇ ಅದರ ಒಳಸುಳಿಗಳನ್ನು, ಅದರ ಅವನತಿಯನ್ನು ಹತ್ತಿರದಿಂದಲೇ ಅಧ್ಯಯನ ಮಾಡುತ್ತಾರೆ. ಹೀಗಾಗಿ ಅವರ ವೈಯಕ್ತಿಕ ಇಷ್ಟಾ ನಿಷ್ಟಗಳೇನೇ ಇರಲಿ ಅದನ್ನು ಚಿತ್ರಿಸುತ್ತಾರೆ ಎಂಬ ಎಂಗೆಲ್ಸ್ ಅವರ ವಿಶ್ಲೇಷಣೆ ಕಂಬಾರರ ವಿಷಯದಲ್ಲಿಯೂ ಅನ್ವಯವಾಗುತ್ತದೆ ಎನ್ನುತ್ತಾರೆ ಲಂಕೇಶರು.

ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಮತ್ತು 'ಸಂಗೀತಾ' ಚಲನಚಿತ್ರ (ನಾಟಕವಾಗಿ ನಾಯಿಕಥೆ) ಈ ಮಾತು ಎಷ್ಟು ಸತ್ಯ ಎಂಬುದನ್ನು ಸಮರ್ಥಿಸುವಂತಿದೆ. ಪಾಳೆಯಗಾರಿ ಸಮಾಜದ ಕ್ರೌರ್ಯವನ್ನು ಆಸ್ತಿ, ವಿವಾಹ ಮತ್ತು ಮಹಿಳೆಯರ ನಡುವಣ ಸಂಬಂಧವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದೆ.

ಹೀಗೆ ಕಂಬಾರರ ಪಾಳೆಯಗಾರಿ ಸಂಸ್ಕೃತಿಯ ಆರಾಧನೆಯನ್ನು ಗುರುತಿಸುತ್ತಲೇ ಅವರು ಆ ಸಮಾಜದ ರಚನೆಯ ಬಗ್ಗೆ ನೀಡುವ ವಿವರಗಳು ಪ್ರಗತಿಪರ ಚಳುವಳಿಗೆ ಅನೇಕ ಒಳನೋಟಗಳನ್ನು ನೀಡಬಲ್ಲವು. ಅವರ ಕೃತಿಗಳ ಓದುಗರ ಅರಿವನ್ನು ಹೆಚ್ಚಿಸಬಲ್ಲವು. ಅವರ ಕಾವ್ಯದ ಗೇಯತೆ, ಲಯಕ್ಕೆ ತಲೆದೂಗಿ ಆನಂದಿಸುವಾಗಲೇ ಮೈ ಮರೆತು ಪಾಳೆಯಗಾರಿ ಮೌಲ್ಯಗಳಿಗೆ ಬಲಿಬೀಳದಂತೆ ಎಚ್ಚರ ವಹಿಸಬೇಕಾಗಿದೆ.

ಲಂಕೇಶರು ಮೊಗಳ್ಳಿ ಗಣೇಶರು ಕಂಬಾರರ ಸಾಹಿತ್ಯದ ಬಗೆಗಿನ ಪ್ರೀತಿಯಿಂದಲೇ ತೊಡಗುವ ನಿಷ್ಠುರ ವಿಮರ್ಶೆಯ ಎಚ್ಚರವನ್ನು ಕನ್ನಡ ವಿಮರ್ಶನ ಲೋಕ ಬಹಳವಾಗಿ ತೋರಿಸುವುದಿಲ್ಲ. ಮತ್ತೊಂದು ಬಹಳ ಮುಖ್ಯವಾದ ವಿಷಯವೆಂದರೆ ಕಂಬಾರರು ಪ್ರಜ್ಞಾಪೂರ್ವಕ ನೆಲೆಯಲ್ಲಿ ಪಾಳೆಯಗಾರಿ ಸಂಸ್ಕೃತಿಯನ್ನು ಮೆಚ್ಚುವವರಾಗಿ ಇಂದಿನ ನವ್ಯೋತ್ತರ ನೆಲೆಯಲ್ಲಿ (Post Modernism) ದೇಸಿವಾದದ ಸೃಷ್ಟಿಕರ್ತ ರಾಗಿದ್ದಾರೆ. ವಿಜ್ಞಾನ ತಂತ್ರಜ್ಞಾನಗಳ ಬಗ್ಗೆ ಅನೇಕ ಸಾಹಿತಿಗಳಿಗಿರುವ ಅಜ್ಞಾನ, ಭಯ ಆತಂಕಗಳನ್ನು ಅವುಗಳ ವಿರೋಧವನ್ನಾಗಿ ಪರಿವರ್ತಿಸಿ ಸಾಹಿತ್ಯದ ಭಾಗವಾಗಿಸಿದ್ದಾರೆ. ಅವರ ಬಹು ಚರ್ಚಿತ ಕಾವ್ಯ 'ಚಕೋರಿ' ಹಾಗೂ 'ಸೂರ್ಯ ಶಿಕಾರಿ' ಇಂತಹ ಭಯ ಮೂಲದಿಂದ ಹುಟ್ಟಿದ ಕೃತಿಗಳು.

ಇಂತಹ ಸಂದರ್ಭದಲ್ಲಿ ಕಂಬಾರರಿಗೆ ಜ್ಞಾನಪೀಠ ಎನ್ನುವುದು ಅವರ ಕೃತಿಗಳಿಗೆ ಓದುಗರನ್ನು ಹೆಚ್ಚಿಸುವುದರಿಂದ ಪಾಳೆಯಗಾರಿ ಸಮಾಜದ ಅರಿವನ್ನು ಹೆಚ್ಚಿಸುವುದರ ಜೊತೆಗೇ ಪ್ರತಿಗಾಮಿಯಾದ ಪೋಸ್ಟ್ ಮಾಡರ್ನಿಸಂ ವಿಚಾರಗಳನ್ನು ಬೆಳೆಸುವುದಕ್ಕೂ

ಪುಟ 14 ಕ್ಕೆ

ಬಿಜಾಪುರ

ಭೂ ಹೀನರಿಗೆ ಭೂಮಿಯ ಹಕ್ಕಿಗಾಗಿ ಧರಣಿ ಸತ್ಯಾಗ್ರಹ–ಯಶಸ್ವಿ ಹೋರಾಟ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ವಸತಿರಹಿತ ಹಾಗೂ ಭೂ ರಹಿತರ ಪ್ರಶ್ನೆಗಳನ್ನು ಎತ್ತಿಕೊಂಡು ಹಲವಾರು ವರ್ಷಗಳಿಂದ ಹಲವಾರು ಹಂತಗಳಲ್ಲಿ ಹೋರಾಟ ಮಾಡುತ್ತಾ ಬಂದಿರುತ್ತವೆ. ಅದರ ಭಾಗವಾಗಿ ರಾಜ್ಯ ಕೇಂದ್ರದ ಕರೆಯ ಮೇರೆಗೆ ದಿನಾಂಕ:25 ರಿಂದ 27ರವರೆಗೆ ಬಿಜಾಪುರ ಜಿಲ್ಲಾಧಿಕಾರಿಗಳ ಕಛೇರಿಯ ಎದುರಿಗೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಜಿಲ್ಲಾ ಪ್ರಾಂತ ರೈತ ಸಂಘ ಹಾಗೂ ಜಿಲ್ಲಾ ಕೃಷಿ ಕೂಲಿಕಾರರ ಸಂಘ ಧರಣಿ ನಡೆಸಿದ್ದವು.

ಬಿಜಾಪುರ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಾ ಬಂದಿರುವ ಭೂಮಿಯನ್ನು ರೈತರಿಗೆ ಹಕ್ಕು ಪತ್ರ ಕೊಡುವ ಕುರಿತು ಜಿಲ್ಲಾಧಿಕಾರಿಗಳಾದ ಎಸ್.ಜಿ.ಜಿದ್ದಿಮನಿ ಯವರು, ಲಿಖಿತ ರೂಪದ ಭರವಸೆಯನ್ನು ಧರಣಿ ನಿರತರಿಗೆ ನೀಡಿದ ಮೇಲೆ ಧರಣಿ ಸತ್ಯಾಗ್ರಹವನ್ನು ಹಿಂಪಡೆಯಲಾಯಿತು. ಹಾಗೂ ತಹಶೀಲ್ದಾರ್ ಅವರ ಸ್ಥಳ ಪರಿಶೀಲನೆ ಮಾಡಿದ ನಂತರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಾಗಿ ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಅದರಂತೆ ನಗರದಲ್ಲಿರುವ ಅನೇಕ ಕಾಲೋನಿಗಳಿಗೆ ನಿವೇಶನಕ್ಕೆ ಜಾಗ ಕೊಡುವುದು ಹಾಗೂ ನಿವೇಶವನ್ನು ಹೊಂದಿದವರಿಗೆ ಹಕ್ಕು ಪತ್ರ ಕೊಡುವುದು ಕೂಡ ಪ್ರಮುಖ ಬೇಡಿಕೆಯಾಗಿತ್ತು.



ಮುಖಂಡರಿಗೆ ಜಿಲ್ಲಾಧಿಕಾರಿಗಳಿಂದ ಕ್ರಮ ವಹಿಸುವ ಭರವಸೆ

ಬೇಡಿಕೆಗಳು:

1. ಬಿಜಾಪುರ ಜಿಲ್ಲೆಯಲ್ಲಿ ಮುಂಗಾರಿ ಹಂಗಾಮಿನ ಮಳೆಯಾಗದೆ ವಿಫಲವಾಗಿದೆ. ಆದ್ದರಿಂದ ಬೆಳೆಗಳು ಬಾರದೆ ರೈತರು ಬಹಳ ಕಂಗಾಲಾಗಿದ್ದಾರೆ. ಕಾರಣ ಬರಗಾಲ ಎಂದು ಸಮೀಕ್ಷೆ ಮಾಡಿ ರೈತರಿಗೆ ಘೋಷಿಸಬೇಕು.
2. ಬಿಜಾಪುರ ತಾಲ್ಲೂಕಿನ ಗ್ರಾಮಗಳಾದ ಶಿರಗೂರ, ಹೊಸೂರ ಚಿಕ್ಕಗಲಗಲಿ ಕಣಬೂರ, ಜಂಬಗಿ ಈ ಗ್ರಾಮಗಳಲ್ಲಿ 519 ಎಕರೆ ಸರ್ಕಾರದ ಜಮೀನು ಸುಮಾರು ವರ್ಷ ಸಾಗುವಳಿ ಮಾಡುತ್ತಾ ಬಂದಿದ್ದಾರೆ. ತಹಶೀಲ್ದಾರ್‌ರ ವರದಿ ಪ್ರಕಾರ ಏಕಸಾಲಲಾವಣೆ ದಲಿತ ರೈತರಿಗೆ ಎಲ್ಲರಿಗೂ ಹಕ್ಕು ಪತ್ರ ಒದಗಿಸಬೇಕು.
3. ಅಕ್ರಮ ಮನೆಗಳು ಸಕ್ರಮಗೊಳಿಸಿ ಹಾಗೂ ಇಂದಿರಾ ಆವಾಸ, ರಾಜೀವಗಾಂಧಿ ನಿವೇಶನಗಳು ಅಂಬೇಡ್ಕರ್ ಆಶ್ರಯ ಯೋಜನೆಗಳು ಎಲ್ಲಿ ದಲಿತರಿಗೆ ಬಡವರಿಗೆ ಮನೆಗಳನ್ನು ಕೊಡಬೇಕು.
4. ಬರ ಸಂತ್ರಸ್ಥರಿಗೆ ಎಕರೆಗೆ ಕನಿಷ್ಠ ರೂ.10,000ಗಳನ್ನು ಪರಿಹಾರಧನ ವಿತರಿಸಬೇಕು. ಮನೆಗಳನ್ನು ಕಳೆದುಕೊಂಡು ಹಾನಿಗೊಳಗಾದ ನಿರಾಶ್ರಿತರಿಗೆ ತಲಾ ರೂ.1,00,000 ರೂಪಾಯಿಗಳಂತೆ ನೀಡಬೇಕು.
5. ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ತಡೆಗಟ್ಟಿ ಕೂಲಿಕಾರರಿಗೆ ಸಮರ್ಪಕವಾದ ಕೆಲಸ ಒದಗಿಸಬೇಕು.
6. ರಾಜ್ಯದಲ್ಲಿ ಜಾರಿಯಿರುವ ಭೂ ಸುಧಾರಣೆ ಕಾಯ್ದೆಗೆ ಮಾಡಲಾದ ಪ್ರತಿಗಾಮಿ ತಿದ್ದುಪಡಿಗಳನ್ನು ಹಾಗೂ ಕಾಯ್ದೆಯಲ್ಲಿರುವ ಲೋಪ ದೋಷಗಳನ್ನು ತೆಗೆದುಹಾಕಿ ಪ್ರಗತಿಪರ ಸಮಗ್ರ ಭೂ ಸುಧಾರಣಾ ಕಾಯ್ದೆಯನ್ನು ರೂಪಿಸಿ ಜಾರಿಗೆ ತರಬೇಕು ಹಾಗೂ ಇತ್ಯರ್ಥವಾಗದೆ ಬಾಕಿ ಉಳಿದಿರುವ ಗೇಣಿದಾರರ ಅರ್ಜಿಗಳನ್ನು ಕೂಡಲೇ ಇತ್ಯರ್ಥ ಗೊಳಿಸಬೇಕು.
7. ಗಂಡ ಹೆಂಡತಿ ಮಕ್ಕಳನ್ನೊಳ ಗೊಂಡ ಕುಟುಂಬಕ್ಕೆ ಒಂದರಂತೆ ಎಲ್ಲಾ ಕುಟುಂಬಗಳಿಗೂ ಒಂದೇ ರೀತಿಯ ರೇಷನ್ ಕಾರ್ಡ್ ಗಳನ್ನು ವಿತರಿಸಬೇಕು. ತಿಂಗಳಿಗೆ ಕನಿಷ್ಠ 35 ಕೆ.ಜಿ. ಯಷ್ಟು ಅಕ್ಕಿ ಗೋಧಿಯನ್ನು ಕೆ.ಜಿ.2 ರೂ.ದರದಲ್ಲಿ ತಪ್ಪದೆ ಒದಗಿಸಬೇಕು.

ರೈತ ಸಂಘದ ಕಛೇರಿಯಿಂದ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟಿತು. ಕೊನೆಗೆ ಜಿಲ್ಲಾಧಿಕಾರಿ ಗಳಾದ ಎಸ್.ಜಿ.ಜಿದ್ದಿಮನಿಯವರು ಏಕಸಾಲ ಲಾವಣಿ ಭರವಸೆಯನ್ನು ತೆಗೆದು ಕೊಂಡು ಧರಣಿ ಸತ್ಯಾಗ್ರಹವನ್ನು ಅಂತ್ಯ ಗೊಳಿಸಲಾಯಿತು. ಧರಣಿ ಮುಖಂಡತ್ವವನ್ನು ಭೀಮಶಿ ಕಲಾದಗಿ, ಜಿಲ್ಲಾ ಅಧ್ಯಕ್ಷರಾದ ಜಿ.ಎಸ್. ಇಂಗಳಗಿ, ಸುರೇಖಾ ರಜಪುತ, ಮನ್ಸಾಬ ಕಲಾದಗಿ, ಶಿವು ವಾಲಿಕಾರ, ಗಂಗಾಬಾಯಿ ವಾಲಿಕಾರ, ಹೀರಾಬಾಯಿ, ಎ.ಹೆಚ್. ಹೊನ್ನಟಗಿ, ಸಿದ್ಧರಾಯ ಬಂಗಾರಿ, ಹುಸೇನ ಕಾಶಿನಕುಂಟೆ, ಸೂನು ಬಾಯಿ ಬ್ಯಾಳಿ, ಮುಂತಾದ ಮುಖಂಡರು ಭಾಗವಹಿಸಿ ಧರಣಿ ಸತ್ಯಾಗ್ರಹವನ್ನು ಯಶಸ್ವಿ ಗೊಳಿಸಿದರು.

ವರದಿ: **ಸೋಮಪ್ಪ ಆಯಟ್ಟಿ**

ಮೋದಿ ಉಪವಾಸ ಮತ್ತು ಬಿಜೆಪಿ ಕಿತ್ತಾಟ

ಪುಟ 8 ರಿಂದ

ಕಡಿಮೆಯಿದೆ. 2010–11ರ ವಾರ್ಷಿಕ ಯೋಜನೆಗೆ ಗುಜರಾತಿನ ಸಂಪನ್ಮೂಲ ಕಂದರ ರೂ. 1622.43 ಕೋಟಿಯಾಗಿದ್ದು, ಇದು 'ಕಳೆದ ವರ್ಷಕ್ಕಿಂತ 25ಶೇ. ಹೆಚ್ಚು' ಎಂದು ಆ ಪತ್ರ ಹೇಳಿತ್ತು. 2009–10ರಲ್ಲಿ ಆ ರಾಜ್ಯದ ತೆರಿಗೆ ಆದಾಯಗಳು ಅಲ್ಲಿನ ಜಿಡಿಪಿಯ 6.4 ಶೇ.–ರಾಷ್ಟ್ರೀಯ ಸರಾಸರಿ 10ಶೇ.ಕ್ಕಿಂತಲೂ ಹೆಚ್ಚಿತ್ತು.

ಗುಜರಾತಿನ ಬೆಳವಣಿಗೆ ಪ್ರತಿಯೊಂದು ವಿಭಾಗಕ್ಕೆ ಫಲದಾಯಕವಾಗಿದೆ ಎನ್ನುವ ದಾವೆಯನ್ನು ತಗ್ಗೊಳ್ಳಿ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಗೆ ಮತ್ತು ಬುಡಕಟ್ಟು ಉಪಯೋಜನೆಗೆ ನೀಡಿರುವ ಹಣ "ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಈ ವಿಭಾಗಗಳ ಪ್ರಮಾಣಕ್ಕೆ ಅನುಗುಣವಾಗಿಲ್ಲ" ಎಂದು ಯೋಜನಾ ಆಯೋಗ ಟಿಪ್ಪಣಿ ಮಾಡಿದೆ. ಮಕ್ಕಳು ಮತ್ತು ಮಹಿಳೆಯರಲ್ಲಿ ದೊಡ್ಡ ಪ್ರಮಾಣದ ಕುಪೋಷಣೆಯಿದೆ (ರಾಜ್ಯದಲ್ಲಿ ಪೋಷಣಾಂಶಗಳ ಕೊರತೆಯಿಂದ ನರಳುತ್ತಿರುವ ಮಕ್ಕಳ ಪ್ರಮಾಣ 56ಶೇ, ಅಂದರೆ ರಾಷ್ಟ್ರೀಯ ಸರಾಸರಿಗಿಂತಲೂ ಹೆಚ್ಚು) ಎಂದು ಗಮನಿಸಿರುವ ಯೋಜನಾ ಆಯೋಗ, 2001–03 ಹಾಗೂ 2004–06 ರ ನಡುವೆ ಹಸುಳೆಗಳ ಸಾವಿನ ಪ್ರಮಾಣ ಅಖಿಲ ಭಾರತ ಮಟ್ಟದಲ್ಲಿ 13 ಅಂಶಗಳಷ್ಟು ಇಳಿದಿದ್ದರೆ, ಗುಜರಾತಿನಲ್ಲಿ 10 ಅಂಶದಷ್ಟು ಮಾತ್ರ ಇಳಿದಿದೆ. ಹಾಗೂ ಹೆರಿಗೆಯಲ್ಲಿ ಸಾವಿನ ಪ್ರಮಾಣ ಅಖಿಲ ಭಾರತ ಮಟ್ಟದಲ್ಲಿ 47 ಅಂಶಗಳಷ್ಟು ಇಳಿದಿದ್ದರೆ, ಗುಜರಾತದಲ್ಲಿ ಕೇವಲ 12 ಅಂಶಗಳಷ್ಟು ಇಳಿದಿದೆ ಎಂದಿದೆ. ಇದರ ಫಲಿತಾಂಶವಾಗಿ ಶ್ರೀಯುತ ನರೇಂದ್ರ ಮೋದಿಯವರ ಅಡಿಯಲ್ಲಿ ಗುಜರಾತ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೆಳಗಿಳಿದಿದೆ, ಇದೀಗ ಗುಜರಾತ್ ಅಭಿವೃದ್ಧಿ ಮಾದರಿ!


ಅನಿಷ್ಟಕಾರಿ ಲಕ್ಷಣಗಳು

ಈ ಎಲ್ಲ ಆಡಂಬರದ ಮಾತುಗಳೇನೇ ಇರಲಿ, ಕಳೆದ ವಾರ ಈ ಅಂಕಣದಲ್ಲಿ ಗಮನಿಸಿದಂತೆ, ಕೋರ್ಟು ನೇಮಿಸಿದ ಸಲಹೆಗಾರರ(ಅಮೈಸೆ ಕ್ಯುರಿ) ವರದಿ ಮತ್ತು ವಿಶೇಷ ತನಿಖಾ ದಳದ ವರದಿಯಲ್ಲಿ ಇರುವ ಆರೋಪಗಳನ್ನು ಆಧಾರವಾಗಿಸಿಕೊಂಡು ವಿಚಾರಣೆಯನ್ನು ಮುಂದುವರೆಸಬೇಕು ಎಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡುವ ಸುಪ್ರಿಂ ಕೋರ್ಟ್ ನಿರ್ಣಯದಿಂದ ಗಮನವನ್ನು ಬೇರೆಡೆಗೆ ತಿರುಗಿಸುವುದೇ ಈ ಉಪವಾಸ ಕೈಗೊಂಡುದರ ನಿಜವಾದ ಗುರಿ. ಇನ್ನೂ ಒಂದು ಕಾರಣವೆಂದರೆ, ದೊಡ್ಡ ಪ್ರಮಾಣದ ಭ್ರಷ್ಟಾಚಾರ ಬಯಲಾಗಬಹುದೆಂಬ ಭಯದಿಂದ ಗಮನವನ್ನು ಬೇರೆಡೆ ತಿರುಗಿಸುವುದು. ಲೋಕಾಯುಕ್ತರ ನೇಮಕವಾದಾಗ ಕಂಡು ಬಂದ ಗಾಬರಿ ಇದನ್ನು ತೋರಿಸಿತ್ತು.

ಭವಿಷ್ಯದ ಪ್ರಧಾನ ಮಂತ್ರಿ ಪೀಠಕ್ಕೆ ಅಭ್ಯರ್ಥಿಯಾಗಿ ಆರೆಸ್ಸೆಸ್/ಬಿಜೆಪಿಯ ನಾಯಕಗಣದಲ್ಲಿ ರಾಜಕೀಯವಾಗಿ ಶ್ರೀಯುತ ಮೋದಿಯವರನ್ನು ಪ್ರತಿಷ್ಠಾಪಿಸುವುದು ಕೂಡ ಈ ಉಪವಾಸದ ಉದ್ದೇಶವಾಗಿದೆ. ಶ್ರೀಯುತ ಮೋದಿ ಮುಂಬರುವ 2012ರ ವಿಧಾನ ಸಭಾ ಚುನಾವಣೆಗಳಲ್ಲಿ ಗೆದ್ದು, ಅದನ್ನು 2014ರ ಪ್ರಧಾನ ಮಂತ್ರಿ ಉಮೇದುವಾರಿಕೆಗೆ ಜಿಗಿಯುವ ವೇದಿಕೆಯಾಗಿ ಮಾಡಲು ಈ ಉಪವಾಸವನ್ನು ಬಳಸುವ ಪ್ರಯತ್ನದಲ್ಲಿರುವಂತೆ ಕಾಣುತ್ತದೆ. ಇವೆಲ್ಲ ನಡೆಯುತ್ತಿರುವುದು ಬಿಜೆಪಿಗೆ ಇಂತಹ ಅವಕಾಶ ಸಿಗುವ ಸಾಧ್ಯತೆ ರಾಜಕೀಯ ದಿಗಂತದ ಆಚೆ ಕೂಡ ಕಾಣದಾಗಿರುವ ಸಂದರ್ಭದಲ್ಲಿ.

ಈ ಎಲ್ಲ ಮೇಳಗಳ, ಅವತಾರಗಳ ಫಲಿತಾಂಶ ಏನೇ ಇರಲಿ, ವಾಸ್ತವತೆಯಂತೂ ಸ್ಪಷ್ಟ– ಆರೆಸ್ಸೆಸ್/ಬಿಜೆಪಿ ಕೇಂದ್ರದಲ್ಲಿ ರಾಜಕೀಯ ಅಧಿಕಾರವನ್ನು ಹೇಗಾದರೂ ಮತ್ತೆ ಪಡೆಯಲೇ ಬೇಕೆಂಬ ಹತಾಶ ಪ್ರಯತ್ನದಲ್ಲಿದೆ. ಅದಕ್ಕಾಗಿ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸಲು, ಇಂತಹ ವೋಟ್ ಬ್ಯಾಂಕ್ ರಾಜಕೀಯದ ಅತ್ಯಂತ ಹೊಲಸು ಮಾದರಿಯಿಂದ ಪ್ರಯೋಜನ ಪಡೆಯಲು ಯಾವ ಮಟ್ಟಕ್ಕೂ ಅದು ಇಳಿಯಬಲ್ಲದು. ಈಗಾಗಲೇ ರಾಜಸ್ತಾನದ ಭರತಪುರದಲ್ಲಿ ನಡೆದಿರುವ ಕೋಮು ಗಲಭೆಗಳಲ್ಲಿ ಇದರ ಕರಾಳ ಛಾಯೆ ಕಾಣ ಬಂದಿದೆ.

ಭಾರತ ಮತ್ತೊಮ್ಮೆ ತೊಂಭತ್ತರ ದಶಕದಲ್ಲಿ ನೇರವಾಗಿ ಬಾಬ್ರಿ ಮಸೀದಿ ಧ್ವಂಸಕ್ಕೆ ದಾರಿ ಮಾಡಿಕೊಟ್ಟ ಶ್ರೀಯುತ ಅಡ್ವಾಣಿಯವರ ರಥಯಾತ್ರೆ ತಂದ ನೋವು–ಸಂಕಟಗಳನ್ನು ಮತ್ತು 2002ರಲ್ಲಿ ಗುಜರಾತ್ ಅನುಭವಿಸಿದ ಭೀಕರ ಕೋಮು ನರಮೇಧವನ್ನು ಕಾಣಬಾರದು. ಇಂತಹ ಅನಿಷ್ಟಕಾರೀ ಲಕ್ಷಣಗಳು ಕಾಣುತ್ತಿರುವಾಗ, ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಅಡಿಪಾಯವನ್ನೇ ಧ್ವಂಸಮಾಡಲು ಹೊರಟಿರುವ ಇಂತಹ ಕುತಂತ್ರಗಳನ್ನು ವಿಫಲಗೊಳಿಸುವುದು ಎಲ್ಲ ಭಾರತೀಯ ದೇಶಪ್ರೇಮಿಗಳ ಕರ್ತವ್ಯ.



ಆರ್.ರಾಮಕೃಷ್ಣ

ಬಿಜೆಪಿ ದರ್ಬಾರ್

'ಜೈಲಿನಿಂದಲೇ ರಾಜಕಾರಣ'ಯಡಿಯೂರಪ್ಪ ಪ್ರತಿಜ್ಞೆ

ಡಾ| ಬಿ.ಎಸ್.ಯಡಿಯೂರಪ್ಪನವರು ರಾಜ್ಯದ ಸಮಸ್ತ ಜನಕೋಟಿಯ ಮನಸ್ಸನ್ನು ರಂಜಿಸುವ ಅಮೂಲ್ಯ ಹೇಳಿಕೆಗಳನ್ನು ನೀಡಿ ಜನರ ಮನಸ್ಸನ್ನು ಸಂತೋಷ ಪಡಿಸಿದ್ದಾರೆ. ಈ ಹೇಳಿಕೆಗಳನ್ನು ಇಲ್ಲಿ ದಾಖಲಿಸಲೇ ಬೇಕಿದೆ. ನಮ್ಮ ಹಲವು ಮಾಧ್ಯಮಗಳಿಗೆ ರಾಜಕಾರಣ, ಸುದ್ದಿ ಇಲ್ಲವೂ ಮನರಂಜನೆಯ ಮಾಧ್ಯಮವೇ ಆಗಿ ಕಾಣುತ್ತಿರುವಾಗ ನಮ್ಮ ಯಡಿಯೂರಪ್ಪನವರೂ ಕೂಡ ಅದಕ್ಕೆ ಪೂರಕವಾಗಿಯೇ ಸುದ್ದಿಗಳನ್ನ ಸೃಷ್ಟಿಸುತ್ತಿರುವುದು ಒಂದು ರೀತಿಯಲ್ಲಿ ಕುತೂಹಲಕಾರಿಯಾಗಿದೆ.

ಜೈಲಿನಿಂದಲೇ ರಾಜಕಾರಣ

" ಒಂದು ವೇಳೆ ನನ್ನನ್ನು ಜೈಲಿಗೆ ಕಳುಹಿಸಿದರೆ ಜೈಲಿನಿಂದಲೇ ರಾಜಕಾರಣ ಮಾಡುತ್ತೇನೆ" ಎಂದು ಡಾ| ಯಡ್ಡಿ ಪ್ರತಿಜ್ಞೆ ಮಾಡಿದ್ದಾರೆ.

ಅಧಿಕಾರದಲ್ಲಿದ್ದಾಗ ಮಾಡಿದ ಘನ 'ಅಭಿವೃದಿ' ಕಾರ್ಯಗಳ ಫಲವಾಗಿ ಸನ್ಮಾನ್ಯ ಯಡಿಯೂರಪ್ಪನವರಿಗೆ ಪರಪ್ಪನ ಅಗ್ರಹಾರಕ್ಕೆ ಪ್ರಮೋಷನ್ ಸಿಗುವುದು ಬಹುತೇಕ ಈಗ ಖಾತ್ರಿ ಎಂಬಂತಾಗಿದೆ. ಪರಪ್ಪನ ಅಗ್ರಹಾರಕ್ಕೆ ಹೋದಾಕ್ಷಣ 'ರಾಜಕಾರಣ'ವನ್ನು ನಿಲ್ಲಿಸಲು ಸಾಧ್ಯವೇ ? ಸಾಧ್ಯವೇ ಇಲ್ಲ. ಎಷ್ಟೋ ಜನ ಪರಪ್ಪನ ಅಗ್ರಹಾರ ನಿವಾಸಿಗಳು, ಶ್ರೀಕೃಷ್ಣ ಜನ್ಮ ಸ್ಥಾನದೊಳಗಿದ್ದುಕೊಂಡೇ ತಮ್ಮ ಮೂಲ ಕಾಯಕವಾದ ಹತ್ತಾರು 'ಡೀಲಿಂಗ್'ಗಳನ್ನು ಸೆಟ್ ಮಾಡುವಾಗ ಮೂರು ವರ್ಷ ರಾಜ್ಯವನ್ನಾಳಿದ ಮುಖ್ಯಮಂತ್ರಿಯೊಬ್ಬರು ಜೈಲಿನೊಳಗಿದ್ದುಕೊಂಡು ರಾಜಕಾರಣ ಮಾಡುವುದೇನು ಆಶ್ಚರ್ಯದ ಮಾತಲ್ಲ ಬಿಡಿ. ಆದರೆ ಜನರಿಗಿರುವ ಕುತೂಹಲ ಏನೆಂದರೆ ಜೈಲಿನೊಳಗಿಂದ ಮಾಡುವ ಇವರ ರಾಜಕಾರಣದ ಸೊಗಸು ಹೇಗಿರುತ್ತದೆ ಎಂಬುದೇ ಆಗಿದೆ.

ಬಿಡಿಎ, ಕೆಐಡಿಬಿ ಇತ್ಯಾದಿಗಳು ರೈತರಿಂದ ಕಿತ್ತುಕೊಂಡ ಭೂಮಿಯನ್ನು ಡೀ ನೋಟಿಫೈ ಮಾಡಿ ಮೂಲ ಮಾಲಕರಿಗೆ ಕೊಟ್ಟಂತೆ ಮಾಡಿ ಅವರಿಂದ ಯಾರಾದರೂ ಬಂಧು ಬಾಂಧವರಿಗೆ



ಬೇನಾಮಿ ಖರೀದಿಗೆ, ಅಗ್ಗದ ಖರೀದಿಗೆ ಅವಕಾಶ ಮಾಡಿಕೊಡುವುದು..., ಮಗ, ಅಳಿಯ, ತಂಗಿ, ಸೊಸೆ, ಯಾರು ಯಾರಿಗೆ ಬೇಕೋ ಅವರಿಗೆ ವಿವೇಚನಾ ಕೋಟಾದ ಜಮೀನು ಹಂಚುವುದು, ಜನರಿಗೆ ಬದುಕುವುದನ್ನು ಕಲಿಸುವ 'ಆರ್ಟ್ ಆಫ್ ಲೀವಿಂಗ್' ಮುಂತಾದ ಗುರುವರ್ಯರುಗಳು ಲೋಕ ಕಲ್ಯಾಣಾರ್ಥವಾಗಿ ಅಲ್ಲಲ್ಲಿ ಕಬ್ಜಾಕ್ಕೆ ತೆಗೆದುಕೊಂಡ, ಸಾರ್ವಜನಿಕ ಜಮೀನು, ಕೆರೆ ಅಂಗಳ ಇತ್ಯಾದಿ ತೆರವುಗೊಳಿಸದಂತೆ ರಕ್ಷಣೆ ನೀಡುವುದು, ಆದೇಶಕ್ಕೆ ತಡೆ ನೀಡುವುದು...ಮಠಗಳಿಗೆ, 'ಗೋ ಸಂರಕ್ಷಣೆ'ಗೆ ಕೋಟಿ, ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡುವುದು, ಜಮೀನು ಮಂಜೂರು ಮಾಡುವುದು.....ಇವೇ ತಾನೇ ಯಡಿಯೂರಪ್ಪನವರ 'ರಾಜಕಾರಣ'. ತಾನು ಯಡಿಯೂರಪ್ಪನವರು ಹಾಕಿಕೊಟ್ಟ ದಾರಿಯಲ್ಲೇ ತಾನು ನಡೆಯುವುದು, ಹೊಸ ಕಾರ್ಯಕ್ರಮ ಯಾವುದೂ ಇಲ್ಲ ಅಂತ ತಲೆ ಮೇಲೆ ಪಾದುಕೆ ಹೊತ್ತುಕೊಂಡೆ ಬಡಬಡಿಸುತ್ತಿರುವ ಆಧುನಿಕ ಭರತ ಮುಖ್ಯಮಂತ್ರಿ ಆಗಿರುವವರೆಗೆ ಈ ಪ್ರತಿಜ್ಞೆ ಜಾರಿಯಾಗುತ್ತದೆ. ಅದಕ್ಕೇನು ತೊಂದರೆ ಇಲ್ಲ ಅನಿಸುತ್ತದೆ. ಅಲ್ವಾ ?

★

ಕೆಎಂಎಫ್ ಅಧ್ಯಕ್ಷ ಸ್ಥಾನ: ನಾಚಿಗೆ ಗೆಟ್ಟ ಬಿಜೆಪಿಗೆ ಗಣಿಲೂಟಿಕೋರ ರೆಡ್ಡಿ ಬಿಟ್ಟರಿಲ್ಲವೋ ಶಿವನೇ ?

ಕರ್ನಾಟಕ ಹಾಲು ಒಕ್ಕೂಟದ ಅಧ್ಯಕ್ಷರಾಗಿದ್ದ ಸನ್ಮಾನ್ಯ ಸೋಮಶೇಖರ ರೆಡ್ಡಿಯವರು ಆ ಸ್ಥಾನಕ್ಕೆ ಪುನರಾಯ್ಕೆ ಆಗಿದ್ದಾರೆ. ಬಿಜೆಪಿ ಪಕ್ಷವು ಅವರೇ ಕೆ.ಎಂ.ಎಫ್. ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಲಿ ಎಂದು ನಿರ್ಧರಿಸಿದ್ದರಿಂದ ಈ ಆಯ್ಕೆ ಸರಾಗವಾಗಿ ನೆರವೇರಿದೆ.

ಬಿಜೆಪಿಯ ರಾಷ್ಟ್ರೀಯ ನಾಯಕ ಅಡ್ವಾಣಿಯವರು ಭ್ರಷ್ಟಾಚಾರದ ವಿರುದ್ಧ ರಥಯಾತ್ರೆಗೆ ಹೊರಟು ನಿಂತಿದ್ದಾರೆ. ತಮ್ಮ ಪಕ್ಷದಲ್ಲಿರುವ ನೈತಿಕತೆ ಇನ್ನು ಯಾವ ಪಕ್ಷದಲ್ಲೂ ಇಲ್ಲ ಅಂತ ಬಿಜೆಪಿ ಸದಾ ಬೊಬ್ಬೆ ಹಾಕುತ್ತದೆ.

ಸೋಮಶೇಖರ ರೆಡ್ಡಿ ಯಾರು ? ಗಣಿಲೂಟಿಕೋರ ರೆಡ್ಡಿ ಸಹೋದರಲ್ಲಿ ಈತನೂ ಒಬ್ಬ. ಅಣ್ಣಾ ಜನಾರ್ಧನ ರೆಡ್ಡಿಯವರು ಈಗ ಹೈದರಾಬಾದಿನ ಚುಂಚಲಗುಡ ಜೈಲಿನಲ್ಲಿ 'ಸರಳು ಗಣಿತ' ಮಾಡುತ್ತಾ ಕುಳಿತಿದ್ದರೆ.. ಇತ್ತ ಅದೇ ಗಣಿ ಲೂಟಿಯ ಹಗರಣದಲ್ಲಿ ಸಹೋದರ ದ್ವಯರಾದ ಕರುಣಾಕರ ರೆಡ್ಡಿ, ಈ ಸೋಮಶೇಖರ ರೆಡ್ಡಿಯವರಿಗೂ, ಇನ್ನು ಹಲವಾರು ಆಪ್ತರಿಗೂ ಸಿ.ಬಿ.ಐ. ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದೆ.

ಕೆ.ಎಂ.ಎಫ್. ಅಧ್ಯಕ್ಷ ಸ್ಥಾನಕ್ಕೆ ಸರಿಯಾದ, ಅರ್ಹ ವ್ಯಕ್ತಿಯನ್ನೇ ಆಯ್ಕೆ ಮಾಡಿದೆ ಬಿಜೆಪಿ ಸರ್ಕಾರ. ಸಾರ್ವಜನಿಕ ಖಜಾನೆಯ ಲೂಟಿ, ನೈಸರ್ಗಿಕ ಸಂಪತ್ತಿನ ಲೂಟಿ ತಾನೆ ಬಿಜೆಪಿ ದರ್ಬಾರ್‌ನಲ್ಲಿ ತಡೆ ಇಲ್ಲದೇ ನಡೆಯುತ್ತಿರುವ ಘನ 'ಅಭಿವೃದ್ಧಿ' ಕಾರ್ಯ. ಅದಕ್ಕೆ ಸೋಮಶೇಖರ ರೆಡ್ಡಿಗಿಂತ ಅರ್ಹರು ಇನ್ಯಾರು ಇದ್ದಾರೆ ನೀವೇ ಹೇಳಿ.

★

ಶಿಕ್ಷಕರ ವರ್ಗಾವಣೆ ಅವಾಂತರಗಳೂ, ಕೊಪ್ಪಳದಲ್ಲಿ ಕದ್ದು ಓಡಿದ 'ಕಾಗೇರಿ' ಗಳೂ

ಕರ್ನಾಟಕ ರಾಜ್ಯದ ಸರ್ಕಾರಿ ನೌಕರರ, ಅಧಿಕಾರಿಗಳ ವರ್ಗಾವಣೆ ಹಿಂದಿನ 'ಪ್ರೇರಣೆ'. ಅದರಲ್ಲಿಯೂ ಬಳ್ಳಾರಿ ಜಿಲ್ಲೆಯ ಉನ್ನತ ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಹಿಂದಿನ 'ಕರಾಮತ್ತು'ಗಳು ಈಗಾಗಲೇ ಲೋಕ ವಿಖ್ಯಾತ.

ಇದು ವರ್ಗಾವಣೆಗೆ ಸಂಬಂಧಿಸಿದ ಬೇರೆ ಅವಾಂತರ. ತಮಗೆ ಅನುಕೂಲವಾಗುವ ಊರುಗಳಿಗೆ, ತಮ್ಮ ಊರುಗಳಿಗೆ ವರ್ಗಾವಣೆ ಬಯಸಿ ಶಿಕ್ಷಕರು ಅರ್ಜಿ ಹಾಕುವುದು ಪ್ರತಿ ವರ್ಷವೂ ಇದ್ದೇ ಇರುತ್ತದೆ. ಈ ವರ್ಷವೂ ಅಂತಹ ಸಾಕಷ್ಟು ಅರ್ಜಿಗಳು ಬಂದಿದ್ದವು. ಒಟ್ಟು ಶಿಕ್ಷಕರ ಸಂಖ್ಯೆಯ ಶೇ. ಒಂದರಷ್ಟು ಪ್ರಮಾಣದ ಶಿಕ್ಷಕರನ್ನು [illegible] ವರ್ಗಾವಣೆ ಮಾಡಲಾಗುವುದೆಂಬ ನಿಯಮ ಘೋಷಿಸಿ ಸರ್ಕಾರ ವರ್ಗಾವಣೆಗಳನ್ನು ನಡೆಸಿತು. ಹೀಗೆ

"ಲೋಕಾಯುಕ್ತ ದಾಳಿ ಗೊತ್ತಿತ್ತು"– ಡಾ|| ಯಡಿಯೂರಪ್ಪ

ರಾಜ್ಯದ ಲೋಕಾಯುಕ್ತ ಪೋಲಿಸರು ಡಾ| ಬಿ.ಎಸ್. ಯಡಿಯೂರಪ್ಪನವರ ಮಕ್ಕಳು, ಅಳಿಯ ಮುಂತಾದ ಹತ್ತಿರದ ಬಂಧುಗಳಿಗೆ ಸೇರಿದ ಧವಳಗಿರಿ ಪ್ರಾಪರ್ಟಿಸ್ ಕಛೇರಿಯ ಮೇಲೆ ದಾಳಿ ಮಾಡಿ ಭ್ರಷ್ಟಾಚಾರದ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಅದೇ ರೀತಿ ಅಳಿಯ ಸೋಹನ್ ಕುಮಾರ್ ಮನೆ, ಶಾಸಕ ಹೇಮಚಂದ್ರ ಸಾಗರ್ ಅವರ ಆಸ್ಪತ್ರೆಗಳ ಮೇಲೆ ಕೂಡ ದಾಳಿ ಮಾಡಿ ಹಲವು ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡಿದೆ ಎಂಬ ಬೆಳವಣಿಗೆಗಳನ್ನು ರಾಜ್ಯದ ಜನ ನೋಡುತ್ತಿದ್ದಾರೆ. ಈ ದಾಳಿಯ ಬಗೆಗೆ ಯಡಿಯೂರಪ್ಪನವರು ಕೊಟ್ಟ ಪ್ರತಿಕ್ರಿಯೆ ಬಹಳ ವಿಶೇಷವಾಗಿದೆ.

ಈ ದಾಳಿಯ ಬಗೆಗೆ ಯಡಿಯೂರಪ್ಪನವರಿಗೆ ಮೊದಲೇ ಗೊತ್ತಿತ್ತಂತೆ !! ಎಲಾ ಎಲಾ ಯಡಿಯೂರಪ್ಪನವರೇ ? ಲೋಕಾಯುಕ್ತ ಪೋಲಿಸರ ದಾಳಿಯ ನಿರ್ಧಾರಗಳು ರಹಸ್ಯವಾದವುಗಳು. ಆ ದಾಳಿ ನಡೆಯುವ ಮೊದಲೇ ಅದು ನನಗೆ ತಿಳಿದಿತ್ತು ಅಂದರೆ ಅದರ ಅರ್ಥ ಏನೆಂದು ವಿವರಿಸ ಬೇಕಾದ ಹೊಣೆ ನಿಮ್ಮ ಮೇಲಿದೆಯಲ್ಲವೇ ? ರಾಜ್ಯದ ಜನರಿಗೆ ಯಡಿಯೂರಪ್ಪನವರ ಈ ಹೇಳಿಕೆಯಿಂದ ಏನು ನೆನಪಿಗೆ ಬರುತ್ತಿದೆ ಗೊತ್ತೆ ? ನ್ಯಾ. ಸಂತೋಷ್ ಹೆಗ್ಡೆಯವರು ತಮ್ಮ ಲೋಕಾಯುಕ್ತರ ಅಧಿಕಾರಾವಧಿಯ ಕೊನೆ ಹಂತದಲ್ಲಿ ಅದೂ ಕೂಡ ರಾಜ್ಯದ ಗಣಿ ಲೂಟಿ, ಅಕ್ರಮಗಳ ಕುರಿತ ತನಿಖಾ ವರದಿಯನ್ನು ಅಂತಿಮಗೊಳಿಸುವ ಹೊತ್ತಲ್ಲಿ ಯಡಿಯೂರಪ್ಪನವರ ಸರ್ಕಾರದ ಮೇಲೆ ಒಂದು ಗಂಭೀರವಾದ ಆರೋಪವನ್ನು ಮಾಡಿದ್ದರು. ತಮ್ಮ ಮೊಬೈಲ್ ಪೋನ್ ಅನ್ನು ರಾಜ್ಯ ಸರ್ಕಾರ ಕದ್ದಾಲಿಸುತ್ತಿದೆ ಎಂಬುದೇ ಆ ಆರೋಪ.

ಈಗಿನ ಯಡಿಯೂರಪ್ಪನವರ ಹೇಳಿಕೆ ಹಳೆಯ ಲೋಕಾಯುಕ್ತರ ದೂರು ನಿಜ ಎಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ತಂದರೆ ಯಡಿಯೂರಪ್ಪನವರು ಅದಕ್ಕೆ ಏನೆನ್ನುತ್ತಾರೆ?

ಏನನ್ನುತಾರೆ ? ಏನೂ ಅನ್ನುವುದಿಲ್ಲ. ಜನ ಏನೆಂದುಕೊಳ್ಳುತ್ತಾರೆ ಎಂಬ ಬಗ್ಗೆ ಎಳ್ಳು ಕಾಳಷ್ಟಾದರೂ ಚಿಂತೆ ಇವರಿಗೆ ಇದ್ದಿದ್ದರೆ ಇಷ್ಟೆಲ್ಲಾ ಬಂಡು ಬಿದ್ದು ಅಜೀರ್ಣವಾಗುವಷ್ಟು ಲಂಚದ ಕಸವನ್ನು ತಿನ್ನುತ್ತಿದ್ದರೇ ? ಜೈಲಿನಲ್ಲಿ ಇದ್ದುಕೊಂಡೇ ರಾಜಕಾರಣ ಮಾಡುತ್ತೇನೆ ಅಂತ ಶಪಥ ಮಾಡುತ್ತಿದ್ದರೆ ?

ಜನಾರ್ಧನರೆಡ್ಡಿ ದೈವಭಕ್ತಿಯಿಂದಲೇ ಶ್ರೀಮಂತನಾಗಿದ್ದು.... ನಿಮಗೆ ಗೊತ್ತಾ?


ರಾಜ್ಯ ರಾಜಕೀಯದಲ್ಲಿ ಇದು ಮನ್ವಂತರದ ಕಾಲ ಎಂದರೆ ತಪ್ಪಾಗಲ್ಲ. ಏಕೆಂದರೆ ಕಳೆದ ಐದು ವರ್ಷಗಳಲ್ಲಿ ರಾಜ್ಯ ರಾಜಕೀಯ ಹಲವು ಸುಳಿಗಳು, ಸುನಾಮಿಗಳ ನಾಟಕೀಯ ತಿರುವುಗಳನ್ನು ಕಂಡಿದೆ. ಕುಮಾರಸ್ವಾಮಿ ನೇತೃತ್ವದಲ್ಲಿ ಸಿಎಂ ಕುರ್ಚಿಯಲ್ಲೂ ಟಿ–20 ಮ್ಯಾಚ್ ನಡೆದದ್ದು, ಯಡಿಯೂರಪ್ಪ ಸಿಎಂ ಆಗಿದ್ದು. ಗಣಿ ಲಂಚ ಆರೋಪ. ಸರ್ಕಾರ ಪತನ. ವಚನಭ್ರಷ್ಟತೆಯ ಆರೋಪ, ಮರು ಚುನಾವಣೆ. ಅಲ್ಪಮತದ ಸರ್ಕಾರಕ್ಕೆ ಪಕ್ಷೇತರರ ಬೆಂಬಲ. ಆಪರೇಷನ್ ಕಮಲ. ಗಣಿ ದೊರೆಗಳ ಪಾರಮ್ಯ.

ಇದು ಕಳೆದ ಐದು ವರ್ಷಗಳ ರಾಜ್ಯ ರಾಜಕೀಯದ ಟ್ರೈಲರ್. ಈ ಅವಧಿಯಲ್ಲಿ ನಡೆದ ಅಕ್ರಮ–ಅನ್ಯಾಯಗಳ ಫಲ ಎಂಬಂತೆ ಹಲವು ನಾಯಕರು ನ್ಯಾಯಾಲಯದ ಕಟಕಟೆಗೆ ಬಂದಿದ್ದಾರೆ. ಹಾಸನ ಮೆಡಿಕಲ್ ಕಾಲೇಜು ಹಗರಣದಲ್ಲಿ ರಾಮಚಂದ್ರೇಗೌಡ, ತಿರುಪತಿ ತಿಮ್ಮಪ್ಪನ ಲಾಡು ಹಂಚಿದ ಕೃಷ್ಣಪ್ಪ, ಕೆಐಎಡಿಬಿ ಹಗರಣದಲ್ಲಿ ಕಟ್ಟಾ ಮತ್ತವನ ಪುತ್ರ, ಭೂ ಅವ್ಯವಹಾರ ಮತ್ತು ಡಿ–ನೋಟಿಫಿಕೇಶನ್‌ನಲ್ಲಿ ಯಡಿಯೂರಪ್ಪ, ಗಣಿ ಲೂಟಿಯಲ್ಲಿ ಜನಾರ್ದನ ರೆಡ್ಡಿ ಮುಂತಾದ ನಾಯಕರು ಆರೋಪಗಳ ಸುರಿಮಳೆಯನ್ನೇ ಎದುರಿಸುತ್ತಿದ್ದಾರೆ. ಇನ್ನು ಲೆಕ್ಕ ಹಾಕುತ್ತಾ ಹೋದರೆ ಮುರುಗೇಶ ನಿರಾಣಿ, ಯೋಗೀಶ್ವರ್ ಸೇರಿದಂತೆ ಹಲವು ಶಾಸಕರ ಪಟ್ಟಿಯೇ ಇದೆ. ಬಹುಶಃ ಇದು ರಾಜ್ಯ ರಾಜಕೀಯದ ಇತಿಹಾಸದಲ್ಲೇ ಅತಿ ಭ್ರಷ್ಟ ಸರ್ಕಾರ ಎಂದರೂ ತಪ್ಪಾಗಲ್ಲ.

ಅಕ್ರಮ ಗಣಿ ಕುರಿತ ಲೋಕಾಯುಕ್ತರ ವರದಿ ಸಲ್ಲಿಕೆ ಬಳಿಕ ರಾಜ್ಯ ರಾಜಕೀಯದ ಬೆಳವಣಿಗೆಗಳೂ ಚುರುಕುಗೊಂಡವು. ಯಡಿಯೂರಪ್ಪ ಕುರ್ಚಿ ಉಳಿಸಿಕೊಳ್ಳಲು ವರಿಷ್ಠರೊಂದಿಗೆ ಪಟ್ಟು ಹಿಡಿದು ರಚ್ಚೆ ಮಾಡಿದ್ದು, ಅಡ್ವಾಣಿ ಆಕ್ಷೇಪದ ಮಧ್ಯೆಯೂ ಯಡ್ಡಿ ರಬ್ಬರ್ ಸ್ಟ್ಯಾಂಪ್ ಡಿವಿ ಸದಾನಂದ ಗೌಡ ಮುಖ್ಯಮಂತ್ರಿಯಾದದ್ದು, ಲೋಕಾಯುಕ್ತ ವರದಿ ಅಧ್ಯಯನಕ್ಕೆ ಸಮಿತಿ ರಚಿಸಿದ ಘಟನೆಗಳೂ ನಡೆಯಿತು.

ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಮೂಲಕ ಶ್ರೀರಾಮುಲು ಬ್ಲ್ಯಾಕ್‌ಮೇಲ್. ಅದರ ಬೆನ್ನಲ್ಲೇ ಸಿಬಿಐನಿಂದ ಜನಾರ್ದನ ರೆಡ್ಡಿಯ ಬಂಧನ ರಾಜ್ಯ ಬಿಜೆಪಿಯ ಒಂದು ವಿಭಾಗದ ಜಂಗಾಬಲವನ್ನೇ ಕುಗ್ಗಿಸಿತು.

ಇಷ್ಟೆಲ್ಲ ಆಗುತ್ತಿರುವಾಗ ರಾಜ್ಯದ ಕೆಲವು ಮಾಧ್ಯಮಗಳು, ಪತ್ರಕರ್ತರು ಮಾತ್ರ ತಮ್ಮ ನೈತಿಕತೆಯನ್ನು ಕಳೆದುಕೊಂಡು ನೈಜ ಸಾಮಾಜಿಕ ಪ್ರಜ್ಞೆ(?)ಯನ್ನು ಪ್ರದರ್ಶಿಸಿದರು. ಜನಾರ್ದನ ರೆಡ್ಡಿ ಬಂಧನ, ಯಡಿಯೂರಪ್ಪ ಬಂಧನ ಸಾಧ್ಯತೆಯನ್ನು ಬಹುದೊಡ್ಡ ಗಂಡಾಂತರಕಾರಿ ಬೆಳವಣಿಗೆ ಎಂಬಂತೆ ಚಿತ್ರಿಸಿದವು. 10 ವರ್ಷಗಳ ಹಿಂದೆ ಚಿಟ್ ಕಂಪೆನಿ ಸ್ಥಾಪಿಸಿ ಪಂಗನಾಮ ಹಾಕಿ ದಿವಾಳಿಯಾಗಿದ್ದ ಜನಾರ್ದನ ರೆಡ್ಡಿ ಕೈಯಲ್ಲಿ ಕುಬೇರನನ್ನೂ ನಾಚಿಸುವ ಸಂಪತ್ತು ಹೇಗೆ ಸೃಷ್ಟಿಯಾಯಿತು ಎಂಬ ಸ್ಪಷ್ಟ ಚಿತ್ರ ನೀಡದೆ, ಆತನ ಆಸ್ತಿ ಎಷ್ಟಿತ್ತು, ಯಾವ್ಯಾವ ಆಭರಣಗಳು, ಸುಖವೈಭೋಗಗಳಿದ್ದವು ಎಂಬುದನ್ನು ಪಟ್ಟಿ ಮಾಡಲು ಕೂತವು.



ಸಿಮ್ಮಿಸಿ

ಜೈಲು ಸೇರಿದ ರೆಡ್ಡಿಯ ದಿನಚರಿಯನ್ನು ವೈಭವೀಕರಿಸಿ ಸುದ್ದಿ ಮಾಡುವುದರಲ್ಲಿ ತಲ್ಲೀನವಾದ ಕೆಲವು ಟಿವಿ ಚ್ಯಾನೆಲ್‌ಗಳು, ಆತನ ಬಟ್ಟೆ ಬರೆ, ಖೈದಿ ನಂಬರ್, ಊಟ–ತಿಂಡಿಯ ಮೆನು, ಮನೆಯಿಂದ ಸರಬರಾಜಾದ ತಿಂಡಿಗಳ ಪಟ್ಟಿ, ಚಾಪೆ ಮೇಲೆ ನಿದ್ದೆ, ಬೆಳಗೆದ್ದ ಮೇಲಿನ ದಿನಚರಿಯನ್ನೂ ಜನರ ಮುಂದಿಟ್ಟವು. ಮತ್ತೊಂದು ಚಾನೆಲ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶ್ರೀರಾಮುಲು ಕುರಿತ ಸರಣಿ ಕಾರ್ಯಕ್ರಮವನ್ನೇ ಪ್ರಸಾರ ಮಾಡಿತು. ಜೀವದ ಗೆಳೆಯ ಜೀವದ ಗೆಳೆಯ, ಆತನೀಗ ಏಕಾಂಗಿ ಎಂಬುದನ್ನು 'ಮನಕಲಕುವಂತೆ' ಪ್ರಸಾರ ಮಾಡಿತು.

ಬಿಜೆಪಿ ರಾಜ್ಯಾಧ್ಯಕ್ಷರಿಗೆ ಒಂದೂವರೆ ಕೋಟಿ ಬೆಲೆಯ ಕಾರು, 40 ಲಕ್ಷ ರೂ. ಮೌಲ್ಯದ ಖಡ್ಗ, ತಿರುಪತಿ ತಿಮ್ಮಪ್ಪನಿಗೆ ವಜ್ರಖಚಿತ ಕಿರೀಟ ನೀಡಿದ್ದು ಸೇರಿದಂತೆ ಎಲ್ಲವನ್ನೂ ಎಲ್ಲರನ್ನೂ ಖರೀದಿ ಮಾಡುವಲ್ಲಿ ನಿಸ್ಸೀಮರಾದ ರೆಡ್ಡಿ ಪಾಳಯ, ಪತ್ರಕರ್ತರಿಗೂ ರಾಜ್ಯ ಲೂಟಿ ಮಾಡಿದ ಹಣವನ್ನು ಹಂಚಿದೆ. ಇದನ್ನು ಸ್ವತಃ ಯು.ವಿ. ಸಿಂಗ್ ನೇತೃತ್ವದ ಲೋಕಾಯುಕ್ತ ವರದಿ ಬಯಲಿಗೆಳೆದಿದೆ. ಕೇವಲ ಪ್ರಜಾವಾಣಿ, ದ ಹಿಂದೂ ಪತ್ರಿಕೆಗಳು ಮಾತ್ರ ಈ ವರದಿಯನ್ನು ಪ್ರಕಟಿಸುವ ಧೈರ್ಯ ತೋರಿವೆ. ಕನ್ನಡದ ಪತ್ರಿಕೆಯೊಂದರ ಸಂಪಾದಕ ವಿ. ಭಟ್‌ಗೆ 75 ಲಕ್ಷ ಮತ್ತು ರೆಡ್ಡಿಯ ಬಂಟ ಎಂದು ತೋರಿಸಿಕೊಳ್ಳುತ್ತಿದ್ದ ಟ್ಯಾಬ್ಲಾಯಿಡ್ ವಾರಪತ್ರಿಕೆಯೊಂದರ ಸಂಪಾದಕ ಆರ್‌ಬಿಗೆ 20 ಲಕ್ಷ ರೂ. ಸೇರಿದಂತೆ ಭ್ರಷ್ಟ ಪತ್ರಕರ್ತರಿಗೆ ಕೋಟ್ಯಂತರ ಹಣವನ್ನು ನೀಡಲಾಗಿದೆ. (ವಿ.ಭಟ್ ಎಂದರೆ ವಿಶ್ವೇಶ್ವರ ಭಟ್ ಎಂದೂ, ಆರ್.ಬಿ. ಎಂದರೆ ರವಿಬೆಳಗೆರೆ ಎಂದೂ ಮಾಧ್ಯಮರಂಗದಲ್ಲಿ ಸುದ್ದಿಗಳು ಹರಿದಾಡುತ್ತಿವೆ.) ಇದರ ಬಗ್ಗೆ ಒಂದಿಷ್ಟೂ ಚಕಾರ ಎತ್ತದ ಈ ಪತ್ರಕರ್ತರು, ನಿಯತ್ತಿನ ನಾಯಿಯಂತೆ ಒಡೆಯನ ಅನ್ನದ ಋಣವನ್ನು ತೀರಿಸಿದ್ದಾರೆ. ರೆಡ್ಡಿ ಮಾಡಿದ್ದು ಸರಿ ಎಂಬುದನ್ನು ಸಮರ್ಥಿಸಿಕೊಳ್ಳುವ ಮೂಲಕ.

ಬಳ್ಳಾರಿಯ ಪತ್ರಕರ್ತರಂತೂ ತಮ್ಮನ್ನು ಸಾಕಿ ಸಲಹಿದಂತಹ ಗಣಿ ಧಣಿಗಳಿಗೆ ಮತ್ತೊಂದು ಸಹಾಯ ಮಾಡಿದ್ದಾರೆ. ರಾಜ್ಯದಲ್ಲಿ ಮತ್ತೆ ಗಣಿಗಾರಿಕೆಗೆ ಅನುಮತಿ ನೀಡಬೇಕೆಂದು 'ಬಳ್ಳಾರಿ ರಿಪೋರ್ಟರ್ಸ್ ಗಿಲ್ಡ್' ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಸುದ್ದಿ ಮಾಡುವುದರಲ್ಲೂ ಚಾನೆಲ್‌ಗಳು ಪೈಪೋಟಿ ನಡೆಸಿವೆ. ಯಡ್ಡಿ ಹಾಗೂ ನಿರಾಣಿ ವಿರುದ್ಧ ಯಾವುದೇ ಸುದ್ದಿ ಮಾಡದಂತೆ ಸಮಯ ನ್ಯೂಸ್ ತನ್ನ ವರದಿಗಾರರಿಗೆ ತಾಕೀತು ಮಾಡಿದೆ. ನಿರಾಣಿಯವರ ಒಡೆತನದ ಈ ಚಾನೆಲ್, ಜನಾರ್ದನ ರೆಡ್ಡಿ ಜೈಲುಪಾಲಾದಾಗ ಅತಿಉತ್ಸಾಹದಿಂದಲೇ ಸುದ್ದಿಯ ಕಣಕ್ಕೆ ಜಿಗಿಯಿತು. ಅದಕ್ಕೆ ಪ್ರತಿಯಾಗಿ, ಜನಶ್ರೀ ಎಂಬ ರೆಡ್ಡಿಗಳ ಚಾನೆಲ್, ಯಡ್ಡಿ ವಿರುದ್ಧ ಭಯಂಕರವಾಗಿ ಅರ್ಭಟಿಸಿ ಸುದ್ದಿ ಮಾಡಿತು.

ಆದರೆ, ಈ ಚಾನೆಲ್‌ಗಳು, ಪತ್ರಕರ್ತರ ಭ್ರಷ್ಟಾಚಾರದ ಬಗ್ಗೆ, ರಾಜಕಾರಣಿಗಳ ಅವ್ಯವಹಾರದ ಬಗ್ಗೆ ಸಮಗ್ರವಾದ ವರದಿ ಮುಂದಿಡುವ ಧೈರ್ಯ ತೋರಲಿಲ್ಲ.

ಟಿ.ವಿ–9ನಲ್ಲಿ ರೆಡ್ಡಿ ಭಜನೆ

"ಉತ್ತಮ ಸಮಾಜದ ನಿರ್ಮಾಣ"ಕ್ಕಾಗಿ ....ಎಂದು ದಿನ ನಿತ್ಯ ಬೊಬ್ಬೆ ಹೊಡೆಯುವ ಚಾನೆಲ್ ಅದು. ಈ ಟಿ.ವಿ. ಗುಪ್ತ ಕ್ಯಾಮರಾಗಳಲ್ಲಿ ಸಿಲುಕಿಕೊಂಡ ಎಷ್ಟೋ ಜನ ಅಧಿಕಾರಿ ಲಂಚ ತಿಂದದ್ದರ ನೇರ ಸಾಕ್ಷ್ಯಗಳಿಂದ ಕೂಡಲೇ ಅಮಾನತ್ತಾದದ್ದಿದೆ.

ಇಂತಹ ಹಿನ್ನೆಲೆಗಳಿಂದಲೋ ಏನೋ ನಮ್ಮ ನಾಡಿನ ಎಷ್ಟೋ ಮುಗ್ಧ ಜನ ತಮ್ಮ ಜೀವನದಲ್ಲಿ ಭ್ರಷ್ಟತೆಯನ್ನು, ಭ್ರಷ್ಟರನ್ನು ಎದುರಿಸಬೇಕಾಗಿ ಬಂದಾಗ " 'ಟಿ.ವಿ–9' ಗೆ ಫೋನ್ ಮಾಡಿ ಬಿಡ್ತೀನಿ" ಅಂತ ಹೇಳುವುದಿದೆ.

'ಟಿ.ವಿ. 9' ಎಂಬ ಚಾನೆಲ್ ರಾಜ್ಯದ ಗಣಿ ಅಕ್ರಮ, ನಿಸರ್ಗ ಸಂಪತ್ತಿನ ಘೋರ ಲೂಟಿ, ಸಂವಿಧಾನ ಕಾನೂನಿನ ಆಡಳಿತವನ್ನೇ ಬುಡ ಮೇಲು ಮಾಡುವಂತಹ ಜನಾರ್ಧನ ರೆಡ್ಡಿ ಮತ್ತು ಗ್ಯಾಂಗಿನ ನಾನಾ ಪಾತಕ ಕೃತ್ಯಗಳು, ವಂಚನೆಗಳನ್ನು ಯಾವ ಪರಿಯಾಗಿ ತೋರಿಸುತ್ತದೆ ಎಂದು ಎಷ್ಟೋ ಜನ ಕುತೂಹಲದಿಂದ ಕಾದಿದ್ದರು.

ಅದೇನು ಮಾಯೆಯೋ ಅದೇನು ಮರ್ಮವೋ ?! ಆ ತಿರುಪತಿ ತಿಮ್ಮಪ್ಪನಿಗೆ ಗೊತ್ತು. ಜನಾರ್ಧನ ರೆಡ್ಡಿ ಚುಂಚಲವಾಡ ಜೈಲಿನಲ್ಲಿ ಅನುಭವಿಸುತ್ತಿರುವ ಪಾಡು ಈ ಟಿ.ವಿ.ಯ ಮನಸ್ಸನ್ನು ಕಲಕಿ ಹಾಕಿದೆ. ದೇಶವನ್ನೇ ಬೆಚ್ಚಿ ಬೀಳಿಸುವಂತಹ ಭಯಾನಕ ಹಗರಣಗಳ ನಾನಾ ಮುಖಗಳು ಬಯಲಾಗಬೇಕಾದ ಜಾಗದಲ್ಲಿ ಜನಾರ್ಧನ ರೆಡ್ಡಿಯ ಭಜನೆ !!

"ರೆಡ್ಡಿ ಮಹಾನ್ ದೈವ ಭಕ್ತರು..ತಮ್ಮ ದೈವ ಭಕ್ತಿಯಿಂದಾಗಿಯೇ ಅವರು ಇಷ್ಟು ಎತ್ತರಕ್ಕೆ, ಅಷ್ಟು ಶ್ರೀಮಂತರಾಗಿ ಬೆಳೆದಿದ್ದಾರೆ.." ಅಂತ ಸುಪ್ರಿಂ ಕೋರ್ಟಗಿಂತ ಮುಂಚೆ ತೀರ್ಪನ್ನೇ ಕೊಟ್ಟು ಬಿಟ್ಟಿತು. ಟಿ.ವಿ–9 ಚಾನೆಲ್.

ಆರ್.ಕೆ.

ಭೂಕಂಪನ ಮುನ್ನೆಚ್ಚರಿಕೆ

ಪುಟ 16 ರಿಂದ

ನಗರದಲ್ಲಿ ಸಂಭವಿಸಿದ ಭೂಕಂಪನದ ಮುನ್ನೆಚ್ಚರಿಕೆಯನ್ನು ಈ ವ್ಯವಸ್ಥೆಯು ನೀಡಲು ವಿಫಲವಾದ ಕಾರಣ ಬುಲೆಟ್ ರೈಲುಗಳು ಅವಘಡಕ್ಕೀಡಾದವು. ಭೂಕಂಪನದ ಕೇಂದ್ರ ಸ್ಥಾನ ಬಹಳ ಹತ್ತಿರದಲ್ಲಿಯೇ ಇದ್ದುದ್ದರಿಂದ ತಕ್ಷಣ ಮಾಹಿತಿ ರವಾನೆ ಮಾಡಿ ಎಚ್ಚರಿಸುವಷ್ಟರಲ್ಲಿ ವಿನಾಶಕಾರಿ ಭೂತರಂಗಗಳು ತಮ್ಮ ಕೆಲಸ ಮಾಡಿ ಮುಗಿಸಿದ್ದವು.

ಅಮೇರಿಕಾ ಕೂಡ ಇತ್ತೀಚೆಗೆ ಜಪಾನ್ ಮಾದರಿಯ ಮುನ್ನೆಚ್ಚರಿಕೆ ಸಂದೇಶ ತಂತ್ರಜ್ಞಾನ ಅಭಿವೃದ್ಧಿಪಡಿಸಿ ಯಶಸ್ವಿ ಪ್ರಯೋಗ ಮಾಡಿದೆ. ದೇಶಾದ್ಯಂತ ಭೂಕಂಪನ ಕುರಿತು ಜನರಿಗೆ ಮುನ್ನೆಚ್ಚರಿಕೆ ನೀಡಲು ಸೆನ್ಸರ್‌ಗಳನ್ನು ಒಳಗೊಂಡ ಬೃಹತ್ ಕಂಪ್ಯೂಟರ್ ಜಾಲದ ವ್ಯವಸ್ಥೆ ಅಳವಡಿಸುವ ಕುರಿತು ಅಲ್ಲಿ ಇದೀಗಷ್ಟೆ ಚರ್ಚೆ ನಡೆಯುತ್ತಿದೆ.

ಇಟಲಿಯ ಲಾ'ಕಿಲಾ ದಲ್ಲಿ ಭೂವಿಜ್ಞಾನಿಗಳ ವಿರುದ್ಧ ದಾವೆ:

ಭೂವಿಜ್ಞಾನಿಗಳನ್ನು ಮಾನವ ಹತ್ಯೆ ಮಾಡಿರುವ ಆರೋಪದ ಮೇಲೆ ಇಟಲಿಯ ನ್ಯಾಯಾಲದಲ್ಲಿ ವಿಚಾರಣೆ ನಡೆಸುತ್ತಿರುವ ವಿಲಕ್ಷಣ ಘಟನೆ ಗಮನ ಸೆಳೆದಿದೆ. 2009ರಲ್ಲಿ ಇಟಲಿಯ ಪುರಾತನ ಪಟ್ಟಣ ಲಾ'ಕಿಲಾ ದಲ್ಲಿ ಆಗಾಗ್ಗೆ ಉಂಟಾಗುತ್ತಿದ್ದ ಭೂಕಂಪನ ಕುರಿತು ಅಧ್ಯಯನ ನಡೆಸಿ ಜನತೆಯ ಸಂಶಯ ನಿವಾರಿಸಲು ಭೂತಜ್ಞರನ್ನೊಳಗೊಂಡ ನಾಗರೀಕರ ಸಮಿತಿಯೊಂದನ್ನು ಸರ್ಕಾರ ರಚಿಸಿತ್ತು. ಭೂವಿಜ್ಞಾನಿಗಳ ತಂಡ ಅಲ್ಲಿಗೆ ತೆರಳಿ ಅಧ್ಯಯನ ನಡೆಸಿ "ಇದು ಆಗಾಗ್ಗೆ ನಡೆಯುತ್ತಿರುವ ಸಣ್ಣ ಕಂಪನಗಳಷ್ಟೇ. ಇದರಿಂದ ಅಷ್ಟೇನೂ ದೊಡ್ಡ ಪ್ರಮಾಣದ ಭೂಕಂಪ ಉಂಟಾಗುವ ಸಾಧ್ಯತೆಗಳು ಕಡಿಮೆಯೇ ಆಗಿದ್ದರೂ ಭೂಕಂಪನ ಆಗುವುದೇ ಇಲ್ಲವೆಂದು ಹೇಳಲಾಗದು" ಎಂದು ಈ ತಂಡ ಹೇಳಿಕೆ ನೀಡಿ ವಾಪಸು ಬಂದಿತ್ತು. ಆಗಲೇ ಭೂಕಂಪ ಸಂಭವಿಸಿ 307 ನಾಗರೀಕರು ಸತ್ತು ಅಪಾರ ನಷ್ಟ ಸಂಭವಿಸಿತ್ತು. ಭೂವಿಜ್ಞಾನಿಗಳ ತಂಡ ಭೂಕಂಪನ ಕುರಿತು ಸ್ಪಷ್ಟವಾದ ಅಭಿಪ್ರಾಯ ನೀಡದ ಕಾರಣ ಜನರು ಮನೆಯಲ್ಲಿ ಉಳಿದುಕೊಂಡದ್ದರಿಂದ ಹೆಚ್ಚಿನ ಸಾವು ಸಂಭವಿಸಿದೆಯೆಂದು, ಇವರ ಸಾವಿಗೆ ಭೂವಿಜ್ಞಾನಿಗಳೇ ಕಾರಣವೆಂದು ಇವರ ಮೇಲೆ 'ಮಾನವ ಹತ್ಯೆ ಆರೋಪ' ಹೊರಿಸಿ ವಿಚಾರಣೆ ನಡೆಸಲಾಗುತ್ತಿದೆ. ವಿಜ್ಞಾನ–ತಂತ್ರಜ್ಞಾನವನ್ನು ಇನ್ನೂ ನಿಖರವಾಗಿ ಭೂಕಂಪನ ಸಂಭವಿಸುವ ಕುರಿತು ಮುನ್ನೆಚ್ಚರಿಕೆ ನೀಡುವಷ್ಟು ಅಭಿವೃದ್ಧಿಪಡಿಸಬೇಕಾಗಿರುವುದರಿಂದ ಭೂವಿಜ್ಞಾನಿಗಳನ್ನು ಆರೋಪಿಗಳನ್ನಾಗಿಸುವುದು ತಪ್ಪು ಎಂದು 5000 ಕ್ಕೂ ಹೆಚ್ಚು ಪ್ರೊಫೆಸರುಗಳು, ವಿಜ್ಞಾನಿಗಳು ಬೆಂಬಲಕ್ಕೆ ನಿಂತಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಣದುಬ್ಬರ ಎರಡಂಕಿಗೆ ತಲುಪಿ ಜನಸಾಮಾನ್ಯರು ಏದುಸಿರು ಬಿಡುತ್ತಿದ್ದರೂ ಗಮನಿಸದೆ ಪೆಟ್ರೋಲ್ ಬೆಲೆಗಳನ್ನು ಈ ವರ್ಷದಲ್ಲಿ ಮೂರನೇ ಬಾರಿ ತೀವ್ರವಾಗಿ ಏರಿಸಿದ ಬೆನ್ನಲ್ಲೇ ಯುಪಿಎ-2 ಸರಕಾರದ ಕ್ರೌರ್ಯ ಸುಪ್ರಿಂಕೋರ್ಟಿನಲ್ಲಿ ಮತ್ತೆ ಪ್ರದರ್ಶನಗೊಂಡಿದೆ. ಜನತೆಯ ಬಗ್ಗೆ ಈ ದಿವ್ಯ ತಿರಸ್ಕಾರ ಸಾಲದೆಂಬಂತೆ, ಪರಮಾಣು ಸ್ಥಾವರಗಳ ಬಗ್ಗೆ ಅವರ ನೈಜ ಭಯಗಳನ್ನು ತುಚ್ಛೀಕರಿಸುವ ಮಸೂದೆಯನ್ನು ತಂದಿದೆ, ಭಾರತದ ರಕ್ಷಣಾ ಉದ್ದಿಮೆ ಕ್ಷೇತ್ರದ ಪ್ರಮುಖ ಸಂಸ್ಥೆಯ ಹೆಚ್‌ಎಎಲ್ ನ 10% ಶೇರು ವಿಕ್ರಯದ ಜನ-ವಿರೋಧಿ ನಿರ್ಧಾರವನ್ನು ಕೈಗೊಂಡಿದೆ. ಈ ನಡುವೆ 2ಜಿ ಹಗರಣದಲ್ಲಿ ಈಗಿನ ಕೇಂದ್ರ ಗೃಹಮಂತ್ರಿಗಳ ಪಾತ್ರ ನಿಚ್ಚಳವಾಗುತ್ತಿದೆ. ಅತ್ತ ಯುಪಿಎ ಅಂಗಪಕ್ಷಗಳಿಗೆ ಯುಪಿಎ ಧೋರಣೆ ಜುಜುಗರ ತರುತ್ತಿದ್ದು ಅಡುಗೆ ಅನಿಲದ ಬೆಲೆಯೇರಿಕೆಯ ಪ್ರಯತ್ನವನ್ನು ಸದ್ಯಕ್ಕೆ ತಡೆ ಹಿಡಿದಿವೆ.

ಯುಪಿಎ-2 ಸರಕಾರದ ಕ್ರೂರಮುಖವನ್ನು ಬಯಲಿಗೆಳೆದ ಅಫಿಡವಿಟ್

ನಗರಗಳಲ್ಲಿ ದಿನಕ್ಕೆ 32ರೂ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ದಿನಕ್ಕೆ 26ರೂ.ಗಿಂತ ಹೆಚ್ಚು ಖರ್ಚು ಮಾಡಬಲ್ಲವರು ಯುಪಿಎ-2 ಸರಕಾರದ ಪ್ರಕಾರ ಬಡವರಲ್ಲ, ಅವರು ಸರಕಾರದ ಯಾವುದೇ ಸಬ್ಸಿಡಿಗೆ ಅರ್ಹರಲ್ಲ. ಇದು ದೇಶದ ಸರ್ವೋಚ್ಚ ನ್ಯಾಯಾಲಯದ ಎದುರು ದೇಶದ ಯೋಜನಾ ಆಯೋಗ ಸಲ್ಲಿಸಿರುವ ಪ್ರಮಾಣಪತ್ರ! ಇದು 'ಪರಿಷ್ಕೃತ' ಬಡತನದ ರೇಖೆ ಎಂಬುದನ್ನು ಗಮನಿಸಿ ! ಈ ಮೊದಲು ಇದೇ ಯೋಜನಾ ಆಯೋಗ ಸಲ್ಲಿಸಿದ ಅಫಿಡವಿಟ್ ನಗರಗಳಲ್ಲಿ 20ರೂ. ಮತ್ತು ಹಳ್ಳಿಗಳಲ್ಲಿ 15ರೂ.ಗಿಂತ ಹೆಚ್ಚು ಖರ್ಚು ಮಾಡಬಲ್ಲವರು ಬಡವರಲ್ಲ ಎಂದಿತ್ತು. ದಿನಕ್ಕೆ 2400 ಕ್ಯಾಲರಿ ಆಹಾರ ಬೇಕೆಂದಾದರೆ ಇದು ಸಾಕೇ, ಆಹಾರ ವಸ್ತುಗಳ ಬೆಲೆಯೇರಿಕೆಯನ್ನು ಪರಿಗಣಿಸಿ ಇದನ್ನು ಪರಿಷ್ಕರಿಸಿ ತಿಳಿಸಿ ಎಂದು ಸರ್ವೋಚ್ಚ ನ್ಯಾಯಾಲಯದ ಹೇಳಿತ್ತು. ಇದೀಗ ಯೋಜನಾ ಆಯೋಗ ಚೌಕಾಶಿ ಮಾಡಿ 'ಪರಿಷ್ಕರಿಸಿದ' ಮಿತಿ! ಇದನ್ನು ಸಲ್ಲಿಸುವ ಮೊದಲು ಪ್ರಧಾನ ಮಂತ್ರಿಗಳ ಕಚೇರಿಯಿಂದ ಇದಕ್ಕೆ ಅನುಮೋದನೆಯೂ ಸಿಕ್ಕಿದೆ ಎಂಬುದು ಯುಪಿಎ ಪ್ರಧಾನಿ ಮನಮೋಹನ್ ಸಿಂಗ್‌ರ 'ಆಮ್ ಆದ್ಮಿ' ಮಂತ್ರೋಚ್ಚಾರಣೆಯ ಬಗ್ಗೆ ಇನ್ನೂ ಯಾರಿಗಾದರೂ ಭ್ರಮೆಗಳಿದ್ದರೆ ಅವನ್ನೆಲ್ಲ ಮಚ್ಚುನೂರು ಮಾಡಿದೆ.


ಯುಪಿಎ-2 ಸರಕಾರದ ಪರವಾಗಿ ಯೋಜನಾ ಆಯೋಗದ ಈ ಎಲ್ಲ ಕಸರತ್ತು ಬಿಪಿಎಲ್ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡುವುದಕ್ಕಾಗಿ ಎಂಬುದು ಸ್ವಯಂವೇದ್ಯ. ಸ್ವತಃ ಸುಪ್ರಿಂಕೋರ್ಟ್ ಫಲಾನುಭವಿಗಳ ಸಂಖ್ಯೆಯನ್ನೇಕೆ ಮಿತಗೊಳಿಸಬೇಕು ಎಂಬುದರ ಹಿಂದಿನ ತರ್ಕವೇನು ಎಂದು ಕೇಳಿತ್ತು. ಆದರೆ ಯೋಜನಾ ಆಯೋಗ ಇದಕ್ಕೆ ಉತ್ತರ ನೀಡದೆ ನುಣುಚಿಕೊಂಡಿದೆ ಎಂದು ಯೋಜನಾ ಆಯೋಗದ ಇಬ್ಬರು ಸದಸ್ಯರು, ಅಭಿಜಿತ್ ಸೇನ್ ಮತ್ತು ಮಿಹಿರ್ ಶಹಾ ಈಗ ಬಹಿರಂಗವಾಗಿಯೇ ಹೇಳಿಕೆ ನೀಡಿದ್ದಾರೆ. ಇಂದಲ್ಲ ನಾಳೆ ನಾವು ಇದಕ್ಕೆ ಉತ್ತರ ಕೊಡಲೇಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಯುಪಿಎ-2 ಸರಕಾರಕ್ಕೆ 'ಆಮ್ ಆದ್ಮಿ'-ಪರ ವೇಷ ತೊಡಿಸಿರುವ ಸೋನಿಯಾ ಗಾಂಧಿ ಅಧ್ಯಕ್ಷತೆಯ ರಾಷ್ಟ್ರೀಯ ಸಲಹಾ ಮಂಡಳಿ(ಎನ್‌ಎಸಿ)ಯ ಒಬ್ಬ ಪ್ರಮುಖ ಸದಸ್ಯೆ ಅರುಣಾ ರಾಯ್ ಕೂಡ ಹಲವಾರು ಹಗರಣಗಳು ಮತ್ತು ಪ್ರಭುತ್ವದ ಬಗ್ಗೆ ವ್ಯಾಪಕ ಅಸಂತೃಪ್ತಿಯ ಹಿನ್ನೆಲೆಯಲ್ಲಿ ಈ ಅಫಿಡವಿಟ್ ಈ ಸರಕಾರಕ್ಕೆ ಬಡವರ ಬಗ್ಗೆ ಸ್ವಲ್ಪವೂ ಕಳಕಳಿಯಿಲ್ಲ, ಅದಕ್ಕೆ ಬಡವರ ಸಂಖ್ಯೆಯನ್ನು ಕೃತಕವಾಗಿ ಇಳಿಸುವುದಷ್ಟೇ ಬೇಕಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ.



ವೇದರಾಜ ಎನ್.ಕೆ.

ಆಹಾರದ ವಿಷಯದಲ್ಲಿ ಸುಪ್ರಿಂ ಕೋರ್ಟ್ ಆಯುಕ್ತರುಗಳಿಗೆ ಪ್ರಮುಖ ಸಲಹಾಗಾರರಾದ ಬಿರಾಜ್ ಪಟ್ನಾಯಕ್‌ರಂತೂ ಯೋಜನಾ ಆಯೋಗ ತನ್ನ ಸದಸ್ಯರಿಗಾಗಿ ಇರುವ ಒಂದು ಹೌಸಿಂಗ್ ಸೊಸೈಟಿಯ ಮಟ್ಟಕ್ಕೆ ಇಳಿದಿದೆ ಎಂದು ಕಟುವಾಗಿ ಟೀಕಿಸಿದ್ದಾರೆ. ಸುಪ್ರಿಂ ಕೋರ್ಟ್ ಎರಡು ನೇರವಾದ ವಿಷಯಗಳನ್ನು ಯೋಜನಾ ಆಯೋಗದ ಮುಂದಿಟ್ಟಿತ್ತು-ಒಂದು, ಬಡತನದ ರೇಖೆಯ ಮೇಲ್ಮುಖ ಪರಿಷ್ಕರಣ ಮತ್ತು ಎರಡು, ಬಿಪಿಎಲ್ ನಿರ್ಧರಿಸಲು ಮಿತಿಗಳನ್ನು ಹಾಕದಿರುವುದು. ಇವೆರಡಕ್ಕೂ ಮೌನ ತಾಳಿ ಯೋಜನಾ ಆಯೋಗ ನಿಜವಾಗಿ ನ್ಯಾಯಾಲಯವನ್ನು ತಪ್ಪು ದಾರಿಗೆಳೆದಿದೆ ಎಂದೂ ಅವರು ಹೇಳಿದ್ದಾರೆ. ಈ ಬಗ್ಗೆ ಸರಕಾರದೊಳಗೇ ಭಿನ್ನಾಭಿಪ್ರಾಯಗಳಿದ್ದರೂ ಪ್ರಧಾನ ಮಂತ್ರಿಗಳ ಕಚೇರಿ ಯೋಜನಾ ಆಯೋಗದ ಬೆಂಬಲಕ್ಕೆ ನಿಂತಿರುವುದರಿಂದ ಈ ಅಧ್ವಾನಕ್ಕೆ ಅದೂ ಹೊಣೆಯಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಇನ್ನಷ್ಟು ಜನಗಳಿಗೆ ಆಹಾರ ಭದ್ರತೆಯನ್ನು ವಂಚಿಸುವ ಯೋಜನಾ ಆಯೋಗದ ಕಾರ್ಯತಂತ್ರವಿದು ಎಂದು ಖಂಡಿಸುತ್ತ ಸಾರ್ವತ್ರಿಕ ಪಡಿತರ ವ್ಯವಸ್ಥೆ ತರಲೇಬೇಕು ಎಂಬ ತನ್ನ ಬೇಡಿಕೆಯನ್ನು ಪುನರುಚ್ಚರಿಸಿದೆ.

★

2ಜಿ ಹಗರಣ: ಮಾಜಿ ಹಣಕಾಸು ಮಂತ್ರಿಗಳ ಶಾಮೀಲಿನ ಸಂಕೇತ

2ಜಿ ತರಂಗಾಂತರ ಹಂಚಿಕೆ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳಿಗೆ ಗೊತ್ತಿದ್ದೇ ನಡೆದಿದೆ ಎಂದು ಈಗ ನ್ಯಾಯಾಂಗ ಕಸ್ಟಡಿಯಲ್ಲಿರುವ ಮಾಜಿ ದೂರಸಂಪರ್ಕ ಮಂತ್ರಿಗಳು ಹೇಳುತ್ತಲೇ ಬಂದಿದ್ದಾರೆ. ಈ ವಿಷಯದಲ್ಲಂತೂ ಅವರು ನಿಜ ಹೇಳುತ್ತಿರಬಹುದು ಎಂಬ ಬಗ್ಗೆ ಒಂದು ಪುರಾವೆ ಈ ವಾರ ಬಯಲಿಗೆ ಬಂದಿದೆ. ಈ ವರ್ಷ ಮಾರ್ಚ್ ತಿಂಗಳಲ್ಲಿ ಹಣಕಾಸು ಇಲಾಖೆಯಿಂದ ಪ್ರಧಾನ ಮಂತ್ರಿಗಳ ಕಚೇರಿಗೆ ಸಲ್ಲಿಸಿರುವ ಒಂದು ಟಿಪ್ಪಣಿಯಲ್ಲಿರುವ ಸಂಗತಿ 'ಮಾಹಿತಿ ಹಕ್ಕು ಕಾಯಿದೆ'ಯ ಅಡಿಯಲ್ಲಿ ವಿವೇಕ್ ಗರ್ಗ್ ಎಂಬವರು ಸಲ್ಲಿಸಿದ ಅರ್ಜಿಯ ಮೂಲಕ ಬೆಳಕಿಗೆ ಬಂದಿರುವ ವಿಷಯ ಈ ದಿಕ್ಕಿನತ್ತ ಬೊಟ್ಟು ಮಾಡಿದೆ.

ಜನವರಿ 15, 2008ರಂದು ಆಗಿನ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರು

ಪುಟ 15ಕ್ಕೆ

ಕೈಗೊಂಬೆ ಪರಮಾಣು ನಿಯಂತ್ರಣ ಪ್ರಾಧಿಕಾರ ಜನಭಾವನೆಗಳಿಗೆ ದಿವ್ಯ ತಿರಸ್ಕಾರ

ಜಪಾನಿನ ಫುಕುಶಿಮ ಪರಮಾಣು ದುರಂತದ ಹಿನ್ನೆಲೆಯಲ್ಲಿ ಉಂಟಾದ ಸಂದೇಹಗಳ ಸಂದರ್ಭದಲ್ಲಿ ಒಂದು ಸ್ವತಂತ್ರ ನಿಯಂತ್ರಣ ಪ್ರಾಧಿಕಾರವನ್ನು ರಚಿಸಲಾಗುವುದು ಎಂದು ಪ್ರಧಾನಮಂತ್ರಿಗಳು ಭರವಸೆ ನೀಡಿದ್ದರು. ಆದರೆ ಈಗ ಲೋಕಸಭೆಯಲ್ಲಿ ಮಂಡಿಸಿರುವ 'ಪರಮಾಣು ಸುರಕ್ಷತೆ ನಿಯಂತ್ರಣ ಪ್ರಾಧಿಕಾರ ಮಸೂದೆ'ಯನ್ನು ನೋಡಿದರೆ ಅವರು ಅದರಂತೆ ನಡೆದುಕೊಂಡಿಲ್ಲ, ಅವರು ರಚಿಸಲು ಹೊರಟಿರುವುದು ಸರಕಾರದ ಕೈಗೊಂಬೆ ಪ್ರಾಧಿಕಾರವನ್ನು ಎಂಬುದು ಮೇಲ್ನೋಟಕ್ಕೇ ಕಾಣ ಬರುತ್ತಿದೆ.

ಈ ಮಸೂದೆಯ ಪ್ರಕಾರ ಒಂದು ಪರಮಾಣು ಸುರಕ್ಷಿತಾ ಮಂಡಳಿ ರಚಿಸಲಾಗುವುದು. ಇದರಲ್ಲಿ ಪ್ರಧಾನ ಮಂತ್ರಿಗಳು, ಐದು ಅಥವ ಅದಕ್ಕೂ ಹೆಚ್ಚು ಸಂಪುಟ ದರ್ಜೆಯ ಮಂತ್ರಿಗಳು, ಸಂಪುಟ ಕಾರ್ಯದರ್ಶಿ ಹಾಗೂ ಸರಕಾರ ನೇಮಿಸುವ ಪರಿಣಿತರು ಇರುತ್ತಾರೆ. ಈ ನಿಯಂತ್ರಣ ಪ್ರಾಧಿಕಾರವನ್ನು ನಿರ್ದೇಶಿಸುವುದು, ಹತೋಟಿಯಲ್ಲಿಡುವುದು ಇದೇ ಸರಕಾರೀ ಮಂಡಳಿ.

ಇಷ್ಟೇ ಅಲ್ಲ, ಈ ನಿಯಂತ್ರಣ ಪ್ರಾಧಿಕಾರ ಹಲವು ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ. ಇದು 'ಭಾರತದ ಅಂತರರಾಷ್ಟ್ರೀಯ ಬಾಧ್ಯತೆಗಳಿಗೆ ಅನುಗುಣವಾಗಿ' ಕೆಲಸ ಮಾಡಬೇಕಂತೆ, ಆಮದಾದ ವಿದೇಶಿ ಸ್ಥಾವರಗಳಲ್ಲಿನ, ಅಂತರ್ರಾಷ್ಟ್ರೀಯ ಒಪ್ಪಂದಗಳನ್ನು ಪ್ರಶ್ನಿಸುವಂತಿಲ್ಲವಂತೆ. ಅಂದರೆ ಸರಕಾರ ಎಂತಹುದೇ ಒಪ್ಪಂದ ಮಾಡಿಕೊಂಡರೂ ಅದಕ್ಕೆ ತೆಪ್ಪಗೆ ಮಂಜೂರಾತಿ ಕೊಡಬೇಕು!

"ನಿಯಂತ್ರಣ ಪ್ರಾಧಿಕಾರ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆ, ಪ್ರಭುತ್ವದ ಭದ್ರತೆ, ವಿದೇಶಿ ಪ್ರಭುತ್ವಗಳೊಂದಿಗೆ ಮಿತ್ರತ್ವದ ಸಂಬಂಧಗಳು, ಸಾರ್ವಜನಿಕ ವ್ಯವಸ್ಥೆ, ಶಿಷ್ಟತೆ ಅಥವ ನೈತಿಕತೆಯ ವಿರುದ್ಧವಾಗಿ ವರ್ತಿಸಬಾರದು" ಎಂಬ ವಿಶೇಷ ನಿಬಂಧನೆ ಈ ಮಸೂದೆಯಲ್ಲಿದೆ. ಇದೊಂದು ಅಭೂತಪೂರ್ವ ನಿರ್ದೇಶನವಾಗಿದ್ದು, ಹೆಸರಿಗೆ ಒಂದು ನಿಯಂತ್ರಣ ಪ್ರಾಧಿಕಾರವಾದರೂ ವಾಸ್ತವವಾಗಿ ಅದು ಸರಕಾರಕ್ಕೆ ವಿಧೇಯವಾಗಿರುವಂತೆ ಬೆದರಿಸಿಡುವ ಅಂಶ ಇದರಲ್ಲಿದೆ.

ಅಲ್ಲದೆ, ಈ ಪ್ರಾಧಿಕಾರದ ಅಧ್ಯಕ್ಷರನ್ನು ಅಥವ ಸದಸ್ಯರನ್ನು ತೆಗೆದು ಹಾಕುವ, ಪ್ರಾಧಿಕಾರವನ್ನೇ ವಿಸರ್ಜಿಸುವ ಅಧಿಕಾರವನ್ನು ಈ ಮಸೂದೆ ಕೇಂದ್ರ ಸರಕಾರಕ್ಕೆ ಕೊಡುತ್ತದೆ. ಒಟ್ಟಿನಲ್ಲಿ, ಇಂತಹ ಒಂದು ಮಸೂದೆಯನ್ನು ತಂದು ಯುಪಿಎ-2 ಸರಕಾರ ಪರಮಾಣು ಸ್ಥಾವರಗಳ ಬಗ್ಗೆ ಜನಗಳ ನೈಜ ಭಯಗಳಿಗೆ ದಿವ್ಯ ತಿರಸ್ಕಾರವನ್ನು ತೋರಿದೆ. ಇದನ್ನು ರದ್ದು ಮಾಡಿ ಒಂದು ನಿಜವಾಗಿಯೂ ಸ್ವತಂತ್ರವಾದ ಪರಮಾಣು ಸುರಕ್ಷಿತಾ ನಿಯಂತ್ರಣ ಮಸೂದೆಯನ್ನು ತರಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಈ ವಾರ

ಪುಟ 3 ರಿಂದ

ಖಂಡಿತಕ್ಕೂ ಕಾಣುತ್ತದೆ.

ಆಗಲೇ ಪ್ರಸ್ತಾಪಿಸಿದಂತೆ ಲೋಕಾಯುಕ್ತರ ಮುಂದೆ ಹಲವಾರು ಗಂಭೀರ ಪ್ರಕರಣಗಳಿವೆ, ಸವಾಲುಗಳಿವೆ. ಭೂಮಿ ಮತ್ತು ಗಣಿ ಹಗರಣಗಳಲ್ಲಿ ಹೆಸರಿಸಲಾದವರು ಸಾಮಾನ್ಯರೇನಲ್ಲ. ಸರ್ಕಾರವನ್ನೂ ಒಳಗೊಂಡಂತೆ ಎಲ್ಲವನ್ನೂ ನಿಯಂತ್ರಿಸುವ, ಅದಕ್ಕಾಗಿ ಬಳಸಿಕೊಳ್ಳುವ ಮಹಾ ಮಾಫಿಯಾ ಖೂಳರೇ. ನ್ಯಾ. ಪಾಟೀಲರ ಮೇಲೆ ಆರೋಪ ಹೊರಿಸಿರುವುದು ಆಕಸ್ಮಿಕವೂ ಇರಲಾರದು. ಆ ಸ್ಥಾನದಲ್ಲಿ ಕುಳಿತವರ ಆತ್ಮವಿಶ್ವಾಸವನ್ನೇ ಕುಗ್ಗಿಸಿಬಿಡುವ, ದಾಳಿ ಯಾಕಿರಬಾರದು? ಇಂತಹ ಆರೋಪ ಹೊತ್ತ ಲೋಕಾಯುಕ್ತರು ಬೇರೆ ಯಾವ ಪ್ರಕರಣದಲ್ಲಿ ನಿಷ್ಪುರವಾಗಿ ಕಾರ್ಯವೆಸಗಲು ಹೇಗೆ ಸಾಧ್ಯವಾದೀತು?

ಹೀಗಾಗಿ ಹುದ್ದೆ ತೆರವಾಗಿದೆ. ಹೊಸ ಲೋಕಾಯುಕ್ತರ ನೇಮಕ ಆಗಬೇಕು, ಅದನ್ನು ವಿಳಂಬಗೊಳಿಸುವಂತೆಯೇ ಇಲ್ಲ. ಆಯ್ಕೆಯೂ ಕಠಿಣವೇ. ಆಯ್ಕೆ ಯಾಗುವವರು ಖಂಡಿತಕ್ಕೂ ಕಳಂಕರಹಿತರಲೇಬೇಕು. ರಾಜ್ಯದಲ್ಲಿನ ಬಿಜೆಪಿ ಸರ್ಕಾರ ತನ್ನೆಲ್ಲಾ ಅಕ್ರಮಗಳನ್ನು ಮುಚ್ಚಿಹಾಕಿಕೊಳ್ಳಲು ಶತಾಯುಗತಾಯ ಪ್ರಯತ್ನಿಸುತ್ತಿದೆ. ಲೋಕಾಯುಕ್ತರನ್ನು ನೇಮಿಸುವ ಅಧಿಕಾರವಿರುವ ಸರ್ಕಾರ ಏನು ಮಾಡೀತು? ನ್ಯಾಯ-ನಿಷ್ಠುರವಾಗಿ ನಡೆದೀತೆ ಎಂಬ ಪ್ರಶ್ನೆ? ಹಾಗೆ ಬರುವವರು ಇಂತಹ ಆರೋಪಗಳಿಂದ ಮುಕ್ತಲಾದವರೇ? ಒಂದು ವೇಳೆ ಅಂತಹ ಆರೋಪಗಳು ನಂತರವಾದರೂ ಕೇಳಿ ಬಂದರೆ ಮತ್ತೆ ಅಸ್ಥಿರತೆ ಉಂಟಾಗದೇ ಇದ್ದೀತೆ? ಇದು ಬಿಜೆಪಿ ಸರ್ಕಾರಕ್ಕೆ ಕಾಲ ವಿಳಂಬಿಸಲು ವರದಾನವಾಗಬಹುದೇ? ಹೀಗೆ ಹಲವು ಪ್ರಶ್ನೆಗಳ ಸರಮಾಲೆ.

ಇದು ಒತ್ತಟ್ಟಿಗೆ ಇರಲಿ. ಈಗ ಖಾಲಿಯಾಗಿರುವ ಲೋಕಾಯುಕ್ತರ ಹುದ್ದೆಗೆ ನಿಷ್ಪಕ್ಷಪಾತವಾಗಿ, ನಿಷ್ಠುರರಾದವರ ನೇಮಕ ಕೂಡಲೇ ಆಗಲೇಬೇಕು ಎಂಬುದು ತುರ್ತು ಅಗತ್ಯ. ವಿಳಂಬಿಸುವ ಒಂದೊಂದು ಕ್ಷಣಗಳೂ ರಾಜ್ಯದ, ದೇಶದ ಜನತೆಗೆ ಅಪಾರ ಹಾನಿಯನ್ನು ತರುತ್ತವೆ. ಆ ಮಟ್ಟದಲ್ಲಿ ಸಂವಿಧಾನ ಕಾನೂನುಗಳನ್ನೇ ಅತಂತ್ರಗೊಳಿಸುತ್ತವೆ.

ಹೊಸ ಲೋಕಾಯುಕ್ತರು

ಈಗಂತೂ ನೇಮಕಗೊಳಿಸುವ ಲೋಕಾಯುಕ್ತರ ಸುತ್ತಲೇ ಎಲ್ಲರ ಕಣ್ಣು. ಆ ಮಟ್ಟಿಗೆ ಸಾರ್ವಜನಿಕ ಎಚ್ಚರವನ್ನೂ ಹಿಂದಿನ ಲೋಕಾಯುಕ್ತರು ಹಲವಾರು ಮಿತಿಗಳಿದ್ದಾಗಲೂ ನಡೆ-ನುಡಿಯ ಮೂಲಕ ಸೃಷ್ಟಿಸಿದ್ದಾರೆ. ಹೊಸ ಲೋಕಾಯುಕ್ತರನ್ನು ಕೊಪ್ಪಳದ ಉಪಚುನಾವಣೆ ಬಳಿಕ ನೇಮಿಸುವುದಾಗಿ ಮುಖ್ಯಮಂತ್ರಿ ಸದಾನಂದಗೌಡರು ಹೇಳಿದ್ದಾರೆ. ಅದನ್ನು ಕೂಡಲೇ ಮಾಡಬೇಕು. ಆದರೆ... 'ಮೋದಿಗೆ ಸಲಾಮು ಹಾಕಿ ವಾಪಸು ಬಂದ ಬಳಿಕ ರಾಜ್ಯವನ್ನು ಮೋದಿ ಮಾದರಿಯಲ್ಲಿಯೇ ಅಭಿವೃದ್ಧಿ ಮಾಡುವುದಾಗಿ ಇವರೂ ಸಹ ಘೋಷಿಸಿದ್ದಾರೆ. ಮೋದಿ ಮಾದರಿ ಯೆಂದರೆ ಸುಮಾರು ಎಂಟು ವರ್ಷಗಳು ಗುಜರಾತಿನ ಲೋಕಾಯುಕ್ತ ಸಂಸ್ಥೆಗೆ ಲೋಕಾಯುಕ್ತರನ್ನೇ ನೇಮಿಸದೇ ಕಾಲ ತಳ್ಳುತ್ತಾ ಬಂದದ್ದು ಮೋದಿಯ 'ಮೇಲಿರಿಮೆ'?!. ಇದು 'ಸದಾ ಆನಂದ'ರಿಗೆ ಮಾದರಿಯೇ? ಸೆಪ್ಟೆಂಬರ್ 25 ಕಳೆಯಬೇಕು. ಅಲ್ಲಿಯವರೆಗೂ ಇರಲಿ ಕಾದು ನೋಡುವ ಒಂದು ಅವಕಾಶ!

ಯಡಿಯೂರಪ್ಪನ ಫೈಲ್‌ಗೆ ಇನ್ನಷ್ಟು ಹಗರಣಗಳು

'ಅಭಿವೃದ್ಧಿಯ ಹರಿಕಾರ' ಯಡಿಯೂರಪ್ಪನವರಿಗೆ ಜಾಮೀನು ನೀಡುವ ಬಗ್ಗೆ ಅಕ್ಟೋಬರ್ 3 ರಂದು ಅಂತಿಮ ನಿರ್ಧಾರವನ್ನು ನ್ಯಾಯಾಲಯ ಪ್ರಕಟಿಸಲಿದೆ ಎಂಬುದು ಹೇಗೆ ನಿರ್ಧಾರಿತವೋ, ಹಾಗೆ ಅವರು ಜೈಲುವಾಸಿಗಳಾಗುವುದು ಅಷ್ಟೇ ನಿರೀಕ್ಷಿತ. ಯಡಿಯೂರಪ್ಪನವರು, ಅವರ ಕುಟುಂಬದ ಸದಸ್ಯರುಗಳು ನಡೆಸಿದ ಅವ್ಯವಹಾರ-ಅಕ್ರಮಗಳು ಎಷ್ಟು ಎಂದು ಲೆಕ್ಕ ಹಾಕುವುದೇ ಅಸಾಧ್ಯವೆಂಬತಾಗಿದೆ. ಭದ್ರಾ ಮೇಲ್ದಂಡೆ ಯೋಜನೆ ಅಕ್ರಮಗಳ ತನಿಖೆಯಲ್ಲಿ ಲೋಕಾಯುಕ್ತ ಪೋಲೀಸರು ಹೆಚ್ಚಿನ ಮಾಹಿತಿಗಾಗಿ ಅವರ ಮಗ, ಅಳಿಯನ ಕಛೇರಿಗಳ ಮೇಲೆ ಧಾಳಿ ಮಾಡಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಇದಕ್ಕೆ ಕುಮಾರಸ್ವಾಮಿಯೇ ಕಾರಣ ಎಂದು ಹೇಳುವ ಮೂಲಕ ನಗೆಪಾಟಲಿಗೂ ಈಡಾಗಿದ್ದಾರೆ. (ಅಥವಾ ಕೊಪ್ಪಳ ಚುನಾವಣೆಯಲ್ಲಿ ಲಿಂಗಾಯಿತರ ಸಿಂಪಥಿ ಪ್ರಯತ್ನವೇ ಇರಬಹುದು) ಇದೆಲ್ಲದಕ್ಕಿಂತ ಗಂಭೀರ ಸಂಗತಿಯೆಂದರೆ ಲೋಕಾಯುಕ್ತರು ಧಾಳಿ ಮಾಡುವುದು ತನಗೆ ಮೊದಲೇ ಗೊತ್ತಿತ್ತು' ಎಂದು ಬಹಿರಂಗವಾಗಿ ಹೇಳಿರುವುದು! ಅಂದರೆ ಈಗಲೂ ಮಾಜಿಗಳಿಗೆ ಲೋಕಾಯುಕ್ತ ಕಛೇರಿಯೊಂದಿಗೆ ಕೈಯಾಡಿಸಲು ಮುಕ್ತ ಅವಕಾಶವಿದೆಯೆಂದು ಅರ್ಥ. ಇದು ಲೋಕಾಯುಕ್ತದ ಪ್ರಾಮಾಣಿಕತೆ, ನೈತಿಕತೆಯೇ ಪ್ರಶ್ನಿಸುತ್ತದೆ. ಇದಕ್ಕೆ ಇಂಬುಕೊಡುವಂತೆ ಲೋಕಾಯುಕ್ತರ ಧಾಳಿಯ ನಂತರ ಏನೇನು ದಾಖಲೆಗಳು ಸಿಕ್ಕಿವೆ ಎಂಬ ವರದಿಯಿಲ್ಲವಾಗಿದೆ. ಸಾಧಾರಣ ಅಂತಹದ್ದನ್ನು ಪ್ರಕಟಿಸುವುದು ರೂಢಿ. ಗೌಪ್ಯವಾಗಿ ನಡೆಯುವ ಈ ದಾಳಿ ವಿಷಯ ಮಾಜಿ ಸಿ.ಎಂ.ಗೆ ಹೇಗೆ ಗೊತ್ತಾಯಿತು? ಗೊತ್ತಾದ ಬಳಿಕ ದಾಖಲೆಗಳು ಅಲ್ಲಿರುವುದು ಸಾಧ್ಯವೇ? ಆದ್ದರಿಂದ ಯಡಿಯೂರಪ್ಪನವರ ಮಾತನ್ನೇ ಆಧರಿಸಿ ಮಾಹಿತಿ ಸೋರಿಕೆಯಾದ ವಿಷಯ ತನಿಖೆಯಾಗಲೇಬೇಕು.

ಪುಟ 9 ರಿಂದ

ಡಾ॥ ಕಂಬಾರರಿಗೆ ಜ್ಞಾನಪೀಠ

ಸಹಾಯಕವಾಗುತ್ತದೆ. ಅದರಲ್ಲಿಯೂ ಜ್ಞಾನಪೀಠದ ಪ್ರಶಸ್ತಿ ವಿಜೇತರನ್ನು ಅವರಿಗೆ ಚೆನ್ನಾಗಿ ಅರಿವಿರುವ ವಿಷಯಗಳ ಬಗ್ಗೆ ಪ್ರತಿಕ್ರಿಯೆ ಬಯಸುವ ನಮ್ಮ ಮಾಧ್ಯಮ ಪತ್ರಿಕೆಗಳು ಅವರಿಗೆ ಏನೂ ಅರಿವಿರದ ವಿಷಯಗಳ ಬಗ್ಗೆಯೂ ಪ್ರತಿಕ್ರಿಯೆ ಪಡೆದು ಪ್ರಕಟಿಸುವ ಅಪಾಯವನ್ನು ನೋಡುತ್ತಿದ್ದೇವೆ. ಅನೇಕ ಓದುಗರು ಕಂಬಾರರ ಸಾಹಿತ್ಯದ ಗುಣಾಂಶಗಳ ಒಲವನ್ನು ಅವರ ಅಷ್ಟೇನೂ ಅರಿವಿರದ, ಅಥವಾ ಪ್ರತಿಗಾಮಿಯೇ ಆದ ವಿಚಾರಗಳಿಗೂ ಆವಾಹಿಸಿ ಅವುಗಳನ್ನು ಅಪ್ಪಿಕೊಳ್ಳುವ ಅಪಾಯವಿದೆ. ಜ್ಞಾನಪೀಠದಂತಹ ಪ್ರಶಸ್ತಿಗಳನ್ನು ಸ್ಥಾಪಿಸಿದ ಆಳುವ ವರ್ಗಗಳಿಗೆ ಇಂತಹ ಒಳ ಉದ್ದೇಶಗಳೂ ಇರುತ್ತವೆ ಎಂಬುದನ್ನು ಮರೆಯಬಾರದು.

ಕೊಪ್ಪಳ ಉಪಚುನಾವಣೆ

ಪುಟ 5 ರಿಂದ

ಬೇಕು ಎಂದು ಹಳ್ಳಿ-ಹಳ್ಳಿಗಳಲ್ಲಿ ಪಂಚಾಯತಿ ಕಟ್ಟೆ ನಡೆಯುತ್ತಿದೆ. ಪಕ್ಷಾಂತರಿ, ಸಂದರ್ಭ ಸಾಧಕರನ್ನು ಗೆಲ್ಲಿಸಬಾರದು ಕೂಡ. ಇಲ್ಲಿ ಬಿಜೆಪಿ ಗೆದ್ದರೆ ಅವರ ಸರ್ಕಾರದ ಎಲ್ಲಾ ಅಕ್ರಮ, ಹಗರಣಗಳನ್ನು ಜನ ಮಾಫಿ ಮಾಡಿ ಬೆಂಬಲಿಸುತ್ತಿದ್ದಾರೆಂದು ಸಾರಲು ಅವರು ಯತ್ನಿಸುತ್ತಿದ್ದಾರೆ. ಅದೇ ರೀತಿ ಯಾವ ಕಷ್ಟಕ್ಕೂ ಆಗದ ಕಾಂಗ್ರೆಸ್ ಪಕ್ಷವೂ ಸಹ ಬಿಜೆಪಿಗೆ ತಾನೇ ಪರ್ಯಾಯವೆಂದು ಬಿಂಬಿಸಿಕೊಳ್ಳಲು ಹವಣಿಸುತ್ತಿದೆ. ಈ ಚುನಾವಣೆ ಸ್ಥಳೀಯವಾಗಿಯೂ, ರಾಜ್ಯಮಟ್ಟದಲ್ಲಿಯೂ ರಾಜಕೀಯವಾಗಿ ಪರಿಣಾಮ ಬೀರುವುದರಿಂದ ಬಿಜೆಪಿ ಮತ್ತು ಕಾಂಗ್ರೆಸ್‌ಗಳನ್ನು ಸೋಲಿಸುವುದು ಒಂದು ಸಾಕಾರಾತ್ಮಕವಾದ ಸಂದೇಶ ರವಾನಿಸಲಿದೆ. ಇವುಗಳನ್ನು ಸೋಲಿಸಬಲ್ಲ ಜೆಡಿ(ಎಸ್) ಅನ್ನು ಗೆಲ್ಲುವುದು ಅಂತಹ ಒಂದು ಸಂದೇಶ ನೀಡಿದಂತಾಗುತ್ತದೆ. ಅದರತ್ತ ಎಲ್ಲಾ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳು ತಮ್ಮ ಶಕ್ತಿ ಕ್ರೋಢೀಕರಿಸಬೇಕು.

ಸಮಸ್ಯೆಗಳ ಸುಳಿಯಲ್ಲಿ...

ಪುಟ 7 ರಿಂದ

ಗೈರುಹಾಜರಾತಿ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಲು ಸಾಧ್ಯ ವಾಗುತ್ತದೆ. ಕಿರುಕುಳ ನೀಡುವ ಉದ್ದೇಶದಿಂದ ಮಾಡುವ ವರ್ಗಾವಣೆ ನಿಲ್ಲಬೇಕು. ಸಂಸ್ಥೆಯಲ್ಲಿ ಕಾರ್ಮಿಕರಿಗೆ ಹತ್ತು ಹಲವು ಕಿರುಕುಳ, ಮಿತಿ ಮೀರಿದ ಭ್ರಷ್ಟಾಚಾರ, ಶೋಷಣೆ, ಮುಂತಾದ ಅನ್ಯಾಯದ ಅಹವಾಲುಗಳನ್ನು ಹೇಳಿಕೊಳ್ಳುವ, ಪ್ರಜಾಪ್ರಭುತ್ವ ವಾತಾವರಣವೇ ಇಲ್ಲವಾಗಿದೆ. ಸಾರಿಗೆ ಸಂಸ್ಥೆಯ ನೌಕರರಿಗೆ 1996 ರಿಂದ ಪ್ರಜಾತಂತ್ರ ವ್ಯವಸ್ಥೆಗೆ ತಿಲಾಂಜಲಿ ನೀಡಲಾಗಿದೆ. ಕಾರ್ಮಿಕ ಸಂಘದ ಮಾನ್ಯತೆಗಾಗಿ 1992ರ ನಂತರ ಚುನಾವಣೆಯನ್ನು ನಡೆಸಿಲ್ಲ. ಸಂಸ್ಥೆಯಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ಕೂಡಲೇ ಆಡಳಿತ ವರ್ಗ ಕಾರ್ಮಿಕ ಸಂಘದ ಚುನಾವಣೆಯನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸಬೇಕು. ಈ ಎಲ್ಲಾ ಬೇಡಿಕೆಗಳ ಬಗೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್ ನೇತೃತ್ವದಲ್ಲಿ ಸೆಪ್ಟೆಂಬರ್ 29 ರಂದು ಪ್ರತಿಭಟನೆ ನಡೆಯಲಿದೆ.

ಇದು ನಿಮಗೆ ಗೊತ್ತೆ?

77% ಕೇಂದ್ರ ಮಂತ್ರಿಗಳು ಕೋಟ್ಯಾಧೀಶ್ವರರು

ಯುಪಿಎ-2 ಸರಕಾರದ ಮಂತ್ರಿಗಳ ಸರಾಸರಿ ಆಸ್ತಿ ಮೌಲ್ಯ ರೂ.10.3 ಕೋಟಿ. ಎರಡು ವರ್ಷಗಳ ಹಿಂದೆ ಇದು ಸುಮಾರು ಏಳೂವರೆ ಕೋಟಿ. ಅಂದರೆ ಎರಡು ವರ್ಷಗಳಲ್ಲಿ 35% ದಷ್ಟು ಹೆಚ್ಚಳ. ಹಣದುಬ್ಬರ ಎರಡಂಕಿ ತಲುಪಿದರೇನಂತೆ, ಅಹಾರ ವಸ್ತುಗಳ ಬೆಲೆಗಳು ಏರಿದರೇನಂತೆ, ಯುಪಿಎ-2 ಸರಕಾರ ಏನೂ ಮಾಡದಿರಲು ಇದೂ ಒಂದು ಕಾರಣವಾಗಿರಬಹುದೇ?

ಈಗ ಭಾರೀ ಕೈಗಾರಿಕೆಗಳ ಮಂತ್ರಿಯಾಗಿರುವ ಪ್ರಫುಲ್ ಪಟೇಲ್ 122 ಕೋಟಿರೂ.ಗಳೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ. ಎರಡು ವರ್ಷಗಳ ಹಿಂದೆ ಅದು 80 ಕೋಟಿ ರೂ. ಇತ್ತು. ಇದಕ್ಕೂ ಏರ್ ಇಂಡಿಯಾದ ನಷ್ಟ 46000 ಕೋಟಿ ರೂ. ಆಗಿರುವುದಕ್ಕೂ ಏನೂ ಸಂಬಂಧವಿರಲಿಕ್ಕಿಲ್ಲ. ಎರಡನೇ ಸ್ಥಾನ ಗಳಿಸಿರುವ ಡಿಎಂಕೆ ಯ ಜಗತ್ ರಕ್ಷಕನ್ ಆಸ್ತಿ ಎರಡು ವರ್ಷಗಳ ಹಿಂದೆ 5.9 ಕೋಟಿ ರೂ.ಇದ್ದದ್ದು ಈಗ 70 ಕೋಟಿ ರೂ. ಮೂರನೇ ಸ್ಥಾನದಲ್ಲಿರುವ ನಗರಾಭಿವೃದ್ಧಿ ಮಂತ್ರಿ ಕಮಲನಾಥ್ ಆಸ್ತಿ 14 ಕೋಟಿಯಿಂದ 41 ಕೋಟಿಗೇರಿದೆ.

ಜವಳಿ ರಾಜ್ಯ ಮಂತ್ರಿ ಪನಬಕ ಲಕ್ಷ್ಮಿ(ಕಾಂಗ್ರೆಸ್) ಆಸ್ತಿಯಲ್ಲಿ 828%, ತುಷಾರಭಾರತಿ ಚೌಧರಿ(ಸಾರಿಗೆ ರಾಜ್ಯಮಂತ್ರಿ)ಯ ಆಸ್ತಿಯಲ್ಲಿ 705% ಹೆಚ್ಚಳವಾಗಿದೆ.

ನಮ್ಮ ವೀರಪ್ಪ ಮೊಯಿಲಿ, ಎಸ್.ಎಂ.ಕೃಷ್ಣ ಸೇರಿದಂತೆ 15 ಮಂತ್ರಿಗಳ ಘೋಷಿತ ಆಸ್ತಿಮೌಲ್ಯದಲ್ಲಿ ಇಳಿಕೆಯೂ ಆಗಿದೆ. ಪ್ರಧಾನಮಂತ್ರಿಗಳ ಕಚೇರಿಯ ನಿರ್ದೇಶನದಂತೆ ನೀಡಿದ ಮಾಹಿತಿಗಳಿಂದ ಎಡಿಆರ್(ಪ್ರಜಾಪ್ರಭುತ್ವ ಸುಧಾರಣೆಗಳ ಸಂಘ) ಈ ಲೆಕ್ಕಾಚಾರ ಮಾಡಿದೆ. ಚುನಾವಣಾ ಆಯೋಗ ಕೇಳುವಂತೆ ಆದಾಯ ತೆರಿಗೆ ದಾಖಲೆ, ಆಸ್ತಿಗಳ ಪ್ರಸ್ತುತ ಮಾರುಕಟ್ಟೆ ಮೌಲ್ಯ ಮುಂತಾದವೂ ಈ ಮಾಹಿತಿಗಳಲ್ಲಿ ಇಲ್ಲ ಎಂದು ಈ ಸಂಘಟನೆಯ ವಕ್ತಾರರು ಹೇಳಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭೂ ಸ್ವಾಧೀನ: ಇನ್ನೂ ಆತಂಕದಲ್ಲಿರುವ ಅನ್ನದಾತರು

ಪೋಸ್ಕೋಗೆ ರೈತರ ಭೂಮಿ ಸ್ವಾಧೀನವಿಲ್ಲವೆಂದು ಸರ್ಕಾರ ಹೇಳಿದರೂ ನೆತ್ತಿಯ ಮೇಲೆ ತೂಗುಕತ್ತಿ ನೇತಾಡುತ್ತಿದೆ. ಉಡುಪಿಯಲ್ಲಿ ಡಿನೋಟಿಫೈ ಪ್ರಕಟಣೆ ಹೊರಬಂದಂತೆ ಇಲ್ಯಾಕೆ ಆಗಲಿಲ್ಲ? ಇದರರ್ಥವೇನು?

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಳ್ಳಿಗುಡಿ, ಜಂತ್ಲಿಶಿರೂರ, ಮೇವುಂಡಿ ಗ್ರಾಮಗಳ ರೈತರ ಭೂಮಿಯನ್ನು ಕೈಗಾರಿಕೆಗಳಿಗಾಗಿ ಸ್ವಾಧೀನ ಪಡಿಸಿಕೊಳ್ಳಲು ಮುಂದಾದ ಕರ್ನಾಟಕ ಸರಕಾರ ವಿವಿಧ ಸಂಘಟನೆಗಳ, ಮಠಾಧೀಶರ ವ್ಯಾಪಕ ಬೆಂಬಲದೊಂದಿಗೆ ನಡೆದ ರೈತರ ತೀವ್ರ ಪ್ರತಿಭಟನೆಯಿಂದಾಗಿ ಭೂ ಸ್ವಾಧೀನ ನಿಲ್ಲಿಸುವ ಬಗ್ಗೆ ಜುಲೈ–13, 2011 ರಂದು ಅಂದಿನ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಲಿಖಿತ ಭರವಸೆ ನೀಡಿ ಪ್ರತಿಭಟನೆಗೆ ಅಂತ್ಯ ಹಾಡಿದ್ದರು. ಸದ್ಯದ ಮುಖ್ಯಮಂತ್ರಿಗಳು ಕೂಡಾ ಪೋಸ್ಕೊಗೆ ಭೂಮಿ ಇಲ್ಲ ಎಂಬ ಮಾತನ್ನು ಪುನರುಚ್ಚರಿಸಿದ್ದಾರೆ.

ಭೂ ಸ್ವಾಧೀನ ವಿರೋಧಿ ಹೋರಾಟದ ಸಂದರ್ಭದಲ್ಲಿ ತೋಂಟದ ಶ್ರೀಗಳು ಸೇರಿದಂತೆ



ಸಂಗ್ರಾಮ ಸಮಿತಿ ಸದಸ್ಯರು ಒಂದು ಮಾತನ್ನು ಸ್ಪಷ್ಟ ಪಡಿಸಿದ್ದರು. ಕೈಗಾರಿಕೆಗಳ ಸ್ಥಾಪನೆಗೆ ನಮ್ಮ ವಿರೋಧ ಇಲ್ಲ. "ಈ ನೆಲಕ್ಕೆ ಅನುಗುಣವಾದ ಕೃಷಿ ಆಧಾರಿತ ಕೈಗಾರಿಕೆಗಳು ಬಂದರೆ ಒಳ್ಳೆಯದು". ಈ ಮಾತನ್ನೇ ಆಧಾರವಾಗಿ ಇಟ್ಟುಕೊಂಡು ಸರಕಾರ ಹಳ್ಳಿಗುಡಿ ಗ್ರಾಮದ 3389 ಎಕರೆ ಜಮೀನು ಹೊರತುಪಡಿಸಿ ಜಂತ್ಲಿಶಿರೂರ, ಮೇವುಂಡಿ, ಪೇಠಾಲೂರ ಗ್ರಾಮಗಳ 3800 ಎಕರೆ ಭೂಮಿಯನ್ನು ಕೃಷಿ ಆಧಾರಿತ ಕೈಗಾರಿಕೆಗಾಗಿ ಭೂ ಬ್ಯಾಂಕಿಗೆ ತೆಗೆದುಕೊಳ್ಳಲು ಯೋಚಿಸಿದೆ. ಗದಗ ಕೃಷಿ ಇಲಾಖೆಗೆ ಒಂದು ಪತ್ರ ಬರೆದು ಈ ಗ್ರಾಮಗಳ ರೈತರ ಅಹವಾಲು ಪಡೆಯಲು ತಿಳಿಸಿತು. ಇದು ರೈತರ ಆತಂಕಕ್ಕೆ ಕಾರಣವಾಗಿದೆ. ವಿಶ್ವ ಕೃಷಿ ಬಂಡವಾಳಗಾರರ ಸಮ್ಮೇಳನದ ಹಿನ್ನಲೆಯಲ್ಲಿ ಬಂಡವಾಳಗಾರರಿಗೆ ನಮ್ಮ ಭೂ ಬ್ಯಾಂಕಿನಲ್ಲಿ ನಿಮಗಾಗಿ ಇಷ್ಟು ಭೂಮಿ ಇದೇ ಎಂದು ತೋರಿಸಿಕೊಳ್ಳುವ ಇರಾದೆ ಸರಕಾರಕ್ಕಿದೆ ಎಂದು ತೋರುತ್ತದೆ.

ಈ ನಡುವೆ ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿ ಶೇ 80% ರಷ್ಟು ರೈತರು ಭೂಮಿ ಕೊಡಲು ಸಿದ್ದರಿದ್ದಾರೆ, ಅಗಸ್ಟ್ 23 ರಂದು ತೋಂಟದ ಶ್ರೀಗಳೊಂದಿಗೆ ಮಾತುಕತೆ ನಡೆಸುವುದಾಗಿ ಪತ್ರಿಕಾ ಹೇಳಿಕೆ ನೀಡಿದರು. ಹೀಗಾಗಿ ಭೂಸ್ವಾಧೀನದ ತೂಗುಗತ್ತಿ ರೈತರ ತಲೆಯ ಮೇಲೆ ನೇತಾಡುವಂತಾಯಿತು. ಆದರೇ ಅಂದು ಸಭೆ ನಡೆಯಲಿಲ್ಲ.

ಸರಕಾರ ಈಗಲಾದರೂ ಪಾರದರ್ಶಕತೆ ತೋರಬೇಕಾಗಿದೆ. ಈ ಪ್ರದೇಶಕ್ಕೆ ನಿಜವಾಗಿ ಬರುತ್ತಿರುವ ಕೃಷಿ ಆಧಾರಿತ ಕೈಗಾರಿಕೆಗಳು ಯಾವವು ? ಕೈಗಾರಿಕೆಗೆ ಬೇಕಾಗುವ ಭೂಮಿ ಎಷ್ಟು ?. ರೈತರಿಗೆ ಈ ಮಾಹಿತಿ ತಿಳಿಯುವ ಹಕ್ಕಿದೆ. ಸರಕಾರ ಪೋಸ್ಕೊಗೆ ಭೂಮಿ ಕೊಡುವುದಿಲ್ಲ ಎಂದು ಘೋಷಿಸಿದ ಮೇಲೆ ನಂತರ ನಡೆಯುವ ಪ್ರಕ್ರಿಯೆ ಎಂದರೆ 'ನೋಟಿಫೈ' ಆದ ಭೂಮಿಯನ್ನು 'ಡಿನೋಟಿಫೈ' ಮಾಡುವದೇ ಆಗಿದೆ. ಆದರೆ ಇಲ್ಲಿವರೆಗೆ ಆ ಕೆಲಸವಾಗಿಲ್ಲ. ಮಂಗಳೂರಲ್ಲಿ ವಿಶೇಷ ಆರ್ಥಿಕ ವಲಯಕ್ಕಾಗಿ 2035 ಎಕರೆ ಭೂಮಿ ಸ್ವಾಧೀನಕ್ಕೆ ಸುಮಾರು ನಾಲ್ಕು ವರ್ಷಗಳ ಹಿಂದೆ ನೋಟಿಫೈ ಮಾಡಲಾಗಿತ್ತು. ಅದರಂತೆ ತೀರಾ ಇತ್ತೀಚಿಗೆ ಉಡುಪಿಯ ಪೇಜಾವರ ಶ್ರೀಗಳು ಉಪವಾಸ ಸತ್ಯಾಗ್ರಹದ ಬೆದರಿಕೆ ಹಾಕಿದ ಕೇವಲ ಎರಡೇ ದಿನಗಳಲ್ಲಿ ಡಿನೋಟಿಫೈ ಆಯಿತು. ಅದೇ ಮಾನದಂಡವನ್ನು ಇಲ್ಲಿ ಯಾಕೇ ಬಳಸಲಾಗುತ್ತಿಲ್ಲ ಎಂಬುದು ರೈತರ ಪ್ರಶ್ನೆ. ಆದ್ದರಿಂದ ಈ ಕೂಡಲೇ ಡಿನೋಟಿಫೈ ಮಾಡಿದ ಬಗ್ಗೆ ಸರಕಾರ ಗೆಜೆಟ್‌ನಲ್ಲಿ ಪ್ರಕಟಿಸಬೇಕೆಂದು ರೈತರು ಆಗ್ರಹಿಸುತ್ತಿದ್ದಾರೆ.

– ಬಿ.ಎಸ್.ಸೊಪ್ಪಿನ

ಬಿಜೆಪಿ ದರ್ಬಾರ್

ಪುಟ 12 ರಿಂದ

ವರ್ಗಾವಣೆಯಾದ ಶಿಕ್ಷಕರಲ್ಲಿ ಈಗ ಸರ್ಕಾರ ನೂರ ಒಂದು ಜನರನ್ನು ವಾಪಸ್ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಆದೇಶನೀಡಿದೆ. ಯಾಕೆ ? ಯಾಕೆಂದರೆ ವರ್ಗಾವಣೆಯಾದ ಶಿಕ್ಷಕರ ಪ್ರಮಾಣಶೇ. ಒಂದರ ಮಿತಿಯನ್ನು ದಾಟಿದೆಯಂತೆ.

ವರ್ಗಾವಣೆಯಾಗಿ ಎರಡು ತಿಂಗಳ ದಾಟಿದೆ. ಶಿಕ್ಷಕರು ಹೊಸ ಜಾಗಗಳಲ್ಲಿ ಮನೆ ಮಾಡಿಕೊಡಿದ್ದಾರೆ. ಮಕ್ಕಳಿಗೆ ಪಾಠಗಳನ್ನು ಆರಂಭಿಸಿದ್ದಾರೆ. ಆದರೆ ಪಾಠಗಳಿನ್ನೂ ಮುಗಿದಿಲ್ಲ. ಈ ಹಂತದಲ್ಲಿ ಅವರು ವಾಪಸ್ ಬರಬೇಕೆಂದರೆ ಅವರ ಪಾಡೇನು? ಅವರ ಕುಟುಂಬ ವರ್ಗದವರ ಪಾಡೇನು? ವರ್ಗಾವಣೆಗೆ ತಕ್ಕಂತೆ ಮಕ್ಕಳ ಶಿಕ್ಷಣವನ್ನು ಯೋಜಿಸಿ ಕೊಂಡವರ ಗತಿಯೇನು? ಈ ಶಿಕ್ಷಕರು ಹೋದ ಶಾಲೆಯ ಮಕ್ಕಳ ಪಾಡೇನು ? ಇದನ್ನೆಲ್ಲ ಯಾರು ಕೇಳಬೇಕು ?

ಪೇರಿ ಕಿತ್ತ ಕಾಗೇರಿ

ಹಾಂ ! ನ್ಯಾಯವಾಗಿ ನೋಡಿದರೆ ಇದನ್ನೆಲ್ಲ ನೋಡಿ, ಕೇಳಿ ಸಮಸ್ಯೆ ಬರದಂತೆ ಗಮನವಹಿಸ ಬೇಕಾಗಿದ್ದವರು, ಈಗ ಸಮಸ್ಯೆ ಬಗೆಹರಿಸ ಬೇಕಾದವರು ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರು. ಹೌದು ಅವರೇನು ಮಾಡುತ್ತಿದ್ದಾರೆ ಈಗ ? ಪಾಪ ಶಿಕ್ಷಕರ ಸಮಸ್ಯೆ ಬಗೆ ಹರಿಸುವ, ಅವರ ಕಷ್ಟ ಸುಖ ಕೇಳುವ ಕೆಲಸದಲ್ಲಿಯೇ ಅವರು ನಿರತ ರಾಗಿದ್ದಾರೆ, ಅದರಲ್ಲೇ ತಲ್ಲೀನರಾಗಿದ್ದಾರೆ.

ಎಲ್ಲಿ ಅಂದಿರಾ ? ಅದೇ ಬಹಳ ಮುಖ್ಯ ವಾದ ಪ್ರಶ್ನೆ.

ಕೊಪ್ಪಳ ವಿಧಾನ ಸಭಾ ಕ್ಷೇತ್ರದಲ್ಲಿ ಈಗ ಆಪರೇಷನ್ ಕಮಲದ ದೆಸೆಯಿಂದ ಉಪ ಚುನಾವಣೆ ಬಂದಿದೆಯಲ್ಲವೇ ? ವ್ಯಾಪ್ತಿಯಲ್ಲಿ ಅವರು ಶಿಕ್ಷಕರ ಸಭೆ ನಡೆಸಿ ದುಃಖ ದುಮ್ಮಾನ ಕೇಳುವ 'ಕರ್ತವ್ಯ'ದಲ್ಲಿ ನಿರತರಾಗಿದ್ದಾರೆ.

ಅವರು ಕ್ಷೇತ್ರದಲ್ಲಿ ಈ ಸಂಬಂಧವಾಗಿ ಶಿಕ್ಷಕರ ಸಭೆ ಕರೆದು ಯಾವುದೋ ಮನೆ ಯೊಂದರಲ್ಲಿ ಯಾವುದೇ 'ಗದ್ದಲ ಮಾಡದೆ' ಗಹನ ಚರ್ಚೆ ನಡೆಸುತ್ತಿದ್ದರೆ...ಅಕ್ಕ ಪಕ್ಕದ ಮನೆಯವರೆಲ್ಲ ಸೇರಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ...ಉಲ್ಲಂಘನೆ ಅಂತ ಬೊಬ್ಬೆ ಹೊಡೆದು ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸುವುದಾ ? ಈ ಚುನಾವಣಾಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಗೂ ಬುದ್ದಿ ಇಲ್ಲ. ಏನೋ ಸಚಿವರು 'ಕರ್ತವ್ಯ ನಿರತ'ರಾಗಿದ್ದಾರೆ ಅಂತ ಸುಮ್ಮನಿರದೇ ದೂರಿನ ಪರಿಶೀಲನೆಗೆಂದು ಹೊರಟೇ ಬಿಡುವುದಾ.... ತಗೋ ಪಾಪ ನಮ್ಮ ಕಾಗೇರಿಯವರು ಜಿಲ್ಲಾಧಿಕಾರಿಗಳು ಬರುವ ಸುದ್ದಿ ಕೇಳಿ ಸದ್ದಿಲ್ಲದೇ ಸಭೆ ರದ್ದು ಮಾಡಿ ಪೇರಿ ಕೀಳುವುದಾ ? ಏನು ಪಜೀತಿ ಮಾರಾಯರೆ, ಈ ಜನ ಒಂದು ಕಡೆ ಕೂತು ಶಿಕ್ಷಕರ ಸಮಸ್ಯೆ ಬಗೆಹರಿಸುವುದಕ್ಕೂ ಬಿಡುವುದಿಲ್ಲವಲ್ಲ...ಎಂಥದಿದು ಉಪದ್ರವ.

*

ಯುಪಿಎ ದರ್ಬಾರ್ ....

ಪುಟ 13 ರಿಂದ

ಪ್ರಧಾನ ಮಂತ್ರಿಗಳಿಗೆ ಕಳಿಸಿದ ರಹಸ್ಯ ಟಿಪ್ಪಣಿಯಲ್ಲಿ 2003ರಲ್ಲಿ ನಿಗದಿ ಮಾಡಿದ್ದ ಪ್ರವೇಶ ಶುಲ್ಕವನ್ನು ಹೆಚ್ಚಿಸಬೇಕು ಮತ್ತು ಮುಂದಿನ ತರಂಗಾಂತರ ಹಂಚಿಕೆಯನ್ನು ಹರಾಜಿನ ಮೂಲಕ ಮಾಡಬೇಕು ಎಂದು ತನ್ನ ಇಲಾಖೆಯ ಶಿಫಾರಸನ್ನು ತಿಳಿಸಿದ್ದರಂತೆ. ಆದರೆ ಜನವರಿ 30ರಂದು ದೂರಸಂಪರ್ಕ ಮಂತ್ರಿಗಳೊಂದಿಗೆ ಸಭೆ ನಡೆಸಿದ ಅವರು ತಾನು ಸದ್ಯಕ್ಕೆ ಇಂತಹ ಬದಲಾವಣೆ ಕೇಳುವುದಿಲ್ಲ ಎಂದರಂತೆ. ಆದರೂ ಫ್ರಬ್ರುವರಿ 2008 ರಲ್ಲಿ, ತರಂಗಾಂತರ ಹಂಚಿಕೆಯನ್ನು ಒಪ್ಪಿಕೊಂಡ ಮೇಲೂ ಈ ಹಂಚಿಕೆಯನ್ನು ರದ್ದು ಮಾಡಿ ಹರಾಜು ಪ್ರಕ್ರಿಯೆ ಆರಂಭಿಸಬಹುದು ಎಂದು ಆಗಿನ ಹಣಕಾಸು ಇಲಾಖೆಯ ಕಾರ್ಯದರ್ಶಿಗಳ ಟಿಪ್ಪಣಿ ಹೇಳಿತ್ತಂತೆ. ಅಂದರೆ ಹಣಕಾಸು ಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಕಳಿಸಿದ ತಮ್ಮ ಶಿಫಾರಸುಗಳಿಗೆ ಬದ್ಧರಾಗಿರುತ್ತಿದ್ದರೆ ಈ ಹಂಚಿಕೆಯನ್ನು ರದ್ದು ಮಾಡಬಹುದಿತ್ತು ಎಂದು ಈ ಮಾರ್ಚ್ 2011 ಟಿಪ್ಪಣಿಯಲ್ಲಿ ಹೇಳಲಾಗಿದೆ ಎಂದು ವರದಿಯಾಗಿದೆ. ಹಣಕಾಸು ಇಲಾಖೆಯ ಉಪನಿರ್ದೇಶಕ ಪಿ ಜಿ ಎಸ್ ರಾವ್ ಪ್ರಧಾನಮಂತ್ರಿಗಳ ಕಚೇರಿಯ ಜಂಟಿ ಕಾರ್ಯದರ್ಶಿ ವಿನಿ ಮಹಾಜನ್ ಅವರಿಗೆ ಕಳಿಸಿರುವ ಈ ಟಿಪ್ಪಣಿಯನ್ನು ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯವರು ಸ್ವತಃ 11 ಪುಟಗಳ ದಸ್ತಾವೇಜನ್ನು ಪರೀಕ್ಷಿಸಿ ಮಂಜೂರು ಮಾಡಿದ್ದಾರೆ ಎಂದೂ ಟಿಪ್ಪಣಿಯಲ್ಲಿ ಹೇಳಲಾಗಿದೆಯಂತೆ. ಪ್ರಣಬ್ ಮುಖರ್ಜಿ ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಆದರೆ ಮಾಹಿತಿ ಹಕ್ಕು ಭಾರತೀಯ ಜನತೆಗೆ ಬಹಳಷ್ಟು ಅಧಿಕಾರ ನೀಡಿದೆ ಎನ್ನುತ್ತ ಇದೇ ಮಾಹಿತಿಯ ಬಗ್ಗೆ ಸಂಕೇತ ನಿಡಿದರು ಎಂದು ವರದಿಯಾಗಿದೆ.


ಈ ಟಿಪ್ಪಣಿ ಪಿ.ಚಿದಂಬರಂ ಅವರು 2ಜಿ ತರಂಗಾಂತರ ಲೈಸೆನ್ಸ್ ಗಳನ್ನು ಮಂಜೂರು ಮಾಡಿದ್ದರು ಎಂದು ಅಧಿಕಾರಿಕವಾಗಿ ತೋರಿಸುತ್ತದೆಯಾದ್ದರಿಂದ ಈ ಹಗರಣದಲ್ಲಿ ಅವರ ಪಾತ್ರದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಈ ಟಿಪ್ಪಣಿಯ ಸುದ್ದಿ ಬರುವ ಹಿಂದಿನ ದಿನ ಯುಪಿಎ–2 ಸರಕಾರದ ವಕೀಲರು ನ್ಯಾಯಾಲಯದಲ್ಲಿ ಇಂತಹ ತನಿಖೆಯನ್ನು ವಿರೋಧಿಸಿದ್ದರು. ನ್ಯಾಯಾಲಯ ತರಂಗಾಂತರ ಹಂಚಿಕೆಯಲ್ಲಿ ಆಗಿರುವ ನಷ್ಟದ ಅಂದಾಜಿನಲ್ಲಿ ಸಿಎಜಿ ಮತ್ತು ಸಿಬಿಐ ನಡುವೆ ವ್ಯತ್ಯಾಸ ಏಕೆ ಎಂದು ಪ್ರಶ್ನಿಸುತ್ತ ನಷ್ಟದ ಅಂದಾಜು ಲೆಕ್ಕ ಹಾಕಲು ಸಾಧ್ಯವಿಲ್ಲ ಎಂಬ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ ಅಭಿಪ್ರಾಯ ಆಶ್ಚರ್ಯಕರ ಎಂದಿತ್ತು.

JANASHAKTHI KANNADA VARA PATRIKE OCT. 02, 2011 Price : Rs. 5/-
RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಭೂಕಂಪನ ಮುನ್ನೆಚ್ಚರಿಕೆ ತಂತ್ರಜ್ಞಾನ ವ್ಯವಸ್ಥೆ

ಇತ್ತೀಚೆಗೆ ಸಿಕ್ಕಿಂ ರಾಜ್ಯದಲ್ಲಿ ಸಂಭವಿಸಿರುವ 6.8 ಮಟ್ಟದ ತೀವ್ರ ಭೂಕಂಪನದಿಂದಾಗಿ ಅಲ್ಲಿಯ ಗಾಂಗ್‌ಟಕ್ ಮತ್ತು ಚುಂಗ್ ತಂಗ್ ಪ್ರದೇಶಗಳಲ್ಲಿ 120ಕ್ಕೂ ಹೆಚ್ಚು ಜನ ಮೃತರಾಗಿದ್ದು, ಸಾವಿರಾರು ಜನ ಗಾಯಾಳುಗಳಾಗಿದ್ದು, ಮನೆ ಮಾಡುಗಳನ್ನು ಕಳೆದುಕೊಂಡಿದ್ದಾರೆ. ಅಲ್ಲಿಯ ತೀಸ್ತಾ ಅಣೆಕಟ್ಟು ಕೂಡ ಜಖಂಗೊಂಡಿದೆ ಎನ್ನಲಾಗುತ್ತಿದೆ. ಇದರಿಂದಾಗಿ ಆ ರಾಜ್ಯದಲ್ಲಿ ಸುಮಾರು 1.0 ಲಕ್ಷ ಕೋಟಿಗೂ ಹೆಚ್ಚು ಆಸ್ತಿಪಾಸ್ತಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಭೂಕಂಪನ ಸಂಭವಿಸುವ ಮುನ್ನವೇ ಸಂದೇಶ ನೀಡುವ ಮುನ್ನೆಚ್ಚರಿಕೆ ತಂತ್ರಜ್ಞಾನ ವ್ಯವಸ್ಥೆ ಅಳವಡಿಸುವ ಕುರಿತು ಮತ್ತೊಮ್ಮೆ ಚರ್ಚೆ ನಡೆಯುತ್ತಿದೆ.



ಭೂಕಂಪನ ಮತ್ತು ಸುನಾಮಿ:

ಭೂಗರ್ಭದ ಬೃಹತ್ ಭಾಗಗಳ ದೊಡ್ಡ ಪದರುಗಳು ಪ್ಲೇಟುಗಳಂತೆ ಒಂದರ ಮೇಲೊಂದು ಜೋಡಿಸಿಕೊಂಡಂತಿದ್ದು, ಅವುಗಳ ಚಲನೆಯಿಂದ ಶಕ್ತಿ ಬಿಡುಗಡೆಯಾಗುತ್ತದೆ. ಶಕ್ತಿ ಬಿಡುಗಡೆಯಿಂದ ಸಂಭವಿಸುವ ಪರಿಣಾಮವೇ ಭೂಕಂಪನ. ಈ ಭೂಕಂಪನಗಳು ಕೇಂದ್ರ ಸ್ಥಾನವೊಂದನ್ನು ಹೊಂದಿದ್ದು, ತನ್ನ ಸುತ್ತಲೂ ವೃತ್ತಾಕಾರದಲ್ಲಿ ಅಲೆಗಳೋಪಾದಿಯಲ್ಲಿ ಕಂಪನಗಳ ಮೂಲಕ ಶಕ್ತಿ ರವಾನಿಸುತ್ತವೆ. ಇದರಿಂದ ಭೂಮಿಯ ಮೈಲ್ಮೈ ಕಂಪಿಸುತ್ತದೆ. ಕೇಂದ್ರ ಸ್ಥಾನದಲ್ಲಿ ಕಂಪನ ಶಕ್ತಿ ಪ್ರಬಲವಾಗಿರುತ್ತದೆ. ಯಾವ ಭೂಕಂಪನಗಳು ತಮ್ಮ ಕೇಂದ್ರವನ್ನು ಸಾಗರಗರ್ಭದಲ್ಲಿ ಹೊಂದಿ ಜರುಗುತ್ತವೋ ಅವುಗಳು ಬೃಹತ್ ಪ್ರಮಾಣದಲ್ಲಿ ಸಂಭವಿಸಿದಾಗ ಸುನಾಮಿಯ ಅಲೆಗಳು ಬಡಿದೇಳುತ್ತವೆ.

ಭೂಕಂಪನಗಳು ಸಂಭವಿಸಿರುವ ಮತ್ತು ಸಂಭವಿಸುವ ಸಾಧ್ಯತೆಯಿರುವ ಆಧಾರದ ಮೇಲೆ ಭೂಪ್ರದೇಶವನ್ನು ಅತಿ ಹೆಚ್ಚು ಭೂಕಂಪನಗೊಳ್ಳುವ, ಹೆಚ್ಚು ಭೂಕಂಪನಗೊಳ್ಳುವ, ಸಾಧಾರಣ ಮತ್ತು ಅತಿ ಕಡಿಮೆ ಭೂಕಂಪನಗೊಳ್ಳುವ ಪ್ರದೇಶವೆಂದು ವಿಂಗಡಿಸಲಾಗಿದೆ.

ವಿವಿಧ ದೇಶಗಳಲ್ಲಿ ಮುನ್ನೆಚ್ಚರಿಕೆ ವ್ಯವಸ್ಥೆ:



ಸುನಾಮಿ ಉಂಟಾದ ನಂತರ ಭಾರತ ಇದೀಗಷ್ಟೆ ಭೂಕಂಪನ ಮುನ್ನೆಚ್ಚರಿಕೆ ವ್ಯವಸ್ಥೆ ಅಭಿವೃದ್ಧಿಪಡಿಸಲು ಕ್ರಮಕೈಗೊಂಡಿದೆ. ಅಂಡಮಾನ್ ದ್ವೀಪಗಳು, ಹಿಮಾಚಲ ಪ್ರದೇಶ, ದೆಹಲಿ, ಇನ್ನು ಮುಂತಾದ ಭೂಕಂಪನ ಪೀಡಿತ ಪ್ರದೇಶಗಳಲ್ಲಿ ಭೂಕಂಪನ ವೀಕ್ಷಣಾ ಕೇಂದ್ರಗಳನ್ನು ತಂತ್ರಜ್ಞಾನ ಅಳವಡಿಸಿ ಬಲಗೊಳಿಸಿದ್ದು, ಮಾಹಿತಿ ದತ್ತಾಂಶ ಕಲೆಹಾಕಲಾಗುತ್ತಿದೆ. ಆದರೆ ಭೂಕಂಪನ ಮುನ್ನೆಚ್ಚರಿಕೆ ವ್ಯವಸ್ಥೆ ಅಭಿವೃದ್ಧಿಪಡಿಸಲು ಕನಿಷ್ಟ ಹತ್ತು ವರ್ಷಗಳ ಮಾಹಿತಿ ಅವಶ್ಯವಿದೆ.

ಜಪಾನ್ ದೇಶದ ಭೂಭಾಗ ಚಾರಿತ್ರಿಕವಾಗಿ ತೀವ್ರ ಭೂಕಂಪನಕ್ಕೆ ಆಗಾಗ್ಗೆ ಸಿಲುಕುವ ಪ್ರವೃತ್ತಿ ಹೊಂದಿದೆ. ಇದಕ್ಕೆ ಅಲ್ಲಿಯ ಭೌಗೋಳಿಕ ಸಂರಚನೆಯೇ ಕಾರಣ. ಅಲ್ಲಿಯ ತಜ್ಞರು ಭೂಕಂಪನ ಉಂಟಾಗುವ ಮೊದಲೇ ಅದನ್ನು ತಿಳಿದುಕೊಂಡು ಜನರು ಬದುಕುಳಿಯಲು ನೆರವಾಗಲು ಹಿಂದಿನಿಂದಲೂ ಭೂಕಂಪನ ಎಚ್ಚರಿಕೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ಭೂಕಂಪನ ಮುನ್ನೆಚ್ಚರಿಕೆ ವ್ಯವಸ್ಥೆ ಇನ್ನೂ ನಿಖರವಾಗಿ ಸಂದೇಶ ನೀಡುವಷ್ಟು ಅಭಿವೃದ್ಧಿಯಾಗದಿದ್ದರೂ, ಈ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಿರುವ ಮುನ್ನೆಚ್ಚರಿಕೆ ತಂತ್ರಜ್ಞಾನ ಹಲವು ಸಲ ನೆರವಿಗೆ ಬಂದಿದೆ.



1960ರಲ್ಲಿ ಜಪಾನ್ ರಾಷ್ಟ್ರೀಯ ರೈಲ್ವೆಯು ಹೈ-ಸ್ಪೀಡ್ ಬುಲೆಟ್ ರೈಲನ್ನು ಬಳಕೆಗೆ ತರುವ ಸಂದರ್ಭದಲ್ಲಿ, ಅಲ್ಲಿನ ಭೂಕಂಪನದ ಕುರಿತು ಮುಂಚೆಯೇ ತಿಳಿದುಕೊಳ್ಳಲು ಸಹಾಯಕವಾಗುವಂತೆ ರೈಲ್ವೆ ಹಳಿಯ ಉದ್ದಕ್ಕೂ ಅಲ್ಲಲ್ಲಿ ಸಿಸ್ಮೋಮೀಟರ್‌ಗಳನ್ನು ಅಳವಡಿಸಿದರು. ಈ ಸಿಸ್ಮೋಮೀಟರ್‌ಗಳ ಕೆಲಸವೇನೆಂದರೆ, ಭೂಮಟ್ಟದ ವೇಗೋತ್ಕರ್ಷವು ಒಂದು ಅಪಾಯಕಾರಿ ಮಟ್ಟವನ್ನು ಮೀರಿದಾಗ ಅದು ತಕ್ಷಣವೇ ರೈಲು ಚಾಲಕರಿಗೆ ಎಚ್ಚರಿಕೆ ಸಂದೇಶವನ್ನು ರವಾನಿಸುತ್ತಿತ್ತು. ಈ ಸಂದೇಶ ಪಡೆದ ಚಾಲಕರು ರೈಲಿನ ವೇಗವನ್ನು ಕಡಿಮೆಗೊಳಿಸಿ ರೈಲನ್ನು ಸ್ಥಗಿತಗೊಳಿಸಿ ಜನರನ್ನು ಸುರಕ್ಷಿತ ಸ್ಥಳಕ್ಕೆ ಕಳುಹಿಸುತ್ತಿದ್ದರು. 1970ರ ದಶಕದಲ್ಲಿ ಇದು ಇನ್ನಷ್ಟು ಅಭಿವೃದ್ಧಿಗೊಂಡು, ಸಿಸ್ಮೋಮೀಟರ್‌ನಿಂದ ಸಂದೇಶ ರವಾನೆಯಾಗಿ ನೇರವಾಗಿ ರೈಲುಗಳ ಸ್ವಯಂಚಾಲಿತ ಬ್ರೇಕುಗಳಿಗೆ ತಲುಪಿ ತಂತಾನೇ ರೈಲುಗಳು ನಿಲಗಡೆಯಾಗುವ ಹಂತ ತಲುಪಿತು. ನಂತರದಲ್ಲಿ ಭೂಕಂಪನ ಮುನ್ನೆಚ್ಚರಿಕೆ ವ್ಯವಸ್ಥೆ ಇನ್ನಷ್ಟು ಅಭಿವೃದ್ಧಿಗೊಂಡು ಭೂಕಂಪನ ಆರಂಭಗೊಂಡು ಬೃಹತ್ ಕಂಪನ ಹೊರಡಿಸುವ ಹಂತಕ್ಕೆ ತಲುಪುವ ಸಮಯವನ್ನು ವಿಂಗಡಿಸಿ ಪ್ರಾಥಮಿಕ ಕಂಪನ ಅಲೆಗಳು ಮತ್ತು ವಿನಾಶಕಾರಿ ಅಲೆಗಳು ಎಂದು ವಿಭಜಿಸಲಾಯಿತು. ಇದರಿಂದಾಗಿ ತಕ್ಷಣವೇ ಪ್ರಾಥಮಿಕ ಕಂಪನ ಅಲೆಗಳು ಆರಂಭವಾಗುತ್ತಿದ್ದಂತೆಯೇ ದೇಶದ ಎಲ್ಲ ಭೂಕಂಪನ ಮಾಪನ ಕೇಂದ್ರಗಳು ಇದನ್ನು ಅಳೆದು ಮುನ್ನೆಚ್ಚರಿಕೆ ಸಂದೇಶಗಳನ್ನು ಎಲ್ಲೆಡೆ ಬಿತ್ತರಿಸಲಾರಂಭಿಸಿದವು. ಇದು ಪ್ರಾಥಮಿಕ ಭೂಕಂಪನ ಅಲೆಗಳು ಆರಂಭವಾದ ಕೇವಲ 2 ಸೆಕೆಂಡುಗಳಲ್ಲಿ ಮುನ್ನೆಚ್ಚರಿಕೆ ಸಂದೇಶಗಳನ್ನು ರವಾನಿಸುತ್ತದೆ. ಇವು ಟಿವಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುತ್ತವೆ. ಈ ವ್ಯವಸ್ಥೆ ನಿರ್ವಹಣೆಗೆ ಬಹಳ ಹಣ ವ್ಯಯವಾಗುತ್ತದೆ.

ಇಂಥದೇ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಜಪಾನ್ ನಂತರ ಮೆಕ್ಸಿಕೋ ದೇಶವು ಅಳವಡಿಸಿಕೊಂಡಿತು. ನಂತರ ತೈವಾನ್ & ಟರ್ಕಿ ದೇಶಗಳು ಇದನ್ನು ಅಳವಡಿಸಿಕೊಳ್ಳಲು ಮುಂದಾಗಿವೆ. ಆದರೆ 2004ರಲ್ಲಿ ಜಪಾನಿನ ನಿಗಾಟ

ಪುಟ 12ಕ್ಕೆ

ಕವಿತೆ ಓದೋಣ ಬನ್ನಿ

ಓದ ಬನ್ನಿ
ಕವಿತೆ
ಹ್ಞಾಂ, ಹಾಗೆ
ಇನ್ನೂ ಗಟ್ಟಿಯಾಗಿ

ಈ ತಣ್ಣನೆಯ ತನುಗಳಲಿ
ಒಂದಷ್ಟು ರಕ್ತ ಸಂಚರಿಸಿ
ಮೈ ಬಿಸಿಯೇರಿ
ಮೂಗಿನ ಹೊಳ್ಳೆಗಳು ಉಸಿರಾಡಿ
ಬಿದ್ದುಹೋದ ಕೈ
ಕಾಲುಗಳಲ್ಲಿ ಚೈತನ್ಯ ಮೂಡಿ
ಪಿಸುರುಗಟ್ಟಿದ ಕಣ್ಣುಗಳು
ಮೆಲ್ಲಗೆ ತೆರೆದುಕೊಂಡು
ಸುತ್ತಲೂ ನೋಡಿ ಹೆದರದೆ
ಪಸೆಯಾರಿದ ಗಂಟಲಲಿ
ದನಿ ಗುಡುಗಾಗಿ
ನಿಶ್ಶಕ್ತ ಮುಂಗೈ ಮುಷ್ಟಿ ಬಿಗಿಹಿಡಿದು
ಪಶ್ಚಿಮದಿ
ಎಂದೋ ಮುಳುಗಿ ಹೋದ
ನಿಗಿ ನಿಗಿ ಉರಿವ ಸೂರ್ಯನನು
ಮುಂದಲೆಯ ಕೂದಲು ಹಿಡಿದು
ಜರಜರನೆ ಎಳೆದು ತಂದು
ಮಾರಿ ತೊಳೆದು
ಹೋರಾಟದ ಅಂಗಳಕೆ ನಿಲ್ಲಿಸಬೇಕಿದೆ

ನಾನು
ನೀವು
ಮತ್ತು 'ಅವರು'
ಬದುಕುವುದಕ್ಕೆ ಲಾಯಕ್ಕು ಎನ್ನಿಸಬೇಕಿದೆ

ಆಗಲೂ ಸಾಧ್ಯವಾಗದಿದ್ದರೆ???

'ಥೂ! ಹೆಣಗಳು'
ಎಂದೊದರಿ ಈ ಕವಿತೆಯೂ
ನಮ್ಮಂತೆಯೇ ಉದ್ದಕ್ಕೆ
ಹೊದ್ದುಕೊಂಡು ಮಲಗಿಬಿಡಬಹುದು
ಗಣಿ ಗೋರಿಗಳೊಳಗೆ
ಆಗ ಎಚ್ಚರಿಸಲು
ಈ ಕವಿತೆಯೂ ಇರುವುದಿಲ್ಲ!

ವಿ.ಹರಿನಾಥ ಬಾಬು,
ಗಂಗಾವತಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor : S.Y.GURUSHANTH